# ಸಂತಾಪ ಸೂಚನೆಗಳು

ಅಧ್ಯಕ್ಷರು:– ಭೂಸೇನೆಯ ಮಹಾದಂಡನಾಯಕರಾಗಿದ್ದ ಜನರಲ್ ಬಿಪಿನ್ ಚಂದ್ರ ಜೋಷಿ, ವಿಧಾನ ಪರಿಷತ್ತಿನ ಹಾಲಿ ಸದಸ್ಯರಾದ ಶ್ರೀ ಚಂದ್ರಶೇಖರ್ ಸಿ. ಮಟ್ಟಿ, ವಿಧಾನ ಸಭೆಯ ಮಾಜಿ ಸದಸ್ಯರಾದ ಡಾ. ಹೆಚ್.ಎಲ್. ತಿಮ್ಮೇಗೌಡ, ಜಿ. ದುಗ್ಗಪ್ಪ, ಬಿ.ಎ. ಉಪ್ಪಿನ್, ವಿಧಾನಸಭೆಯ ಮಾಜಿ ಸದಸ್ಯರಾದ ಕೆ. ಕೃಷ್ಣಮೂರ್ತಿ ಅವರುಗಳು ನಿಧನರಾದುದನ್ನು ವಿಷಾದದಿಂದ ಈ ಸದನಕ್ಕೆ ತಿಳಿಸುತ್ತಿದ್ದೇನೆ.

1. ರಾಷ್ಟ್ರದ ಭೂಸೇನಾ ಮಹಾದಂಡನಾಯಕರಾದ ಜನರಲ್ ಬಿಪಿನ್ ಚಂದ್ರ ಜೋಷಿ ಅವರು ದಿನಾಂಕ 18.11.1994 ರಂದು ವಿಧಿವಶರಾಗಿದ್ದಾರೆ.

ಶ್ರೀಯುತರು 1993ನೇ ಇಸವಿಯಲ್ಲಿ ಭೂಸೇನೆಯ ಮಹಾದಂಡನಾಯಕರಾಗಿ ಅಧಿಕಾರ ಸ್ವೀಕರಿಸಿದ್ದರು. ಸೇನೆಯಲ್ಲಿ ಕಟ್ಟುನಿಟ್ಟಿನ ಅಧಿಕಾರಿಯಾಗಿದ್ದರು. ಕೆಲಕಾಲ ರಾಜತಾಂತ್ರಿಕ ಕೆಲಸದ ನಿಮಿತ್ತ ವಿದೇಶಗಳಲ್ಲಿಯೂ ಸಹ ಸೇವೆ ಸಲ್ಲಿಸಿರುತ್ತಾರೆ. 1982ರಲ್ಲಿ 'ಅತಿ ವಿಶಿಷ್ಟ ಸೇವಾ' ಪದಕ ಹಾಗೂ 1991ರಲ್ಲಿ 'ಪರಮ ವಿಶಿಷ್ಟ ಸೇವಾ' ಪದಕವನ್ನು ಪಡೆದು ರಾಷ್ಟ್ರಸೇವೆ ಗೈದಿರುತ್ತಾರೆ.

2. ವಿಧಾನ ಪರಿಷತ್ತಿನ ಹಾಲಿ ಸದಸ್ಯರಾದ ಶ್ರೀ ಚಂದ್ರಶೇಖರ್ ಸಿ. ಮಟ್ಟಿ ಅವರು ದಿನಾಂಕ 26.10.1994ರಂದು ನಿಧನರಾದರು.

ಶ್ರೀಯುತರು ವಿಧಾನ ಪರಿಷತ್ತಿಗೆ ನಾಮಕರಣ ಸದಸ್ಯರಾಗಿ ದಿನಾಂಕ 28ನೇ ಜುಲೈ, 1992ರಂದು ನೇಮಕಗೊಂಡಿದ್ದರು. ಕರ್ನಾಟಕ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿಯೂ ತಮ್ಮ ಕಾರ್ಯ ನಿರ್ವಹಿಸಿರುತ್ತಾರೆ.

3. ವಿಧಾನಸಭೆಯ ಮಾಜಿ ಸದಸ್ಯರಾದ ಡಾ. ಹೆಚ್.ಎಲ್ ತಿಮ್ಮೇಗೌಡ ಅವರು ದಿನಾಂಕ 26–12–1994 ರಂದು ನಿಧನರಾದರು.

ಶ್ರೀಯುತರು ಆರನೆಯ ವಿಧಾನಸಭೆಗೆ ಬಸವನಗುಡಿ ಕ್ಷೇತ್ರದಲ್ಲಿ ನಡೆದ ಉಪಚುನಾವಣೆಯಲ್ಲಿ ಆಯ್ಕೆಯಾಗಿದ್ದರು. ಏಳನೆಯ ವಿಧಾನಸಭೆಗೆ ಬಸವನಗುಡಿ ಕ್ಷೇತ್ರದಿಂದ ಹಾಗೂ ಎಂಟನೆಯ ವಿಧಾನಸಭೆಗೆ ಹುಣಸೂರು ಕ್ಷೇತ್ರದಿಂದಲೂ ಆಯ್ಕೆಯಾಗಿದ್ದರು. ಶ್ರೀಯುತರು ಶ್ರೀ ರಾಮಕೃಷ್ಣಹೆಗಡೆಯವರು ಮಂತ್ರಿಮಂಡಲದಲ್ಲಿ ಆರೋಗ್ಯ ಸಚಿವರಾಗಿದ್ದರು ಹಾಗೂ ನೀರಾವರಿ ಸಲಹಾ ಮಂಡಲಿಯ ಅಧ್ಯಕ್ಷರಾಗಿ, ಕರ್ನಾಟಕ ಗೃಹ ಮಂಡಳಿಯ ಅಧ್ಯಕ್ಷರಾಗಿ ಹುಣಸೂರು ತಾಲೂಕು ಮಂಡಳಿಯ ಅಧ್ಯಕ್ಷರಾಗಿ, ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿ ವಿವಿಧ ರೀತಿಯಲ್ಲಿ ಸೇವೆ ಸಲ್ಲಿಸಿರುತ್ತಾರೆ.

4. ವಿಧಾನಸಭೆಯ ಮಾಜಿ ಸಚಿವರಾದ ಶ್ರೀ ಜಿ. ದುಗ್ಗಪ್ಪನವರು ದಿನಾಂಕ 2–11–1994ರಂದು ನಿಧನರಾದರು.

ಶ್ರೀಯುತರ ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೆಯ ವಿಧಾನಸಭೆಗೆ ಚಿತ್ರದುರ್ಗ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಚಿತ್ರದುರ್ಗ ಜಿಲ್ಲಾ ಮಂಡಳಿ ಸದಸ್ಯರಾಗಿ, ಚಿತ್ರದುರ್ಗ ತಾಲ್ಲೂಕಿನ ಎಂ.ಸಿ.ಸಿ.ಯ ಸದಸ್ಯರಾಗಿ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಿಗಿಯೂ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

5.ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಬಿ.ಎ. ಉಪ್ಪಿನ್‌ರವರು ದಿನಾಂಕ 29-11-1994ರಂದು ನಿಧನರಾದರು.

ಶ್ರೀಯುತರು ಧಾರವಾಡ ಜಿಲ್ಲೆಯ ಕುಂದಗೋಳ ಕ್ಷೇತ್ರದಿಂದ ಎಂಟನೇ ವಿಧಾನಸಭೆಗೆ ಆಯ್ಕೆಯಾಗಿದ್ದರು ಹಾಗೂ ಸಂಶಿಯ ಪಂಚಾಯತ್ ಸಮಿತಿ ಅಧ್ಯಕ್ಷರಾಗಿ, ಸಂಶಿಯ ವಿವೇಕಾನಂದ ಯುವಕ ಸಂಘದ ಅಧ್ಯಕ್ಷರಾಗಿ, ಸ್ಕೂಲ್ ಸಲಹಾ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ.

6. ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ. ಕೃಷ್ಣಮೂರ್ತಿ ಅವರು ದಿನಾಂಕ 14-11-1994ರಂದು ನಿಧನರಾದರು.

ಶ್ರೀಯುತರು ಎಂಟನೇ ವಿಧಾನಸಭೆಗೆ ರಾಯಚೂರು ಜಿಲ್ಲೆಯ ಕಲ್ಮಲಾ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಹಾಗೂ ಶ್ರೀ ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿ ಏತ ನೀರಾವರಿ ಖಾತೆಯ ರಾಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಮತ್ತೊರ್ವ ಗಣ್ಯವಕ್ತಿ ಶ್ರೀ ಸಿ.ಜಿ.ಕೆ ರೆಡ್ಡಿಯವರು ನಮ್ಮನ್ನು ಅಗಲಿದ್ದಾರೆ. ಅವರು ಮಾಜಿ ರಾಜ್ಯಸಭಾ ಸದಸ್ಯರು ಮತ್ತು ಸಾರ್ವಜನಿಕ ಬದುಕಿನಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನ ಗಳಿಸಿಕೊಂಡಿದ್ದು, ನಮಗೆ ತುಂಬಲಾರದ ನಷ್ಟವನ್ನುಂಟು ಮಾಡಿ ಅಗಲಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಯವರು ನಮ್ಮೆಲ್ಲರ ಹೆಮ್ಮೆಯ ರಾಷ್ಟ್ರಕವಿ ಕುವೆಂಪುರವರ ನಿಧನರಾದ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸುವರು.

† ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯಂತೆ ರಾಷ್ಟ್ರಕವಿ ಕುವೆಂಪುರವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಇಚ್ಛೆಪಡುತ್ತೇನೆ.

ಕವಿತಾ ಗುಣಾರಾರ್ಣವ, ರಸಋಷಿ, ಯುಗದ ಕವಿ ಜಗದ ಕವಿ, ಕರ್ನಾಟಕ ರತ್ನ ಕುವೆಂಪುಯೆಂದೇ ಪ್ರಖ್ಯಾತರಾದ ಡಾ. ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಇಂದು ನಮ್ಮೊಂದಿಗಿಲ್ಲ. ನಿತ್ಯಹರಿದ್ವರ್ಣದ, ಮಲೆನಾಡಿನ ಅರಣ್ಯ ಪರಿಸರದಿಂದ ಮೂಡಿ ಬಂದ ಈ ನಾಡೋಜ, ರಾಷ್ಟ್ರ ಕಂಡ ಅಪೂರದ ಅನರ್ಘ್ಯ ರತ್ನ. ''ಕೀರ್ತಿಶನಿ ತೊಲಗಾಚೆ'' ಯೆಂದು ಸಾರಿ, ದಿವ್ಯ ನಿರ್ಲಕ್ಷತೆಯ ಈ ವರಕವಿಯನರಸಿ, ಬಂದ ಪ್ರಶಸ್ತಿಗಳ ಮಹಾಪೂರಕ್ಕೆ ಕೊನೆಯೇ ಇರಲಿಲ್ಲ.

''ಮನುಷ್ಯ ಜಾತಿ ತನೊಂದೆ ವಲಂ'' ಎಂದು ಸಾರಿದ ಆದಿಕವಿ ಬನವಾಸಿಯ ಪಂಪನ ಪರಂಪರೆಯ ''ಮನುಜ ಮತ ವಿಶ್ವಪಥ'' ಎಂದು ಸಂದೇಶಕೊಟ್ಟ ಮಲೆನಾಡಿನ ಕುವೆಂಪು ''ಪಂಪನಿಂದ ಕುವೆಂಪು'' ವರಿಗೆಯೆನ್ನುವ ಕನ್ನಡ ಸಾಹಿತ್ಯ ಸಂದರ್ಭದ ನಾಣ್ನುಡಿಯಾಗಿದೆ. ಬನವಾಸಿಯ ಮರಿದುಂಬಿಯಾಗಿ ಬದುಕಲು ಬಯಸಿದ ಪಂಪನಂತೆ, ಮಲೆನಾಡಿನ ಕೋಗಿಲೆಯಾದ ಕುವೆಂಪು ಕನ್ನಡ ಸಾರಸ್ವತಲೋಕ ಸಾಗಿ ಬಂದ ಸೀಮಾ ರೇಖೆಯನ್ನು ಸೂಚಿಸುತ್ತವೆ. ಆದುದರಿಂದ ಕರ್ನಾಟಕ ಸರ್ಕಾರ ಸ್ಥಾಪಿಸಿದ ''ಪಂಪ'' ಪ್ರಶಸ್ತಿಯನ್ನು ಪ್ರಪ್ರಥಮವಾಗಿ ಪಡೆದ ಗೌರವ ಇವರದು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕ್ರಾಂತಿ ಕಹಳೆಯನೂದಿ ಪ್ರತಿಭಟನೆಯ ಧ್ವನಿಯಾಗಿ, ರಚಿಸಿದ ಅವರ ಸಾಹಿತ್ಯ ಇಂದಿಗೂ ನಮ್ಮೆಲ್ಲರಿಗೆ ರೋಮಾಂಚವನ್ನುಂಟು ಮಾಡುತ್ತದೆ. ಸಮಾನತೆಯಿಲ್ಲದ ಸ್ವಾತಂತ್ರ್ಯ ಅರ್ಥಹೀನ ಬಿಳಿಯನ ಬದಲು ಕರಿಯನುನ ಆಳುವುದು, ಬದಲಾವಣೆಯಿಲ್ಲವೆಂದು ಸಮಾನತೆಯ ಸ್ವಾಭಿಮಾನದ ಕೆಚ್ಚನ್ನು ಮೂಡಿಸಿದ ಮಹಾಕವಿ ಕುವೆಂಪು. 'ಬಾರಿಸು ಕನ್ನಡ ಡಿಂಡಿಮ ಕರ್ನಾಟಕದ ಹೃದಯ ಶಿವ' ಎಂದು ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ, ಎಲ್ಲಾದರೂ ಇರು ಎಂತಾದರೂ ಇರು. ನೀ ಎಂದೆಂದಿಗೂ ಕನ್ನಡವಾಗಿರೆಂದು, ಕನ್ನಡದ ಪರದನಿಯೆತ್ತಿ ಕನ್ನಡಿಗರಲ್ಲಿ ಸ್ವಾಭಿಮಾನದ ಕಿಚ್ಚನಚ್ಚಿದ ವರಕವಿ.

ಮಹಾಕಾವ್ಯಗಳ ಕಾಲ ಮುಗಿದು ಹೋಗಿದೆಯೆಂದಾಗ, "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯವನ್ನು ರಚಿಸಿ, ಭಾರತ ಮಾತ್ರವಲ್ಲ, ಜಾಗತಿಕ ಮಹಾಕಾವ್ಯ, ಪರಂಪರೆಗೆ, ಹಿರಿಯ ಕೊಡುಗೆಯನ್ನುತ್ತು ವಿಭೂತಿಪುರುಷ, ಸರ್ವೋದಯ, ಸಮನ್ವಯ ಹಾಗೂ ಪೂರ್ಣದೃಷ್ಟಿಯ ದರ್ಶನವನ್ನು ಅನನ್ಯವಾಗಿ ಪ್ರತಿಪಾದಿಸಿದ ಈ ಕಾವ್ಯ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅವಿರ್ಭವೆನಿಸಿದ ಶ್ರೇಷ್ಠ ಕವಿ. ಋಷಿ ವಾಲ್ಮೀಕೀಯ ಕಲ್ಪನೆಗಿಂತ ಮಿಗಿಲಾಗಿ ರಾಮಾಯಣ ಕಾವ್ಯ ಸಮಕಾಲೀನಗೊಳಿಸಿ ಪ್ರಸ್ತುತಕ್ಕೆ ಸ್ಪಂದಿಸುವ ಚಮತ್ಕಾರ ಅನನ್ಯ, ಅನುಪಮ. ಇಂತಹ ಮಹಾಕಾವ್ಯವನ್ನು ರಚಿಸಿದ ಕವಿಯೆ, 'ಕಾನೂರು ಹೆಗ್ಗಡತಿ' 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳನ್ನು ಬರೆದು ಮಲೆನಾಡಿನ ಸಾಮಾನ್ಯರಾದ ಈತ-ಪಿಂಚಲು 'ರಂತ ತೋಟದಾಳುಗಳು 'ನಾಯಿಗುತ್ತಿ' ಯಂತ ಪ್ರಾಣಿ ಅಮರವಾಗುವಂತೆ ಚಿತ್ರಿಸಿದ ಕುಶಲಕರ್ಮಿ ಕುವೆಂಪು.

ರಾಮಕೃಷ್ಣ ಪರಮಹಂಸ ಹಾಗೂ ಸ್ವಾಮಿ ವಿವೇಕಾನಂದ ಪ್ರಭಾವದಿಂದ ಬದುಕನ್ನು ರೂಪಿಸಿಕೊಂಡು ಪುಟ್ಟಪ್ಪನವರು, ವಾಸ್ತವತೆಯಿಂದ ದೂರಸರಿಯದೆ, ತಮ್ಮ ಸುತ್ತಮುತ್ತಲು ನಡೆಯುತ್ತಿದ್ದ ಅನ್ಯಾಯ ಹಾಗೂ ಶೋಷಣೆಯ ವಿರುದ್ಧ ಪ್ರತಿಭಟಿಸುತ್ತಾ 'ಜಗದ ಜಲಗಾರ' ನಾಗಿ ಕೆಲಸ ಮಾಡಿದ "ಶೂದ್ರ ತಪಸ್ವಿ" ಅನಂತಾನಂತವಾಗಿ ಅನಿಕೇತನವಾದ ಈ ಚೇತನ ಇಂದಿಲ್ಲದಿದ್ದರೂ ನಮ್ಮನ್ನು ನಮ್ಮ ನಾಡನ್ನು ಸದಾ ಬೆಳಗಿಸುವ ಧ್ರುವತಾರೆ.

ಸತ್ವದಲ್ಲಿ ಸಾಧನೆಯಲ್ಲಿ ಕನ್ನಡ ನಾಡಿನ ಸಂಚಿತ ವಿವೇಕ ಹಾಗೂ ಸಂಸ್ಕೃತಿಗೆ ಹೊಸ ತಿರುವು ಆಯಾಮ ಹಾಗೂ ಘನತೆಯನ್ನು ತಂದುಕೊಟ್ಟ ತಮ್ಮದೇ ಆದ ವಿಶಿಷ್ಟ ವ್ಯಕ್ತಿತ್ವವನ್ನು ಬೆಳೆಸಿಕೊಂಡ, ಸತ್ವಸಂಪನ್ನ, ದಾರ್ಶನಿಕ, ರಸಋಷಿ, ವಿಭೂತಿಪುರುಷ, ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಇವರ ಅಗಲುವಿಕೆಗೆ ಈ ಸದನ ಅತೀವ ಶೋಕವನ್ನು ವ್ಯಕ್ತಪಡಿಸುತ್ತಾ ಅವರ ದಿವ್ಯ ಸ್ಮರಣೆಯನ್ನು ದಾಖಲಿಸುತ್ತದೆ. ವಿಶ್ವ ಚೈತನ್ಯದಲ್ಲಿ ಲೀನವಾದ ಅವರ ಆತ್ಮಕ್ಕೆ ಚಿರಶಾಂತಿನ್ನು ಕೋರುತ್ತಾ, ಅವರ ಅಗಲುವಿಕೆಯ ನೋವನ್ನು ಭರಿಸಲು ಅವರ ಕುಟುಂಬದವರಿಗೆ ಭಗವಂತನು ಶಕ್ತಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತನೆ.

ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ನಿರ್ಣಯವನ್ನು ಈ ಸಭೆಯ ಮುಂದೆ ಮಂಡನೆ ಮಾಡತಕ್ಕ ಕಾಲದಲ್ಲಿ ಭಾರವಾದ ಹೃದಯದಿಂದ ನಮ್ಮನ್ನು ಆಗಲಿಹೋದ ಮಹಾನ್ ಚೇತನ ರಾಷ್ಟ್ರಕವಿ ಕುವೆಂಪುರವರ ಬಗ್ಗೆ ನಾಲ್ಕು ಮಾತುಗಳನ್ನು ನಾನು ಈ ಸಂದರ್ಭದಲ್ಲಿ ಆಡಲಿಕ್ಕೆ ಇಷ್ಟಪಡುತ್ತೇನೆ. ಅದೇ ಸಂದರ್ಭದಲ್ಲಿ ಯಾವ ಕೆಲವು ಸನ್ಮಿತ್ರರು ಈ ಸದನದ ಸದಸ್ಯರಾಗಿ ನಮ್ಮೊಟ್ಟಿಗೆ ಕೆಲಸ ಮಾಡಿ ನಮ್ಮನ್ನು ಅಗಲಿ ಹೋಗಿದ್ದಾರೆ ಅವರ ಬಗ್ಗೆ ತಾವು ಏನು ಸಂತಾಪಸೂಚನಾ ನಿರ್ಣಯದಲ್ಲಿ ಪ್ರಸ್ತಾಪ ಮಾಡಿದ್ದೀರಿ ಅವರ ಬಗ್ಗೆ ನಾಲ್ಕು ಶಬ್ದಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ರಾಷ್ಟ್ರಕವಿ ಕುವೆಂಪು ಅವರ ಬಗ್ಗೆ ವರ್ಣನೆ ಮಾಡತಕ್ಕದ್ದು ಬಹಳ ಕಷ್ಟ. ನಾನು ಈ ಸಂದರ್ಭದಲ್ಲಿ ಒಂದೇ ಒಂದು ಶಬ್ದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೊಬ್ಬ ಅಂಥ ವ್ಯಕ್ತಿ ಈ ನಾಡಿನಲ್ಲಿ ಹುಟ್ಟಿಬರಲಾರ ಎಂಬುದು ನನ್ನ ಪ್ರಾಮಾಣಿಕ ಅನಿಸಿಕೆ. ಈ ಮಾತನ್ನು ಹೇಳತಕ್ಕ ಕಾಲದಲ್ಲಿ ಯಾವುದೇ ರೀತಿಯಾದಂಥ ಉತ್ಪ್ರೇಕ್ಷೆಯಿಂದ ಹೇಳುತ್ತಿಲ್ಲ. ನೊಂದ ಹೃದಯದಿಂದ ಈ ಮಾತನ್ನು ಹೇಳುತ್ತೇನೆ. ಮತ್ತೊಬ್ಬ ಮಣ್ಣಿನ ಮಗ ಆ ಮುಗಿಲೆತ್ತರಕ್ಕೆ ಬೆಳೆದಂಥ ವ್ಯಕ್ತಿ ಹುಟ್ಟಿಬರಲಾರ ಎಂಬ ಮಾತನ್ನು ಪುನಃ ಪ್ರತಿಪಾದನೆ ಮಾಡಿ ಆ ವ್ಯಕ್ತಿ ಸಾಮಾನ್ಯವಾದ ಹಳ್ಳಿಯಲ್ಲಿ ಹುಟ್ಟಿ ಬಂದ ಅದರಲ್ಲೂ ಮಲೆನಾಡಿನ ಒಂದು ಪರಿಸರದಲ್ಲಿ ಹುಟ್ಟಿಬಂದಂಥ ವ್ಯಕ್ತಿ ಈ ರಾಷ್ಟ್ರದ, ಅಷ್ಟೇ ಏಕೆ ವಿಶ್ವದ ಎಲ್ಲರ ಗಮನವನ್ನು ಸೆಳೆಯತಕ್ಕ ಅತ್ಯಂತ ಶ್ರೇಷ್ಠ ವ್ಯಕ್ತಿಯಾಗಿ ಕೀರ್ತಿಯನ್ನು ತಂದುಕೊಟ್ಟಂಥ ಮಹಾಪುರುಷ ಇವತ್ತು ನಮ್ಮನ್ನು ಅಗಲಿಹೋಗಿದ್ದಾರೆ. ಅವರು ಗಳಿಸಿದಂಥ ಪ್ರಶಸ್ತಿಗಳು ಹತ್ತು ಹಲವಾರು

ಇರಬಹುದು. ಈ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಗೌರವ ಪದವಿಯನ್ನು ಪಡೆದುಕೊಂಡಂಥ ಏಕೈಕ ಕನ್ನಡಿಗ ಮತ್ತೊಬ್ಬರು ಇಲ್ಲ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅದರ ಜೊತೆಗೆ ರಾಷ್ಟ್ರದ ಒಂದು ವಿಶೇಷ ಪ್ರಶಸ್ತಿಯಾದ ಪದ್ಮಭೂಷಣ ಪ್ರಶಸ್ತಿಯನ್ನು ಸಾಹಿತ್ಯ ಜಗತ್ತಿನಲ್ಲಿ ಅವರು ಸಲ್ಲಿಸಿದ ಸೇವೆಯನ್ನು ಗಮನಿಸಿ ಕೇಂದ್ರ ಸರ್ಕಾರ ಕೊಟ್ಟಿದ್ದನ್ನು ನಾವು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು. ಅವರ ಬಗ್ಗೆ ಮಾತನಾಡುವುದಕ್ಕೆ, ನಾನು ಮೊದಲೇ ಹೇಳಿದ್ದೇನೆ, ಹತ್ತು ಹಲವಾರು ಘಟನೆಗಳನ್ನು ನಾವು ಈ ಸಂದರ್ಭದಲ್ಲಿ ಉಲ್ಲೇಖ ಮಾಡಬಹುದು. ಜ್ಞಾನಪೀಠ ಪ್ರಶಸ್ತಿಯನ್ನು ದೊರಕಿಸಿಕೊಂಡಂಥ ಮೊದಲನೆಯ ಕನ್ನಡಿಗ ಶ್ರೀಮಾನ್ ಕುವೆಂಪು ಅವರು. ಅವರು ಬರೆದಂಥ ರಾಮಾಯಣ ದರ್ಶನ ಬಹುಶಃ ವಾಲ್ಮೀಕೀ ಬರೆದಂಥ ರಾಮಾಯಣ ದರ್ಶನಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಜನತೆಯ ಮುಂದೆ ಅಮೂಲ್ಯವಾದ ಗ್ರಂಥವನ್ನು ಬಿಟ್ಟುಹೋಗಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಅವರು ಬರೆದಂಥ ನಾಟಕಗಳು ಮತ್ತು ಕಾವ್ಯಗಳು ಜನಸಾಮಾನ್ಯರಿಗೆ ಸುಲಭ ದರದಲ್ಲಿ, ಸುಲಭ ಬೆಲೆಯಲ್ಲಿ ಒದಗಿಸುವುದಕ್ಕೆ ಇವತ್ತು ನಿರ್ಣಯವನ್ನು ತೆಗೆದುಕೊಳ್ಳುವವರಿದ್ದೇವೆ. ತೆಗೆದುಕೊಳ್ಳತಕ್ಕಂತಹ ನಿರ್ಣಯವನ್ನು ಮಾಡುವವರಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ.

**1.25 ಪಿ.ಎಂ.**

ಹಿಂದಿನ ಸರ್ಕಾರ ಕೂಡಾ 'ಕಿಂದರ ಜೋಗಿ' ಮಕ್ಕಳಿಗೆ ಸ್ವಲ್ಪಮಟ್ಟಿಗೆ ಹೆಚ್ಚು ಉಪಯುಕ್ತ ಆಗತಕ್ಕ ಗ್ರಂಥವನ್ನು ಸುಲಭ ದರದಲ್ಲಿ ಕೊಡಬೇಕೆಂದು ಒಂದು ನಿರ್ಣಯವನ್ನು ಮಾಡಿದ್ದರು ಎಂದು ಕೇಳಿದ್ದೇನೆ. ಆದರೆ ಆ ನಿರ್ಣಯವನ್ನು ಜಾರಿಗೆ ಕೊಡಲಿಕ್ಕೆ ಆಗಲಿಲ್ಲ. ಆ ಒಂದು ಹಿಂದಿನ ಸರ್ಕಾರದ ನಿರ್ಣಯವನ್ನೂ ಕೂಡ ಜಾರಿಗೆ ಕೊಡುವುದರ ಜೊತೆಗೆ ಅವರ ಹೆಸರಿನಲ್ಲಿ ಅವರು ಏನು ತೀರ್ಥಹಳ್ಳಿ ತಾಲ್ಲೂಕಿನ ಕವಿಶಿಲ್ಪ ಗ್ರಾಮದಲ್ಲಿ ಅವರು ಹುಟ್ಟಿದ್ದಾರೋ ಅಲ್ಲಿ ಒಂದು ಸಾಂಸ್ಕೃತಿಕ ಕೇಂದ್ರವನ್ನು ಆಗಿ ಪರಿವರ್ತನೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸರ್ಕಾರದ ವತಿಯಿಂದ ತಿಳಿಸಿ ಅವರ ಸುಪುತ್ರರಾದ, ಅವರ ಪರಂಪರೆಯಲ್ಲೇ ತಮ್ಮನ್ನು ತಾವು ರೂಢಿಸಿಕೊಂಡಂತಹ ಅತ್ಯಂತ ಪ್ರತಿಭಾನ್ವಿತ ಕವಿ, ಪರಿಸರವಾದಿ ಹಾಗೂ ನಮ್ಮ ಆತ್ಮೀಯ ಸ್ನೇಹಿತರಾದ ಪೂರ್ಣಚಂದ್ರ ತೇಜಸ್ವಿಯವರನ್ನು ಕರೆಯಿಸಿ ಅವರ ಜೊತೆ ಸಮಾಲೋಚನೆ ಮಾಡಿ, ಅನೇಕ ಜನ ಈ ರಾಜ್ಯದ ಹಿರಿಯ ಸಾಹಿತಿಗಳು, ದಿಗ್ಗಜಗಳು ಏನಿಸಿದ್ದಾರೆ. ಅವರೆಲ್ಲರ ಜೊತೆ ಸಮಾಲೋಚನೆ ಮಾಡಿ ಒಂದು ಶಾಶ್ವತವಾದ ಸ್ಮಾರಕವನ್ನು ಹಿರಿಯರು ಕೊಟ್ಟಂತಹ ಸಲಹೆಯಿಂದ ಅವರ ಸುಪುತ್ರರ ಜೊತೆ ಚರ್ಚೆ ಮಾಡಿ ಅವರು ಕೊಡುವ ಸಲಹೆಯನ್ನು ಸರ್ಕಾರ ಗಮನಿಸಿ, ಅವರ ಹೆಸರು ಚಿರಸ್ಥಾಯಿಯಾಗಿ ಉಳಿಯಬೇಕು. ಅಂತಹ ಒಂದು ಸ್ಮಾರಕವನ್ನು ಮಾಡತಕ್ಕಂಥದ್ದರ ಬಗ್ಗೆ ಶೀಘ್ರವಾಗಿ ಸರ್ಕಾರ ಒಂದು ನಿರ್ಣಯವನ್ನು ಮಾಡುತ್ತದೆ ಎನ್ನುವ ಮಾತನ್ನು ಈ ಸದನದಲ್ಲಿ ತಿಳಿಸಿ, ಅಂತಹ ಒಂದು ದಿವ್ಯ ಚೇತನ ಏನು ನಮ್ಮನ್ನಗಲಿ ಹೋಗಿದ್ದಾರೆ ಅವರ ಆತ್ಮಕ್ಕೆ ಭಗವಂತ ಚಿರಶಾಂತಿಯನ್ನು ದಯಪಾಲಿಸಲಿ ಎಂದು ನಾನು ಪ್ರಾರ್ಥನೆ ಮಾಡಿ, ಅದರ ಜೊತೆಗೆ ನಮ್ಮನ್ನು ಅಗಲಿ ಹೋಗಿರತಕ್ಕಂತಹ ಈ ಸದನದ ಹಲವಾರು ಸನ್ಮಿತ್ರರು ಎಂದಿದ್ದಾರೆ. ಅದರಲ್ಲಿ ಡಾ. ಹೆಚ್.ಎಲ್. ತಿಮ್ಮೇಗೌಡರು ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. ನಾನು ಈ ಸಂದರ್ಭದಲ್ಲಿ ಆ ಮಾತನ್ನು ಹೇಳುವಾಗ ಅತ್ಯಂತ ದುಃಖದಿಂದ ಹೇಳಬೇಕಾಗುತ್ತದೆ. ನನ್ನ ಮತ್ತು ಅವರ ಬಾಂಧವ್ಯ ಸುಮಾರು ಮೂವತ್ತು ವರ್ಷಗಳದ್ದು ಬಹುಶಃ ಈ ಮಾತನ್ನು ಹೇಳುವಾಗ ನನ್ನ ಕಷ್ಟ ಮತ್ತು ಸುಖದ ದಿನಗಳೆರಡರಲ್ಲೂ ಎಲ್ಲಾ ಸಂದರ್ಭದಲ್ಲಿಯೂ ನನ್ನ ಜೊತೆ ಎಲ್ಲವನ್ನೂ ಅನುಭವಿಸಿದಂತಹ ಒಬ್ಬ ಹಿರಿಯ ಸಹೋದ್ಯೋಗಿಗಳು. ಒಂದು ಮಾತನ್ನು ಹೇಳಿದರೆ ಯಾರೂ ಅನ್ಯಥಾ ಭಾವಿಸಿಕೊಳ್ಳಬಾರದು. ನನಗೆ ನನ್ನ ಹಿರಿಯ ಅಣ್ಣನೋಪಾದಿಯಲ್ಲಿ ಇದ್ದಂತಹ ವ್ಯಕ್ತಿ. ಮೊನ್ನೆ ಚುನಾವಣೆ ಮುಗಿದ ಫಲಿತಾಂಶ ಬಂದ ಮೊದಲ ದಿನದ ರಾತ್ರಿ ಮೂರೂವರೆ ಗಂಟೆ ರಾತ್ರಿ ನಮ್ಮ

ಮನೆಗೆ ಬಂದು ನನಗೆ ಅವರ ಅಭಿನಂದನೆಗಳನ್ನು ಸಲ್ಲಿಸಿದರು. ಅದೇ ದಿನ ಸಾಯಂಕಾಲ ಐದೂವರೆ ಗಂಟೆಗೆ ವಿಧಿಯ ಆಟ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಪ್ರಜ್ಞಾಹೀನ ಸ್ಥಿತಿಯಲ್ಲಿ ಅವರು ಇರುವುದನ್ನು ನಾನು ನೋಡಿದೆವು. ಆದರೆ ನಮ್ಮ ಕೈಲಾದ ಎಲ್ಲಾ ಪ್ರಯತ್ನಗಳನ್ನು ನಾವು ಮಾಡಿದೆವು. ವಿಧಿಯ ಆಟಕ್ಕೆ ಎಲ್ಲರೂ ತಲೆಬಾಗಲೇಬೇಕಾಗುತ್ತದೆ. ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಒಬ್ಬ ನಿಷ್ಠಾವಂತ, ಪ್ರಾಮಾಣಿಕ ಸ್ವಾತಂತ್ರ್ಯ ಹೋರಾಟದಲ್ಲಿ ತನ್ನದೇ ಆದಂತಹ ಒಂದು ಸೇವೆಯನ್ನು ಸಲ್ಲಿಸಿದಂತಹ ಒಬ್ಬ ಅತ್ಯಂತ ಯೋಗ್ಯ, ಪ್ರಾಮಾಣಿಕ ರಾಜಕಾರಣಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ನಮ್ಮನ್ನು ಅಗಲಿ ಹೋಗಿರತಕ್ಕ ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕೊಡಲಿ ಎಂದು ಹೇಳಿ ನಾನು ಪ್ರಾರ್ಥಿಸುತ್ತೇನೆ.

ಇದೇ ಸಂದರ್ಭದಲ್ಲಿ ಈ ಸದನದಲ್ಲಿ ನಮ್ಮ ಜತೆಗೂಡಿ ಕೆಲಸ ಮಾಡಿದಂತಹ ಶ್ರೀಮಾನ್ ಜಿ. ದುಗ್ಗಪ್ಪನವರು. ನಾನು ಮತ್ತು ಅವರು ಬಹುದಿನ ಆ ಕಡೆ ಕುಳಿತು ಕೆಲಸ ಮಾಡತಕ್ಕ ದಿನ ನನಗೆ ಜ್ಞಾಪಕ ಇದೆ. ನಮ್ಮ ಜೊತೆ ಸುಮಾರು 15 ವರ್ಷ ಕೆಲಸ ಮಾಡಿದ್ದಾರೆ. ಲೋಕಸೇವಾ ಆಯೋಗದ ಅಧ್ಯಕ್ಷರಾಗಿ, ಜೊತೆಗೆ ಯೂನಿವರ್ಸಿಟಿಯ ಸೆನೆಟ್‌ನಲ್ಲಿ, ಸಿಂಡಿಕೇಟ್‌ನಲ್ಲಿ ಕೆಲಸ ಮಾಡಿದ್ದಾರೆ. ಅತ್ಯಂತ ಒಂದು ಸಣ್ಣ ಕುಟುಂಬದಿಂದ ಬಂದಂತಹ ಒಬ್ಬ ವ್ಯಕ್ತಿ ಇಷ್ಟು ಎತ್ತರಕ್ಕೆ ಬೆಳೆದು ಈ ರಾಜ್ಯದಲ್ಲಿ ತನ್ನದೇ ಆದ ಸೇವೆಯನ್ನು ಸಲ್ಲಿಸಿ ಹೋಗಿರತಕ್ಕ ಒಬ್ಬ ಹಿರಿಯ ರಾಜಕಾರಣಿ ನಮ್ಮನ್ನು ಅಗಲಿ ಹೋಗಿದ್ದಾರೆ. ಜೊತೆಗೆ ಸಿ.ಜಿ.ಕೆ. ರೆಡ್ಡಿ ಅವರು ಹಿರಿಯ ಪತ್ರಕರ್ತರು. ಇವತ್ತು ರಾಜ್ಯಭಾಷೆ ಕನ್ನಡಕ್ಕಾಗಿ ಹೆಚ್ಚು ಪತ್ರಿಕಾರಂಗದಲ್ಲಿ ತನ್ನದೇ ಆದ ಸ್ಥಾನಮಾನವನ್ನು ಗಳಿಸಿದಂತಹ ಒಬ್ಬ ಮುತ್ಸದ್ದಿ. ಅವರೂ ಕೂಡ ಹೃತದಯಾಘಾತದಿಂದ ನಮ್ಮನ್ನು ಅಗಲಿ ಹೋಗಿದ್ದಾರೆ. ಅದರ ಜೊತೆಗೆ ಶ್ರೀಮತಿ ಲಕ್ಷ್ಮಮ್ಮ ನಾಗಯ್ಯ ರೆಡ್ಡಿ ಅವರು. ಅವರು ಈ ಸದನದ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿ ಅವರೂ ಕೂಡ ನಮ್ಮನ್ನು ಅಗಲಿ ಹೋಗಿದ್ದಾರೆ. ಮಾಜಿ ಶಾಸಕರಾಗಿ ನಮ್ಮ ಜೊತೆ ಸಾಕಷ್ಟು ಒಂದುಗೂಡಿ ನಮ್ಮ ಸರ್ಕಾರ ಇದ್ದ ಕಾಲದಲ್ಲಿ ಕೆಲಸ ಮಾಡಿದಂತಹ ಒಬ್ಬ ಯೋಗ್ಯ ಪ್ರಾಮಾಣಿಕ ರಾಜಕಾರಣಿ ಅವರು ಕೂಡ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಗೆಳೆಯ ಕೃಷ್ಣಮೂರ್ತಿ ಅವರೂ ಕೂಡ ಹೆಗಡೆಯವರ ಸಚಿವ ಸಂಪುಟದಲ್ಲಿ ಸಹೋದ್ಯೋಗಿಗಳಾಗಿ ಕೆಲಸ ಮಾಡಿ, ಅದರಲ್ಲೂ ನನ್ನ ಜೊತೆ ನೀರಾವರಿ ಉಪಮಂತ್ರಿಯಾಗಿ ಕೆಲಸ ಮಾಡಿದ ಒಬ್ಬ ಸನ್ಮಿತ್ರ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಇನ್ನು ಶ್ರೀಮಾನ್ ಜೋಷಿ ಅವರು. ಭೂಸೇನಾ ಮಹಾದಂಡನಾಯಕರಾಗಿದ್ದವರು ಹಾಗೂ ಶಾಸಕ ಮಟ್ಟಿಯವರು ಅತ್ಯಂತ ಭೀಕರ ಅಪಘಾತಕ್ಕೆ ಸಿಕ್ಕಿ ಚಿಕ್ಕ ವಯಸ್ಸಿನಲ್ಲೇ ಅಸುನೀಗಿದ್ದಾರೆ. ಅವರ ಕುಟುಂಬಕ್ಕೆ ತುಂಬಲಾರದ ನಷ್ಟ ಆಗಿದೆ ಎಂದು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಈ ಸಂದರ್ಭದಲ್ಲಿ ಈ ಎಲ್ಲ ಮಹನೀಯರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತನು ನೀಡಲಿ ಎಂದು ಪ್ರಾರ್ಥನೆ ಮಾಡಿ ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿ):– ಮಾನ್ಯ ಅಧ್ಯಕ್ಷರೇ, ಇಂದಿನ ಸಂತಾಪ ಸೂಚನೆ ಪಟ್ಟಿಯಲ್ಲಿ ಬಹಳ ಜನ ನಮ್ಮ ಸ್ನೇಹಿತರು, ಹಿಂದೆ ನಮ್ಮ ಜೊತೆ ಕೆಲಸ ಮಾಡಿದವರು, ಹೆಚ್.ಎಲ್. ತಿಮ್ಮೇಗೌಡರಂತಹ ಆತ್ಮೀಯ ಸ್ನೇಹಿತರು, ಪಕ್ಷವನ್ನು ಕಟ್ಟಿದಂತಹವರು ದುಗ್ಗಪ್ಪನವರಂತಹ ಸ್ನೇಹಿತರು, ಉಪ್ಪಿನ್ ಅವರಂತಹ ಸ್ನೇಹಿತರು, ಕೃಷ್ಣಮೂರ್ತಿ ಅಂತಹವರು ಇದ್ದಾರೆ. ಅವರ ನಿಧನಕ್ಕೆ ತಮ್ಮ ಭಾವನೆಗಳನ್ನು ಸಮರ್ಥಿಸುತ್ತಾ ಈಗ ರಾಷ್ಟ್ರಕವಿ ಕುವೆಂಪು ಅವರ ಬಗ್ಗೆ ಹೇಳುವುದಾದರೆ, ಮಹಾರಾಜ ಕಾಲೇಜಿನಲ್ಲಿ ನಾನು ಕುವೆಂಪು ಅವರ ವಿದ್ಯಾರ್ಥಿ; ಕನ್ನಡದಲ್ಲಿ ಪಾಠವನ್ನು ಹೇಳುವಾಗ ಅವರು ಹಾಗೇ ಭಾವುಕರಾಗುತ್ತಿದ್ದರು. ಅವರು ಒಳ್ಳೆಯ ಪಾಠ ಹೇಳುತ್ತಿರಲಿಲ್ಲ. ಅದೇ ಪರಮೇಶ್ವರ ಭಟ್ಟರು ಕನ್ನಡ ಹೇಳುವಾಗ ಬಹಳ ತಮಾಷೆಯಾಗಿ ಎಲ್ಲರಿಗೂ

ತಿಳಿಯುವಂತೆ ಕಾವ್ಯಗಳನ್ನು ಎಲ್ಲಾ ಬಿಡಿಸಿ ಹೇಳುತ್ತಿದ್ದರು. ಆ ನಂತರ ನಾನು ಪುಟ್ಟಪ್ಪನವರನ್ನು ಬಹಳ ಹತ್ತಿರದಿಂದ ನೋಡಿದ್ದು ಅವರ ಮನೆಗೆ ಹೋದದ್ದು ಎಂದರೆ, ಲೋಕಸಭೆಯಲ್ಲಿ ನಾನು ಕನ್ನಡದಲ್ಲಿ ಮಾತನಾಡಿದೆ ಎಂಬುದನ್ನು ಕೇಳಿ ಒಂದು ಪತ್ರವನ್ನು ಬರೆದು ನನ್ನನ್ನು ಕರೆಸಿ ಸ್ವತಃ ಅವರೇ ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಆ ನಂತರ ನಮ್ಮ ಸರ್ಕಾರ ಬಂದಾಗ ಪುಟ್ಟಪ್ಪನವರ ಫೋನ್ ಬಂದಿದೆ ಎಂದಾಗ ನನಗೆ ಆಶ್ಚರ್ಯ ಆಯಿತು. ಅವರು ದೂರವಾಣಿ ಮಾಡಬೇಕಾದರೆ ಏನೋ ವಿಚಾರ ಇರಬೇಕೆಂದು ಕೇಳಿದಾಗ ಅವರು ಹೇಳಿದರು. ತಾವು ಖಾತೆಯನ್ನು ತೆಗೆದುಕೊಳ್ಳುವಾಗ ಅದು, ಇದು ಬೇರೆ ಖಾತೆ ತೆಗೆದುಕೊಳ್ಳಬೇಡಿ, ವಿದ್ಯಾ ಇಲಾಖೆ ತೆಗೆದುಕೊಳ್ಳಿ ಎಂದು ಹೇಳಿದರು. ಆದರೆ ಅಷ್ಟು ಹೊತ್ತಿಗೆ ನನಗೆ ಬೇರೆ ಖಾತೆ ಹಂಚಿಕೆಯಾಗಿತ್ತು. ಅವರಿಗೆ ನಾನು ಉತ್ತರವನ್ನು ಕೊಡುವುದಕ್ಕೆ ಆಗಲಿಲ್ಲ.

ಅಧ್ಯಕ್ಷರು:– ಅವರಿಗೆ ನಿಮ್ಮ ಅನಂತರೂಪ ಪರಿಚಯ ಇರಲಿಲ್ಲ.

ಶ್ರೀ ಜೆ.ಹೆಚ್. ಪಟೇಲ್:– ಇರಲಿಲ್ಲ. ಆದರೂ ಅವರ ಮಾತು ಒಂದೊಂದು ಸಾರಿ ಎಷ್ಟು ಏಕೆಂದರೆ ನಾನು ಇಂಗ್ಲೀಷ್ ಸಾಹಿತ್ಯದ ವಿದ್ಯಾರ್ಥಿ. ಮಿಲ್ಟನ್, ವರ್ಡ್ಸ್‌ವರ್ತ್ ಅಂತಹ ಮಹಾಕವಿಗಳನ್ನು ಕರ್ನಾಟಕದಲ್ಲಿ ಹುಟ್ಟಿದ ನಾನು ಓದುತ್ತೇನೆ. ಅದೇ ಮಿಲ್ಟನ್, ವರ್ಡ್ಸ್‌ವರ್ತ್ ಅವರ ಮಟ್ಟದ ವಿಚಾರ ಮಾಡಿದ ಒಬ್ಬ ಕನ್ನಡ ಕವಿಯನ್ನು ಜಗತ್ತಿನ ಬೇರೆ ಕಡೆ ಯಾರೂ ಓದುವುದಿಲ್ಲ. ಬಸವಣ್ಣರನ್ನು ಅರ್ಥ ಮಾಡಿಕೊಂಡಿದ್ದರೆ ಕಾರ್ಲ್‌ಮಾರ್ಕ್ಸ್‌ಗಿಂತ ಮುಂಚೆ ಬಸವಣ್ಣನವರ ಬಗ್ಗೆ ಪ್ರಪಂಚದ ಜನ ತಿಳಿದುಕೊಳ್ಳುತ್ತಿದ್ದರು. ಈಗ ಇಂಗ್ಲೀಷ್ ಸಾಹಿತ್ಯದಲ್ಲಿ ನಾವು ಶೇಕ್ಸ್‌ಪಿಯರ್, ಜಾರ್ಜ್ ಬರ್ನಾರ್ಡ್ ಶಾ ಇವರನ್ನೆಲ್ಲಾ ಬಹಳ ಹೊಗಳುತ್ತೇವೆ. ಅವರು ಜಗತ್ತಿನ ಮಹಾನ್ ಸಾಹಿತಿಗಳು ಎಂದು ಹೇಳುತ್ತೇವೆ. ಅವರಿಗೆ ಸಮಾನವಾಗಿ ಬರೆದಿರತಕ್ಕಂತಹ ನಮ್ಮ ನಾಟಕಕಾರರು, ನಮ್ಮ ಕವಿಗಳು ಹೊರಗಿನ ಜಗತ್ತಿಗೆ ಗೊತ್ತಿಲ್ಲ. ಆದ್ದರಿಂದ ಇಂಗ್ಲೀಷ್ ಬಗ್ಗೆ ಆಗಲೀ ಅಥವಾ ಕನ್ನಡದ ಬಗ್ಗೆ ಆಗಲೀ ನಾನು ತಾರತಮ್ಯ ಹೇಳುತ್ತಾ ಇಲ್ಲ. ಕಾಲದ ಒತ್ತಡದಿಂದ, ಆ ಸಂದರ್ಭದಿಂದ ನಮ್ಮಲ್ಲಿರತಕ್ಕ ಮಹಾನ್ ಕವಿಗಳು ಹೊರಗಡೆಯ ಜಗತ್ತಿಗೆ ಪರಿಚಯ ಆಗಲಿಲ್ಲ. ಅದು ಏನೇ ಆಗಲಿ ಕೊನೆಯ ಪಕ್ಷ ನಮ್ಮ ದೇಶದಲ್ಲಿ ಆದರೂ ಕನ್ನಡದಲ್ಲಿ ಇರತಕ್ಕಂತಹ ಸಾಹಿತ್ಯ ಭಂಡಾರ, ವಿಚಾರಗಳು ಬೇರೆಯವರಿಗೆ ತಿಳಿಯಬೇಕು. ಮೊನ್ನೆ ಡಾ. ಯು.ಆರ್. ಅನಂತಮೂರ್ತಿಯವರಿಗೆ ಆರನೇ ಜ್ಞಾನಪೀಠ ಪ್ರಶಸ್ತಿಯನ್ನು ಕೊಟ್ಟಿರುವುದು ಒಂದೇ ಒಂದು ಕರ್ನಾಟಕದಲ್ಲಿ ಮತ್ತು ಕನ್ನಡ ಭಾಷೆಯಲ್ಲಿ ಎಷ್ಟು ಅತ್ಯುತ್ತಮವಾದ ಚಿಂತನೆ ಇದೆ ಕರ್ತೃತ್ವ ಇದೆ ಮತ್ತು ವೈಜ್ಞಾನಿಕ ಇದೆ. ಇದನ್ನು ನಾವು ಮೊದಲು ನಮ್ಮ ದೇಶದವರಿಗೆ ಆ ನಂತರ ಬೇರೆ ಕಡೆ ತಿಳಿದುಕೊಳ್ಳುವ ರೀತಿಯಲ್ಲಿ ಸರ್ಕಾರ ಮಾಡೋದು ಅಂತಲ್ಲ ನಾನು ಹೇಳುವುದು. ಸರ್ಕಾರದ ಕೆಲಸ ಅಲ್ಲ ಅದು. ಬೇರೆ ಸಾಹಿತ್ಯದಲ್ಲಿ ಆಸಕ್ತಿ ಇರತಕ್ಕ, ಸಾಹಿತ್ಯವನ್ನು ಪ್ರಚಾರ ಮಾಡತಕ್ಕ ಆ ಶಕ್ತಿಗಳು ಬೆಳೆದರೆ ಬಹುಶಃ ನಮ್ಮವರು ಬೇರೆಯವರಿಗೆ ಅರ್ಥ ಆಗುತ್ತಾರೆ. ಇನ್ನು ಅವರಿಗೆ ಭಾಷೆ ಬಗ್ಗೆ ಒಂದು ಹಟಮಾರಿತನ ಇರಲಿಲ್ಲ. ಮಹಾನ್ ಕವಿಯಾದರೂ ತ್ರಿಭಾಷಾ ಸೂತ್ರ ಬಂದಾಗ ದೆಹಲಿಯಲ್ಲಿ ಚರ್ಚೆ ಮಾಡುವಾಗ ನನ್ನನ್ನು ಕರೆಸಿದರು. ಇಂಗ್ಲೀಷ್ ಬೇಡ ಎನ್ನುವ ಲೋಹಿಯಾ ಅವರ ವಾದವನ್ನು ಅವರು ಸಂಪೂರ್ಣ ಸಮರ್ಥಿಸಿಕೊಂಡಿದ್ದರು. ನಾನೂ, ಗೋಪಾಲಗೌಡರೂ ಲೋಹಿಯಾ ಅವರನ್ನು ಅವರ ಮನೆಗೆ ಕರೆದುಕೊಂಡು ಹೋದೆವು. ಇಬ್ಬರೂ ಈ ಇಂಗ್ಲೀಷಿನ, ಇಂಗ್ಲೀಷಿನಿಂದ ಈ ದೇಶದಲ್ಲಿ ಆಗಬಹುದಾದ ಹಾನಿಯನ್ನು ಮತ್ತು ಮಾತೃಭಾಷೆಗಳು ಬೆಳೆಯದೇ ಇರತಕ್ಕ ಸ್ಥಿತಿಯನ್ನು ಸುಮಾರು ಎರಡು–ಮೂರು ಗಂಟೆಗಳ ಕಾಲ ಚರ್ಚೆ ಮಾಡಿ, ಅದನ್ನು ಯಾರು ಇಂಗ್ಲೀಷಿನ ವಿರೋಧಿಗಳಲ್ಲ, ಲೋಹಿಯಾರ ಶಿಷ್ಯರು ಇಂಗ್ಲೀಷ್ ಹಠಾವೋ ಎಂದು ಹೇಳಿದ ತಕ್ಷಣ ಏನು ಒಂದು ಸಾಹಿತ್ಯಿಕ ಬೆಳವಣಿಗೆಗೆ, ಸಾಂಸ್ಕೃತಿಕ ಬೆಳವಣಿಗೆಗೆ ಅಡ್ಡಿ ಆಗುತ್ತಾರೆ ಎಂದು ವಿಚಾರ ಮಾಡುತ್ತಿದ್ದರಲ್ಲ ಅವರಿಗೆ

ಉತ್ತರವನ್ನು ಪುಟ್ಟಪ್ಪನವರು ಕೊಟ್ಟರು. ಅವರು ಹೇಳಿದರು, ನಾನು ಇಂಗ್ಲೀಷ್ ಕಾವ್ಯಗಳನ್ನು ಓದಿ, ಮಿಲ್ಟನ್ ಓದಿ, ಡಾಂಟೆ ಓದಿ, ಇಲಿಯಟ್ ಅನ್ನು ಓದಿ ನಾನು ಇವತ್ತು ಪ್ರೇರಿತನಾಗಿದ್ದೇನೆ. ಇಂಗ್ಲೀಷ್ ವಿರುದ್ಧ ಅಲ್ಲ. ಭಾಷೆಯ ವಿರುದ್ಧ ಅಲ್ಲ. ನಾವು ಇವತ್ತು ಇಂಗ್ಲೀಷ್ ಮೂಲಕ ಎಲ್ಲಾ ಕಲಿಯಬೇಕು, ಇಂಗ್ಲೀಷ್‌ನಿಂದಲೇ ನಮಗೆ ಆಗಬೇಕು ಎಂದು ನಾವು ಪಟ್ಟು ಹಿಡಿಯುವುದರಿಂದ ನಮ್ಮ ಕರ್ತೃತ್ವ ನಮ್ಮ ಭಾಷೆ ಬೆಳೆಯುವುದಿಲ್ಲ, ನಮ್ಮತನ ಬೆಳೆಯುವುದಿಲ್ಲ. ಈ ಮಾತನ್ನು ಲೋಹಿಯಾ ಅವರು ಮತ್ತು ಪುಟ್ಟಪ್ಪನವರು ಮಾತನಾಡಿ ಆಗ ಒಂದು ಸಮಗ್ರ ಚಿಂತನೆ ಆಯಿತು. ಕೋನೇ ಕೊನೆ ದಿನಗಳಲ್ಲಿ ನಾನು ಆಗಾಗ ಮೈಸೂರಿಗೆ ಹೋದಾಗ ಅವರನ್ನು ಕಂಡು ಬರತಕ್ಕಂತಹದ್ದು. ಪಂಜಾಬ್‌ನಲ್ಲಿ ಬಹಳ ಹಿಂಸೆ ಪ್ರಾರಂಭವಾಗಿತ್ತು. ಬಹುಶಃ ಬ್ಲೂ ಸ್ಟಾರ್ ಆಪರೇಷನ್‌ಗಿಂತಾ ಮುಂಚೆ. ನಾವು ಒಂದು ದೇಶವಾ ಪಟೇಲರೇ ಎಂದು ಕೇಳಿದರು. ಪಂಜಾಬ್‌ನಲ್ಲಿ ಅಷ್ಟೊಂದು ಹಿಂಸೆ ನಡೆಯುತ್ತಿದ್ದ ಕಾಲಕ್ಕೆ ನಾನು ಹೋದೆ. ಅವರು ಚಿಂತೆ ಮಾಡುತ್ತಿದ್ದರು. ನನಗೆ ಕೇಳಿದರು. ನಾವು ಒಂದು ದೇಶವೇ ? ಏಕೆ ಸಾರ್ ಎಂದು ನಾನು ಕೇಳಿದೆ. ಪಂಜಾಬ್‌ನಲ್ಲಿ ಇವತ್ತು ಅಷ್ಟು ರಕ್ತಪಾತವಾಗುತ್ತಿದೆ, ಅಸ್ಸಾಮ್‌ನಲ್ಲಿ ಇವತ್ತು ಇಷ್ಟೊಂದು ಉಗ್ರಗಾಮಿಗಳಾಗಿದ್ದಾರೆ. ಕಾಶ್ಮೀರದಲ್ಲಿ ಇವತ್ತು ಅದು ನಮ್ಮ ದೇಶದ ಒಂದು ಭಾಗ ಎಂದು ಅನಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕೆಳಗೆ ತಮಿಳುನಾಡಿನಲ್ಲೂ ಕೂಡ ಇವತ್ತು ಹಿಂಸೆ ಆಗುತ್ತಾ ಇದೆ. ಇವತ್ತು ನಮ್ಮ ಕೈಕಾಲುಗಳನ್ನು ಕತ್ತರಿಸುತ್ತಿದ್ದಾರೆ.

ಒಂದು ದೇಶ ಎಂದರೆ ಅದಕ್ಕೆ ಒಂದು ಆತ್ಮ ಇರುತ್ತದೆ, ಒಂದು ದೇಹ ಇರುತ್ತದೆ. ಆ ದೇಹಕ್ಕೆ ಇವತ್ತು ಕೆಲವು ಕಡೆ ಲಕ್ವ ಹೊಡೆದಿದೆ, ಕೆಲವು ಕಡೆ ಕತ್ತರಿಸಿ ಹಾಕಿದ್ದಾರೆ, ಕೆಲವು ಕಡೆ ನನಗೇ ಅನ್ನಿಸುತ್ತದೆ ನನ್ನದು ಒಂದು ದೇಹ ಇದೆಯಾ ಎಂದು. ಭಾರತ ಎನ್ನುವ ಒಂದು ದೇಶ ಇದೆಯಾ ಎಂದು ನನಗೇ ಇಷ್ಟು ಗಾಬರಿಯಾಗುತ್ತದೆ. ಇದನ್ನು ಹೇಗೆ ನಿಲ್ಲಿಸಬೇಕು ಎಂದು. ಹೋಗಲಿ ಇದನ್ನು ಯುನೈಟೆಡ್ ಸ್ಟೇಟ್ ಆಫ್ ಇಂಡಿಯಾ ಎಂದು ಬೇರೆ ಬೇರೆಯಾಗಿ ಇಟ್ಟುಬಿಡೋಣವೇ, ಅಷ್ಟಾದರೂ ಸಮಾಧಾನವಾಗುತ್ತದೆ. ನಮ್ಮ ದೇಶದಲ್ಲಿ ಇಷ್ಟೊಂದು ಹಿಂಸೆ ಆಗುತ್ತಿದೆ, ದೆಹಲಿಯಲ್ಲಿ ಆಳ್ವಿಕೆ ಮಾಡತಕ್ಕವರಿಗೆ ನೋವು ಆಗುವುದಿಲ್ಲವೇ ಎಂದು ಈ ರೀತಿ ಆ ವಿಶ್ವ ಮಾನವ ಸಂದೇಶ ಏನು ಕೊಡುತ್ತಿದ್ದರು ಅದು ಬರೀ ಸಂದೇಶ ಅಲ್ಲ ಕೊಟ್ಟಿದ್ದು ಅವರು. ಮಾನ್ಯ ಅಧ್ಯಕ್ಷರೇ, ನಿಜವಾಗಿಯೂ ಅವರು ವಿಶ್ವ ಮಾನವರಾಗಿ ಬದುಕಿದ್ದರು. ಅವರ ಭಾವನೆ, ಆಚಾರವಿಚಾರಗಳಲ್ಲಿ ವಿಶ್ವಮಾನವರಾಗಿಯೇ ಬದುಕಿದ್ದರು. ಅದಕ್ಕಾಗಿ ಅವರು 'ನನಗೆ ಮನೆ ಬೇಡ, ನಾನು ಬಯಲಿನಲ್ಲಿ ಇರುತ್ತೇನೆ' ಅಂತ ಹೇಳಿದರು. ಅದರ ಆಧ್ಯಾತ್ಮಿಕ ಅರ್ಥ ಬಹಳ ದೊಡ್ಡದು. ಅದನ್ನು ಇಲ್ಲಿ ಈ ಸದನದಲ್ಲಿ ಹೇಳುವುದಕ್ಕೆ ನನಗೆ ಇಚ್ಛೆ ಇಲ್ಲ. ಅವರು ನಮ್ಮ ದೇಶದ ಅಥವಾ ಜಗತ್ತಿನ ಸಾರಸ್ವತ ಲೋಕದಲ್ಲಿ ಅತ್ಯಂತ ಗಂಭೀರವಾಗಿ ಆಲೋಚನೆ ಮಾಡತಕ್ಕಂಥ ರೀತಿಯಲ್ಲಿ, ಅದು ನವ್ಯಶೈಲಿ ಅಂತ ಅಲ್ಲ, ತಮಗೆ ಗೊತ್ತಿರುವ ಹಾಗೆ ಮಿಲ್ಟನ್, ವರ್ಡ್ಸ್‌ವರ್ತ್ ಇವರ ಶೈಲಿಯಲ್ಲಿ ಬರೆದರು. ಆಮೇಲೆ ಅವರು ರಾಮಾಯಣ ದರ್ಶನಂ ಮಹಾಕಾವ್ಯವನ್ನು ಬರೆದರು. ನಾವು ಮಹಾಕಾವ್ಯವೆಂದರೆ ರಾಮಾಯಣ, ಮಹಾಭಾರತ ಎಂದು ಹೇಳುತ್ತೇನೆ. ಅವುಗಳಿಗೆ ಇಂಗ್ಲೀಷಿನಲ್ಲಿ ಎಪಿಕ್ಸ್ ಅಂತ ಹೇಳುತ್ತೇವೆ. ಇಂತಹ ಒಂದು ಎಪಿಕ್ – ಮಹಾಕಾವ್ಯವನ್ನು ಮಾನ್ಯ ಕುವೆಂಪು ಅವರು ರಚನೆ ಮಾಡಿದರು. ಅವರ ಕೊನೆಕೊನೆಯ ದಿವಸಗಳಲ್ಲಿ ಅವರ ಆರೋಗ್ಯ ಕೆಟ್ಟಮೇಲೂ ಕೂಡ ಯಾವಾಗಲೂ ಸತತವಾಗಿ ಮಾನವ ಕೋಟಿಯ ಬಗ್ಗೆ ಚಿಂತನೆ ಮಾಡಿದರೇ ಹೊರತು, ನೀವು ಹೇಗಿದ್ದೀರಿ, ನಿಮ್ಮ ಸರ್ಕಾರ ಹೇಗಿದೆ ಎಂದು ಈ ತರಹ ಅವರು ಯಾವತ್ತೂ ಕೇಳುತ್ತಿರಲಿಲ್ಲ. ಇಂತಹ ಒಬ್ಬ ಅಪರೂಪದ ಯುಗದ ವ್ಯಕ್ತಿ ಅಥವಾ ಸದಾಕಾಲಕ್ಕೂ ಉಳಿಯತಕ್ಕಂಥ ವ್ಯಕ್ತಿ ನಮ್ಮನ್ನು ಅಗಲಿದ್ದಾರೆ. ಅವರು ನಮ್ಮ ನಾಡಿನವರು. ರವೀಂದ್ರನಾಥ ಠಾಕೂರ್ ಅವರನ್ನು ನೋಡಿದರೂ ಹೆಮ್ಮೆಯಾಗುತ್ತದೆ, ಉತ್ತರ ಭಾರತದ ಕವಿಗಳನ್ನು ನೋಡಿದರೆ ಕೂಡ ನಮಗೆ ಹೆಮ್ಮೆಯಾಗುತ್ತದೆ.

ಆದರೆ ಕನ್ನಡ ನಾಡಿನವರಾದ ಶ್ರೀ ಕುವೆಂಪು ಅವರನ್ನು ಹೋಲಿಕೆ ಮಾಡುವಾಗ, ಸಮುದ್ರಕ್ಕೆ ಯಾರನ್ನಾದರೂ ಹೋಲಿಕೆ ಮಾಡುವುದಕ್ಕೆ ಆಗುತ್ತದೆಯೆ? ಸಮುದ್ರಕ್ಕೆ ಕೆರೆಯನ್ನು ಹೋಲಿಕೆ ಮಾಡಲು ಸಾಧ್ಯವೆ? ಯಾವ ಹೋಲಿಕೆಗೂ ಅತೀತವಾದ ಶಿಖರ ಅಥವಾ ಹಿಮಾಲಯ ಅವರಾಗಿದ್ದರು. ಆದ್ದರಿಂದ ಇಂತಹವರಿಗೆ ನಾವು ನಮ್ಮನ್ನು ಕನ್ನಡದ ಬಗ್ಗೆ ಅರ್ಪಿಸಿಕೊಂಡರೆ ಬಹುಶಃ ಅವರ ಆತ್ಮಕ್ಕೆ ಶಾಂತಿ ದೊರೆಯಬಹುದೆಂದು ನಾನು ಹೇಳುತ್ತೇನೆ. ಶ್ರೀ ಕುವೆಂಪು ಅವರಿಗೆ ನಾನು ದೀರ್ಘದಂಡ ಪ್ರಣಾಮವನ್ನು ಮಾಡುತ್ತೇನೆ.

ಎರಡನೆಯದಾಗಿ ಡಾ. ತಿಮ್ಮೇಗೌಡರು ಮಾನ್ಯ ಸಭಾನಾಯಕರು ಅವರ ಬಗ್ಗೆ ಹೇಳಿದ್ದಾರೆ. ಅವರು ನಮ್ಮ ಜತೆ ಇದ್ದವರು, ಬೆಳೆದವರು, ಪಕ್ಷವನ್ನು ಕಟ್ಟಿದವರು, ಎಲ್ಲ ಕಷ್ಟಸುಖಗಳಲ್ಲೂ ಭಾಗಿಯಾದವರು. ಇನ್ನು ಶ್ರೀ ಸಿ.ಜಿ.ಕೆ. ರೆಡ್ಡಿಯವರು ನನಗೆ ಬಹಳ ಪ್ರಿಯರಾದವರು. ನಮ್ಮ ಸಮಾಜವಾದಿ ಆಂದೋಳನದಲ್ಲಿ ಮೊದಲಿನಿಂದಲೂ ನಮ್ಮ ಜೊತೆಯಲ್ಲಿ ಇದ್ದರು, ಲೋಹಿಯಾ ಅವರ ಜತೆಯಲ್ಲಿ ಇದ್ದರು. ಇಲ್ಲಿ ಬಹಳ ಜನ ಅವರ ಸ್ನೇಹಿತರು, ಸಮಾಜವಾದಿಗಳು ಇದ್ದಾರೆ. ಅವರು ಬರೇ ಚಿಂತಕರು ಅಷ್ಟೇ ಅಲ್ಲ ಒಳ್ಳೆಯ ಲೇಖಕರೂ ಆಗಿದ್ದರು. ಶ್ರೀ ಸಿ.ಜಿ.ಕೆ. ರೆಡ್ಡಿಯವರು ಪತ್ರಕರ್ತರೂ ಆಗಿದ್ದರು. ಹಿಂದೂ ಪತ್ರಿಕೆಯಲ್ಲಿ ಕೆಲಸ ಮಾಡಿದ್ದರು, ಪ್ರಜಾವಾಣಿಯಲ್ಲೂ ಅವರು ಕೆಲಕಾಲ ಕೆಲಸ ಮಾಡಿದ್ದರು. ಅವರ ಮತ್ತು ನಮ್ಮ ಸಂಬಂಧ ಸಮಾಜವಾದ ಚಳುವಳಿಯಲ್ಲಿ ಬಹಳ ವರ್ಷಗಳಿಂದ ಬಂದಂಥಾದ್ದು. ಅವರ ಸಾವಿಗೆ ನನ್ನ ದುಃಖವನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ತಾವು ಅವಕಾಶ ಕೊಟ್ಟಿದ್ದಕ್ಕೆ ತಮಗೂ ವಂದನೆಯನ್ನು ಸಲ್ಲಿಸುತ್ತೇನೆ.

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ – ವಿರೋಧ ಪಕ್ಷದ ನಾಯಕರು):– ಸನ್ಮಾನ್ಯ ಅಧ್ಯಕ್ಷರೇ, ಈ ರಾಷ್ಟ್ರಕ್ಕಾಗಿ, ಈ ನಾಡಿಗಾಗಿ ದುಡಿದ ಅನೇಕ ಮಹಾನುಭಾವರುಗಳನ್ನು ಕಳೆದುಕೊಂಡು ಈ ದೇಶ ಬಡವಾಗಿದೆ. ಭೂಸೇನೆಯ ಮಹಾದಂಡನಾಯಕರಾಗಿದ್ದ ಜನರಲ್ ಬಿಪಿನ್ ಚಂದ್ರ ಜೋಶಿಯವರು, ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಚಂದ್ರಶೇಖರ ಮಟ್ಟಿಯವರು, ವಿಧಾನಸಭೆಯ ಮಾಜಿ ಸಚಿವರಾದ ಡಾ. ಹೆಚ್.ಎಲ್. ತಿಮ್ಮೇಗೌಡರು, ಜಿ. ದುಗ್ಗಪ್ಪನವರು, ಬಿ.ಎ. ಉಪ್ಪಿನ, ವಿಧಾನಸಭೆಯ ಮಾಜಿ ಸದಸ್ಯರಾದಂಥ ಕೆ. ಕೃಷ್ಣಮೂರ್ತಿಯವರು, ಸಿ.ಜಿ.ಕೆ. ರೆಡ್ಡಿಯವರು, ರಾಷ್ಟ್ರಕವಿ ಕುವೆಂಪು – ಇಂತಹವರು ಇನ್ನಿಲ್ಲ. ಇವರುಗಳನ್ನು ಕಳೆದುಕೊಂಡ ಈ ರಾಷ್ಟ್ರ ಬಡವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ದಿವಂಗತ ಕುವೆಂಪು ಅವರ ಬಗ್ಗೆ ಏನು ಸಂತಾಪಸೂಚಕ ನಿರ್ಣಯವನ್ನು ತಂದಿದ್ದಾರೆ. ಅದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಸನ್ಮಾನ್ಯ ಪಟೇಲರು ಮಾತನಾಡುವಾಗ ಕುವೆಂಪು ಅವರ ಬಗ್ಗೆ ಒಂದು ಮಾರ್ಮಿಕವಾದ ಮಾತನ್ನು ಆಡಿದರು. ಇದು ಒಂದು ದೇಶವೇ ಎನ್ನುವ ಪ್ರಶ್ನೆ ಅವರ ಕೊನೆಗಾಲದಲ್ಲಿ ಕಾಡುತ್ತಿತ್ತು ಎಂಬುದು. ಈ ಬಗ್ಗೆ ನಾವೆಲ್ಲರೂ ಚಿಂತನೆ ಮಾಡಬೇಕಾಗುತ್ತದೆ. ಈ ದೇಶದ ಏಕತೆ, ಅಖಂಡತೆ, ಸಮಗ್ರತೆಗೆ ಧಕ್ಕೆ ಬಂದಿರುವ ಈ ಸಂದರ್ಭದಲ್ಲಿ ವಿಶೇಷವಾಗಿ ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವ ನಾವು ನಮ್ಮ ರಾಜಕೀಯ ಲಾಭಕ್ಕಾಗಿ ಏನು ಬೇಕಾದರೂ ಮಾಡುವಷ್ಟು ಹೊರಟಿರುವಂಥ ದುಸ್ಥಿತಿಯಲ್ಲಿ ನಾವು ಚಿಂತನೆ ಮಾಡಬೇಕಾಗಿದೆ. ಈ ದೇಶದ ಉಳಿವಿಗೋಸ್ಕರ ಲಕ್ಷಾಂತರ ಜನರು ಪ್ರಾಣ ಕೊಟ್ಟು, ಈ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟರು, ಅದನ್ನು ನಾವು ಉಳಿಸಿಕೊಳ್ಳಬೇಕಾಗಿದೆ, ಬೆಳೆಸಿಕೊಳ್ಳಬೇಕಾಗಿದೆ. ಅವರ ಮನದಾಳದಲ್ಲಿದ್ದಂಥ ಅಪೇಕ್ಷೆಯನ್ನು ಪೂರೈಸುವಂಥ ಒಂದು ಪ್ರಾಮಾಣಿಕ ಪ್ರಯತ್ನ ಸಹ ನಮ್ಮೆಲ್ಲರ ಕಡೆಯಿಂದ ಆಗಬೇಕಾಗಿದೆ.

ಕೊರತೆಗಳು ಮತ್ತು ತಪ್ಪುಗಳು ಯಾವ ಕಡೆಯಿಂದ ಆದರೂ ಸಹ, ಅವುಗಳನ್ನು ಸರಿಪಡಿಸುವಂಥ ಪ್ರಾಮಾಣಿಕ ಪ್ರಯತ್ನವನ್ನು, 48 ವರ್ಷಗಳ ನಂತರ ಈಗಲಾದರೂ ಮಾಡಬೇಕೆನ್ನುವ ಮಾತನ್ನು

ಹೇಳಿ, ಮಾನ್ಯ ಜೆ.ಹೆಚ್. ಪಟೇಲ್‌ರವರ ಮಾತಿಗೆ ಧ್ವನಿಗೂಡಿಸುತ್ತೇನೆ. ಏನೇ ಆಗಲೀ ಡಾ. ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ, ರಾಷ್ಟ್ರಕವಿ ಕುವೆಂಪುರವರು ಇವತ್ತು ಇಲ್ಲ. ನಾನು ಹೆಮ್ಮೆಯಿಂದ ಹೇಳುತ್ತೇನೆ. ಅವರು ಎಲ್ಲಿ ಒಡನಾಟ, ಓಡಾಟ ಮಾಡಿದರೋ, ಆ ಮಣ್ಣಿನ ಧೂಳು ಏನು ಇದೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಕುಪ್ಪಳ್ಳಿಯಲ್ಲಿದೆ, ಆ ಜಿಲ್ಲೆಯಿಂದ ಶಾಸಕನಾಗಿ ಬಂದಿರುವುದೇ ಒಂದು ಹೆಮ್ಮೆ ಎಂದು ನಾನಾದರೂ ಭಾವಿಸಿದ್ದೇನೆ. ಅವರ ನಿಧನ ಸಾಹಿತ್ಯ ಲೋಕದಲ್ಲಿ ತುಂಬಲಾರದ ನಷ್ಟವಾಗಿದೆ, ಕನ್ನಡ ನಾಡು ಬಡವಾಗಿದೆ. ರಾಷ್ಟ್ರಕವಿಯಾಗಿ, ಜ್ಞಾನಪೀಠ ಪ್ರಶಸ್ತಿ ಪಡೆದ ಅವರು ಬಹುಕಾಲ ನೆನಪಿನಲ್ಲಿ ಉಳಿಯುವವರಾಗಿದ್ದಾರೆ. ಅವರ ನಿಧನದಿಂದ ರಾಷ್ಟ್ರ ಒಬ್ಬ ಮಾನವತಾವಾದಿಯನ್ನು ಕಳೆದುಕೊಂಡಂತಾಗಿದೆ. ಕುವೆಂಪುರವರು ತಮ್ಮ ಸಾಹಿತ್ಯದ ಮೂಲಕ, ಕನ್ನಡಕ್ಕೆ ವಿಶ್ವಮಾನ್ಯತೆ ದೊರಕುವಂತೆ ಮಾಡಿಕೊಟ್ಟರು. ಸನ್ಮಾನ್ಯ ನಾಯಕರು ಹೇಳಿದಂತೆ, ''ಬಾರಿಸು ಕನ್ನಡ ಡಿಂಡಿಮವ'' ಎನ್ನುವುದು ಕನ್ನಡ ನಾಡಿನ ಜನರ ಒಂದು ತಾರಕ ಮಂತ್ರವೇ ಆಯಿತು. ಅವರ ಹೆಸರು ಸದಾಕಾಲ, ನಿರಂತವಾಗಿ ಉಳಿಯುವುದಕ್ಕೋಸ್ಕರ, ಸಭಾನಾಯಕರಿಗೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ ಗ್ರಾಮವನ್ನು ಒಂದು ರಾಷ್ಟ್ರೀಯ ಸ್ಮಾರಕವಾಗಿ ಅಭಿವೃದ್ಧಿ ಪಡಿಸಬೇಕು. ಆ ದಿಕ್ಕಿನಲ್ಲಿ ಈಗಾಗಲೇ ಸಭಾನಾಯಕರು ಕೆಲವು ಭರವಸೆಗಳನ್ನೂ ಕೊಟ್ಟಿದ್ದಾರೆ. ಅವರು ಹುಟ್ಟಿ ಬೆಳೆದಂಥ ಸ್ಥಳವನ್ನು ಈ ನಾಡಿಗೆ, ಈ ದೇಶಕ್ಕೆ ಮಾದರಿಯಾದ ರೀತಿಯಲ್ಲಿ ಮಾಡಲು ಪ್ರಯತ್ನ ಮಾಡಬೇಕು. ಅವರು ಹುಟ್ಟಿ ಬೆಳೆದಂಥ ಮತ್ತು ಕಾವ್ಯ ಬರೆದಂಥ ಯುವ ಕವಿಗಳು ಅಲ್ಲಿ ಹೋದಾಗ, ಅವರಿಗೆ ಆನಂದದಿಂದ, ಉತ್ಸಾಹ ಚಿಮ್ಮುವಂತೆ ಆ ಪರಿಸರವನ್ನು ಉಳಿಸಿಕೊಳ್ಳಬೇಕು. ಆ ಲೇಖಕರಿಗೆ ಸ್ಫೂರ್ತಿ ಬರುವಂತೆ, ಆ ಸ್ಥಳವನ್ನು ನಿರ್ಮಾಣ ಮಾಡಬೇಕು. ಎಲ್ಲಾ ಸೃಜನಾತ್ಮಕ ಚಟುವಟಿಕೆಗಳಿಗೆ ಅನುಕೂಲವಾಗತಕ್ಕ ರೀತಿಯಲ್ಲಿ, ಕಾವ್ಯ, ಲೇಖನ, ನಾಟ್ಯ, ನಾಟಕ ಇವುಗಳಿಗೆ ಪ್ರೋತ್ಸಾಹ ಕೊಡುವಂಥ ರಾಷ್ಟ್ರೀಯ ಅಕಾಡೆಮಿಯನ್ನು ಕುವೆಂಪುರವರ ಹೆಸರಿನಲ್ಲಿ ರಚಿಸಬೇಕೆಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ ಮತ್ತು ಈ ಎಲ್ಲಾ ಹಿರಿಯರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಅವರು ಯಾವ ದಿಕ್ಕಿನಲ್ಲಿ ಈ ನಾಡನ್ನು, ಈ ದೇಶವನ್ನು ತೆಗೆದುಕೊಂಡು ಹೋಗಬೇಕೆಂದು ಅಪೇಕ್ಷೆಪಟ್ಟರೋ, ಬಹುಶಃ ನಮ್ಮ ನಿಜವಾದ ಶ್ರದ್ಧಾಂಜಲಿ ಅವರು ಹೋದ ದಾರಿಯಲ್ಲಿ, ಅವರು ಅಪೇಕ್ಷೆಪಟ್ಟ ದಾರಿಯಲ್ಲಿ ಈ ನಾಡನ್ನು ಈ ರಾಷ್ಟ್ರವನ್ನು ತೆಗೆದುಕೊಂಡು ಹೋದಾಗ ಮಾತ್ರ ನಾವು ಶ್ರದ್ಧಾಂಜಲಿ ಅರ್ಪಿಸಿದ್ದಕ್ಕೆ ಸಾರ್ಥಕವಾಗಬಹುದು. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಹೇಳುತ್ತಾ, ಇವತ್ತು ಅಗಲಿರುವಂಥ ಬಂಧುಗಳಿಗೆ ಮತ್ತು ಅವರ ಆತ್ಮಕ್ಕೆ ಶಾಂತಿ ಜೊತೆಗೆ, ಯಾರು ಅಗಲಿದ್ದಾರೆ ಅವರ ಬಂಧುಗಳಿಗೆ ಈ ದುಃಖವನ್ನು ತಡೆಯುವಂಥ ಸಹಿಸುವಂಥ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಪ್ರಾರ್ಥನೆ ಮಾಡಿ, ಸಭಾನಾಯಕರು ಕುವೆಂಪುರವರ ಬಗ್ಗೆ ಏನು ನಿರ್ಣಯ ಮಂಡನೆ ಮಾಡಿದ್ದಾರೆ, ಅದಕ್ಕೆ ಸಂಪೂರ್ಣ ಬೆಂಬಲವನ್ನು ಸೂಚಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್):– ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರುವಂಥ ಪ್ರಸ್ತಾವನೆಗೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ ಮತ್ತು ವಿಶೇಷವಾಗಿ ಭೂಸೇನೆ ದಂಡನಾಯಕರು ಮತ್ತು ಈ ಸದನದ ಸದಸ್ಯರಾದ ಡಾ. ತಿಮ್ಮೇಗೌಡರು, ಕೃಷ್ಣಮೂರ್ತಿಯವರು, ದುಗ್ಗಪ್ಪನವರು, ಉಪ್ಪಿನ್‌ರವರು ಮತ್ತು ಚಂದ್ರಶೇಖರ ಮಟ್ಟಿಯವರು ಏನು ನಮ್ಮನ್ನು ಅಗಲಿ ಹೋಗಿದ್ದಾರೆ. ಇವರೆಲ್ಲರೂ ಕೂಡ ಅನೇಕ ರೀತಿಯಿಂದ ಈ ಸದನದಲ್ಲಿ ಮತ್ತು ಸದನದ ಹೊರಗಡೆ ಸೇವೆಯನ್ನು ಸಲ್ಲಿಸಿದ್ದಾರೆ. ವಿಶೇಷವಾಗಿ ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಹಾಗೆ, ಡಾ. ತಿಮ್ಮೇಗೌಡರು ಆರೋಗ್ಯ ಸಚಿವರಾಗಿ,

ಗೃಹಮಂಡಳಿಯ ಅಧ್ಯಕ್ಷರಾಗಿ ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿ ಮತ್ತು ಮುಖಂಡರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ನಿಜವಾಗಿಯೂ ನಾವು ಇವತ್ತು ಒಳ್ಳೆಯ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ.

ಅದೇ ರೀತಿಯಾಗಿ ಶ್ರೀಮಾನ್ ಚಂದ್ರಶೇಖರ ಮಟ್ಟಿಯವರು ಕೂಡ ಒಬ್ಬ ಒಳ್ಳೆಯ ಸಂಘಟನೆ ಮಾಡುವ ಶಕ್ತಿ ಇರತಕ್ಕಂಥ ಒಬ್ಬ ಶಾಸಕರಾಗಿ ನಮ್ಮ ಪಕ್ಷದಿಂದ ಇದ್ದರು. ಅವರು ಕೂಡಿ ಆಕಸ್ಮಿಕವಾಗಿ ಒಂದು ಆಕ್ಸಿಡೆಂಟ್‌ನಲ್ಲಿ ತೀರಿಕೊಂಡು ಹೋಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬಕ್ಕೆ ಆ ಒಂದು ದುಃಖವನ್ನು ತಾಳಿಕೊಳ್ಳತಕ್ಕಂಥ ಶಕ್ತಿ ದೇವರು ಕೊಡಲಿ ಅಂತ ಹೇಳಿ ನಾನು ಬಯಸುತ್ತೇನೆ. ಅದೇ ರೀತಿಯಾಗಿ ರಾಯಚೂರಿನಿಂದ ಬಂದಂತಹ ಶ್ರೀಮಾನ್ ಕೃಷ್ಣಮೂರ್ತಿಯವರು ಕೂಡ ಹಿಂದುಳಿದಂತಹ ಸಮಾಜಕ್ಕೆ ಸೇರಿದ ಒಬ್ಬ ವ್ಯಕ್ತಿ ಮತ್ತು ಆ ಭಾಗದಲ್ಲಿ ಸಾಕಷ್ಟು ಕೆಲಸವನ್ನು ಮಾಡಿದಂತಹ ವ್ಯಕ್ತಿ ಕೂಡ ಹೌದು. ಅವರನ್ನೂ ಕೂಡ ನಾವು ಕಳೆದುಕೊಂಡಿದ್ದೇವೆ. ಅವರಿಗೂ ಕೂಡ ನಾವು ಈ ಸಂದರ್ಭದಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆ. ವಿಶೇಷವಾಗಿ ಇವತ್ತು ಇಲ್ಲಿ ನಾವೆಲ್ಲರೂ ಕೂಡ ಬಹಳ ದುಃಖದಲ್ಲಿ ಇರತಕ್ಕಂಥ ಮತ್ತು ವಿಶೇಷವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸತಕ್ಕಂಥಾದ್ದು ಅಂದರೆ, ರಾಷ್ಟ್ರಕವಿ ಕುವೆಂಪು ಅವರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು, ಯಡಿಯೂರಪ್ಪನವರು, ಉಪ ಮುಖ್ಯಮಂತ್ರಿಗಳು ಅವರ ಬಗ್ಗೆ ಮಾತನಾಡಿದ್ದಾರೆ. ಸುಮಾರು 80 ವರ್ಷಗಳ ಸಮೀಪ ಜೀವಿಸಿ ಸುಮಾರು 60–70 ವರ್ಷಗಳ ಕಾಲ ಕನ್ನಡ ಸಾಹಿತ್ಯದಲ್ಲಿ ಸೇವೆಯನ್ನು ಸಲ್ಲಿಸಿ ಮತ್ತು ಸಾಕಷ್ಟು ಪುಸ್ತಕಗಳನ್ನು ಬರೆದು ಅವರು ಸುಮಾರು 65ಕ್ಕಿಂತ ಹೆಚ್ಚಿನ ಕೃತಿಗಳನ್ನು ಬರೆದು ಒಂದು ಶೂದ್ರ ಸಮಾಜದಲ್ಲಿ ಹೊಸ ಒಂದು ಚೈತನ್ಯ ಮತ್ತು ಶಕ್ತಿಯನ್ನು ಅವರು ತಂದುಕೊಟ್ಟಿದ್ದರು ಎಂದರೆ ತಪ್ಪಾಗಲಿಕ್ಕೆ ಇಲ್ಲ. ಬಹುಶಃ ಶೂದ್ರ ಸಮಾಜದಲ್ಲಿ ಇಂತಹ ಒಂದು ಎತ್ತರವಾದಂತಹ ಸ್ಥಾನಕ್ಕೆ ಹೋಗಿ ಮುಟ್ಟಿದಂತಹ ವ್ಯಕ್ತಿ ಬಹಳ ವಿರಳ. ಅವರಿಗೆ ಜ್ಞಾನಪೀಠ ಅವಾರ್ಡ್ ಕೂಡ ಸಿಕ್ಕಿತು, ಪದ್ಮಭೂಷಣ ಅವಾರ್ಡ್ ಕೂಡ ಸಿಕ್ಕಿತು. ಸಾಕಷ್ಟು ಪ್ರಶಸ್ತಿಗಳು ಅವರಿಗೆ ಸಿಕ್ಕಿರಬಹುದು. ಆದರೆ ಅವರು ಈ ಮನುಷ್ಯಕುಲಕ್ಕೆ ವಿಶೇಷವಾಗಿ ಶೋಷಿತ ವರ್ಗಕ್ಕೆ ಜಾಗೃತಿ ಮಾಡತಕ್ಕಂಥಾದ್ದು ಮತ್ತು ಅವರಲ್ಲಿ ಸ್ವಾಭಿಮಾನ ಮೂಡಿಸತಕ್ಕಂಥ ಕೆಲಸ ಏನು ಮಾಡಿದರು ಅದು ಬಹಳ ಮುಖ್ಯ. ಈ ದೇಶದಲ್ಲಿ ಸಾವಿರಾರು ಜಾತಿಗಳು, ಧರ್ಮಗಳು ಭಾಷೆಗಳು ಇದ್ದಾಗ ಅವರವರ ಜಾತಿಗಳ ಬಗ್ಗೆ ಅವರವರ ಧರ್ಮದ ಬಗ್ಗೆ, ಅವರವರ ತತ್ವಗಳ ಬಗ್ಗೆ, ಅವರವರ ಆಚಾರವಿಚಾರಗಳ ಬಗ್ಗೆ, ಅವರವರ ನಡವಳಿಕೆಗಳ ಬಗ್ಗೆಯೇ ಹೆಚ್ಚಿನ ಒತ್ತುಕೊಟ್ಟು ಹೇಳತಕ್ಕಂಥ ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ತುಳಿತಕ್ಕೆ ಒಳಪಟ್ಟಂತಹ ಜನ ಏನು ಇದ್ದರು ಅವರ ಬಗ್ಗೆ ಧ್ವನಿಯನ್ನು ಎತ್ತತಕ್ಕಂಥಾದ್ದು ಇಲ್ಲಿಯವರೆಗೂ ಯಾರೂ ಕೂಡ ಮಾಡಿರಲಿಲ್ಲ.

ಆದರೆ ಅವರು ತಮ್ಮ ಸಾಹಿತ್ಯದ ಮುಖಾಂತರ ಅವರು ಈ ಶೋಷಿತ ವರ್ಗ ಧ್ವನಿಯಾಗಿ ಶೋಷಿತ ವರ್ಗದ ಪರವಾಗಿ ಮತ್ತು ಈ ಅಂಧ ಶ್ರದ್ಧೆ ಏನು ಇತ್ತು ಆ ಅಂಧ ಶ್ರದ್ಧೆ ವಿರುದ್ಧ ಹೋರಾಟ ಮಾಡಿ ಜನರನ್ನು ತಿರುಚತಕ್ಕಂಥಾದ್ದು ಸಾಹಿತ್ಯದ ಮುಖಾಂತರ ಬಹಳ ದೊಡ್ಡ ಕೆಲಸವನ್ನು, ಬಹಳ ದೊಡ್ಡ ಕೊಡುಗೆಯನ್ನು ಅವರು ಈ ಕರ್ನಾಟಕ ರಾಜ್ಯಕ್ಕೆ ಕೊಟ್ಟಿದ್ದಾರೆ. ಈಗಾಗಲೇ ಶ್ರೀಮಾನ್ ಜೆ.ಹೆಚ್. ಪಟೇಲ್‌ರವರು ಹೇಳಿದ ಹಾಗೆ ಇದು ಅವರು ಕೊಟ್ಟಂತಹ ಕೊಡುಗೆ ಸಾಹಿತ್ಯ ಏನು ಇದೆ ಅದು ನಾಟಕ ಮುಖಾಂತರ ಇರಬಹುದು, ಕವಿತೆ ಮುಖಾಂತರ ಇರಬಹುದು, ಬಾಲ ಕವಿತೆಯಾಗಿ ಅವರು ಬರೆದಂತಹ ಸಾಹಿತ್ಯ ಇರಬಹುದು ಅಥವಾ ಶ್ರೀ ರಾಮಾಯಣ ದರ್ಶನಂ ಎನ್ನತಕ್ಕಂಥ ಮಹಾಕಾವ್ಯ ಇಂಥಾದ್ದು ಎಲ್ಲವೂ ಕೂಡ ಇರಬಹುದು. ಆದರೆ ವಿಶೇಷವಾಗಿ ಅವರು ದಲಿತ ಜನಾಂಗದಲ್ಲಿ ಮೂಡಿಸಿದಂತಹ ಒಂದು ಜಾಗ್ರತೆ ಏನು ಇದೆ ಅದು ಬಹುಶಃ ನಾವು ಎಷ್ಟು ಹಣ ಖರ್ಚು ಮಾಡಿದರೂ ಕೂಡ ಬರುವುದಿಲ್ಲ. ಹೊರಗಿನ ಜಗತ್ತಿಗೆ ಅವರು ಮಾಡಿದಂತಹ ಕೆಲಸ ಅರ್ಥ ಆಗಬೇಕಾದರೆ ಕರ್ನಾಟಕ ರಾಜ್ಯದಲ್ಲಿಯೂ ಕೂಡ ಇಂತಹ ಒಬ್ಬ

ಮಹಾಕವಿ ಇದ್ದಾರೆಯೇ ಎನ್ನತಕ್ಕಂಥ ಒಂದು ತಿಳುವಳಿಕೆಯನ್ನು ನಾವು ಬೇರೆ ಜಗತ್ತಿಗೆ ಕೊಡಬೇಕಾದರೆ ಅದು ಹಿಂದಿಯಲ್ಲಿ ಆಗಲಿ, ಇಂಗ್ಲೀಷ್‌ನಲ್ಲಿ ಆಗಲಿ ಟ್ರಾನ್ಸ್‌ಲೇಶನ್ಸ್ ಮಾಡಿ ನಾವು ಕೊಟ್ಟರೆ ಬಹುಶಃ ಒಂದು ಒಳ್ಳೆಯ ಕೆಲಸ ನಾವು ಮಾಡಿದಂತೆ ಆಗುತ್ತದೆ. ಇವತ್ತು ನಾನು ಪೇಪರ್‌ನಲ್ಲಿ ನೋಡಿದೆ. ಶಿವಮೊಗ್ಗದಲ್ಲಿ ಹಿಂದಿನ ನ್ಯಾಯಾಧೀಶರಾದ ಶ್ರೀಮಾನ್ ಎನ್.ಡಿ. ವೆಂಕಟೇಶ್‌ರವರ ಅಧ್ಯಕ್ಷತೆಯಲ್ಲಿ ಒಂದು ಸೆಮಿನಾರ್ ಅನ್ನು ಕಂಡೆಕ್ಟ್ ಮಾಡಿ ಅನೇಕ ಸಾಹಿತಿಗಳು ಅಲ್ಲಿ ಸೇರಿ ಅವರ ಬಗ್ಗೆ ಅವರ ಸಾಹಿತ್ಯದ ಬಗ್ಗೆ ವಿಚಾರ ಮಂಡನೆವನ್ನು ಮಾಡಿದ್ದಾರೆ. ಅವರೂ ಕೂಡ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವರ ಸಾಹಿತ್ಯವನ್ನು ಯಾವ ರೀತಿಯಲ್ಲಿ ಇಂಗ್ಲೀಷ್‌ನಲ್ಲಿ ಆಗಲಿ, ಬೇರೆ ಭಾಷೆಗಳಲ್ಲಾಗಲಿ ತರ್ಜುಮೆ ಮಾಡಬೇಕು ಮತ್ತು ಯಾವ ರೀತಿಯಾಗಿ ಅವರ ತತ್ವಗಳನ್ನು ಪ್ರಚಾರ ಮಾಡಬೇಕು ಎನ್ನುವ ಬಗ್ಗೆ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ. ಡಾಕ್ಟರ್ ಜವರೇಗೌಡರು, ಭಗವಾನ್‌ರವರು ಮತ್ತು ಅನೇಕ ಸಾಹಿತಿಗಳು ಅದರಲ್ಲಿ ಇರತಕ್ಕಂಥವರು ಹೇಳಿದ್ದಾರೆ. ಸರ್ಕಾರ ಅದನ್ನು ಗಮನದಲ್ಲಿ ಇಟ್ಟುಕೊಂಡು ಅವರ ಸಾಹಿತ್ಯವನ್ನು ಟ್ರಾನ್ಸ್‌ಲೇಶನ್ ಮಾಡಿ ಬೇರೆ ಕಡೆಯೂ ಕೂಡ ಇದಕ್ಕೆ ಪ್ರಚಾರ ಆಗುವಂತೆ ಮಾಡುತ್ತಾರೆ ಎನ್ನುವ ನಂಬಿಕೆ ನನಗೆ ಇದೆ. ಬಹುಶಃ ಅವರು ಈ ರಾಜ್ಯದಲ್ಲಿ ಹುಟ್ಟುವುದಕ್ಕಿಂತ ಬೇರೆ ರಾಜ್ಯದಲ್ಲಿ ಹುಟ್ಟಿದರೆ ಇಲ್ಲಿಯವರೆಗೂ ಸಾಕಷ್ಟು ಪ್ರಚಾರ ಆಗುತ್ತಿತ್ತು. ಅವರು ಕರ್ನಾಟಕ ರಾಜ್ಯದಲ್ಲಿ ಇದ್ದ ಕಾರಣ ಅದು ಇಲ್ಲಿಗೆ ಸೀಮಿತವಾಗಿ ಉಳಿದಿದೆ.

ಅವರ ಅನಿಸಿಕೆಗಳು ವಿಶೇಷವಾಗಿ ವಿಶ್ವ ಮಾನವ ತತ್ವದ ಗುರಿ ಏನು ಇತ್ತು, ಆ ಒಂದು ತತ್ವದ ಪ್ರಚಾರ ಏನು ಇತ್ತು ಅದು ಕೆಲವೇ ಜನರಿಗೆ ಈಗಾಗಲೇ ಮಾನ್ಯ ಪಟೇಲ್‌ರವರು ಹೇಳಿದ ಹಾಗೆ ಅವರ ಜೊತೆ ಚರ್ಚೆ ಮಾಡುವಾಗ ಅವರ ಜೊತೆಯಲ್ಲಿದ್ದವರಿಗೆ ಅಥವಾ ಇಲ್ಲಿನ ಸಾಹಿತಿಗಳಿಗೆ ಒಂದು ಜನಾಂಗಕ್ಕೆ ಮಾತ್ರ ಸೀಮಿತವಾಗಿ ಉಳಿದಿದೆ. ಅದನ್ನು ಬೇರೆ ಕಡೆ ನಾವು ಹೇಳಿದ್ದರೆ ಬಹುಶಃ ಇವತ್ತು ಯಾವ ರೀತಿಯಾಗಿ ರವೀಂದ್ರ ಠಾಗೂರ್ ಜೀ ಅವರ ಬಗ್ಗೆ ಆಗಲಿ ಅಥವಾ ಉತ್ತರ ಭಾರತದ ಅನೇಕ ಕವಿಗಳ ಬಗ್ಗೆ ಆಗಲಿ ಅಥವಾ ನ್ಯಾಷನಲಿಸ್ಟ್ ಮೂವ್‌ಮೆಂಟ್ ನಡೆಸಿದಂತಹ ಶ್ರೀಮಾನ್ ರಾಮಸ್ವಾಮಿ ಪೆರಿಯಾರ್ ಆಗಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರುಗಳಲ್ಲಿ ಅಥವಾ ಮಹಾತ್ಮ ಪುಲೆ ಅವರಾಗಲಿ ಇಂತಹವರ ಬಗ್ಗೆ ಇಡೀ ಭಾರತದ ದೇಶದಲ್ಲಿ ಅಷ್ಟೇ ಅಲ್ಲ, ಇಡೀ ಪ್ರಪಂಚದಲ್ಲೇ ಅವರ ಬಗ್ಗೆ ಅವರ ಸಾಹಿತ್ಯದ ಬಗ್ಗೆ ಅಥವಾ ಅವರ ಲೇಖನಗಳ ಬಗ್ಗೆ ಚರ್ಚೆಗಳು ಆಗುತ್ತವೆ. ಅದೇ ರೀತಿಯಾಗಿ ಇವತ್ತು ಇದರ ಅವಶ್ಯಕತೆ ಇದೆ. ಅದಕ್ಕಾಗಿ ಹಿಂದೆ ಸರ್ಕಾರ ಒಂದು ಟ್ರಸ್ಟ್ ಮಾಡಿ 30 ಎಕರೆ ಜಮೀನನ್ನು ಕೂಡ ಕುಪ್ಪಳ್ಳಿಯಲ್ಲಿ ಕೊಟ್ಟು ಅಲ್ಲಿ ಅವರ ಸ್ಮಾರಕವನ್ನು ಮಾಡಬೇಕೆನ್ನುವ ನಿರ್ಣಯವನ್ನು ತೆಗೆದುಕೊಂಡು ಅದಕ್ಕೆ ಸ್ವಲ್ಪ ಹಣ ಕೂಡ ಖರ್ಚಾಗಿದೆ. ಕವಿಶೈಲಿ ಅಂತ ಮಾಡಿದೆ. ಅದಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಟ್ಟು ಹಣಕೊಟ್ಟು ಇದನ್ನು ಬೆಳೆಸತಕ್ಕಂಥ ಅವಶ್ಯಕತೆ ಇದೆ. ಅವರ ತತ್ವದ, ಅವರ ಸಾಹಿತ್ಯದ ಅವಶ್ಯಕತೆ ಹಿಂದಿನ ದಿವಸಗಳಿಗಿಂತ ಇಂದಿನ ದಿವಸಗಳಲ್ಲಿ ಹೆಚ್ಚು ಇದೆ. ಏಕೆಂದರೆ ಇವತ್ತು ದೇಶ ಒಂದು ಕಡೆ ಧರ್ಮದ ಹೆಸರಿನಲ್ಲಿ ಭಾಷೆಯ ಹೆಸರಿನ ಮೇಲೆ ಯಾವಾಗ ನಾವು ಒಡಕು ಆಗುತ್ತಿದ್ದೇವೆ ಅಥವಾ ಆ ಭಾಷೆ ಧರ್ಮದ ಹೆಸರಿನ ಮೇಲೆ ಮುಂದು ಬರುತ್ತಿದ್ದೇವೆ ಅಥವಾ ಅದನ್ನೇ ಹೆಚ್ಚು ನಾವು ಬಳಸಿಕೊಳ್ಳುತ್ತಿದ್ದೇವೆ. ನಮ್ಮ ಜೀವನದಲ್ಲಿ ನಮ್ಮ ಸಮಾಜದಲ್ಲಿ,ಅಂತಹ ಸಮಾಜದಲ್ಲಿ ಈ ವಿಶ್ವ ಮಾನವನ ತತ್ವ ಕುವೆಂಪುರವರು ಹೇಳಿ ಕೊಟ್ಟಿದ್ದಾರೋ ಅದನ್ನು ನಾವು ಬೆಳೆಸತಕ್ಕಂಥಾದ್ದು ಹೆಚ್ಚು ಅವಶ್ಯಕತೆ ಇದೆ. ಅದಕ್ಕೆ ನಾವೆಲ್ಲರೂ ಕೂಡ ಪ್ರೋತ್ಸಾಹ ನೀಡತಕ್ಕಂಥ ಅವಶ್ಯಕತೆ ಇದೆ. ಅವರ ತತ್ವವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಹೋದರೆ ಆಗ ನಾವು ನಿಜವಾದಂತಹ ಶ್ರದ್ಧಾಂಜಲಿಯನ್ನು ಅರ್ಪಿಸಿದಂತೆ ಆಗುತ್ತದೆ. ಇಲ್ಲದಿದ್ದರೆ ಅವರು ಬರೀ ಹೇಳಿದರು ಎಂದು ಅಷ್ಟಕ್ಕೆ ಮಾತ್ರ ನಾವು ಸೀಮಿತವಾಗಿ ಸುಮ್ಮನೇ ಶ್ರದ್ಧಾಂಜಲಿ ಅರ್ಪಿಸಿದರೆ ಅದು ಸಲ್ಲತಕ್ಕಂಥಾದ್ದು ಅಲ್ಲ. ಇವತ್ತು

ನಿಜವಾಗಿಯೂ ಅವರ ತತ್ವವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳತಕ್ಕಂಥ ಅವಶ್ಯಕತೆ ಇದೆ. ಇವತ್ತು ನಾವು ಜಾತಿ ಮತ್ತು ಧರ್ಮದ ಹೆಸರಿನ ಮೇಲೆ ಮುಂದೆ ಬರಬೇಕು, ದೇಶ ಕಟ್ಟಬೇಕು ಎನ್ನತಕ್ಕಂಥಾದ್ದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಏನು ಬರುತ್ತಿದ್ದೇವೆ ಆ ತತ್ವಕ್ಕೆ ಮತ್ತು ಇವತ್ತು ನಾವು ಹೇಳತಕ್ಕಂಥಾದಕ್ಕೆ ಹೋಲಿಸಿಕೊಂಡು ನೋಡಿದಾಗ ಎಷ್ಟು ವ್ಯತ್ಯಾಸ ಇದೆ, ಅವರ ತತ್ವದಿಂದ ಎಷ್ಟು ದೂರ ಇದ್ದೇವೆ ಎಂದು ಎನಿಸುತ್ತದೆ. ಅದಕ್ಕಾಗಿ ನಾನು ಹೆಚ್ಚಿಗೆ ಪ್ರಸ್ತಾಪ ಮಾಡದೆ ಅವರು ಇಟ್ಟಂಥ ಪ್ರಸ್ತಾವನೆಯ ನಾನು ಅನುಮೋದಿಸಿ, ಇನ್ನೂ ಹೆಚ್ಚಿನ ರೀತಿಯಲ್ಲಿ ಅವರ ಸಾಹಿತ್ಯಕ್ಕೆ ನಾವು ಸಹಾಯ ಮಾಡಬೇಕು, ಈಗ ಮಾಡಿದಂಥ ಟ್ರಸ್ಟ್‌ಗೆ ಕೂಡ ಹೆಚ್ಚಿನ ಬೆಂಬಲವನ್ನು ನೀಡಬೇಕು, ನಿನ್ನೆ ಶಿವಮೊಗ್ಗದಲ್ಲಿ ನಡೆದಂಥ ಸೆಮಿನಾರ್‌ನಲ್ಲಿ ಕೈಗೊಂಡ ನಿರ್ಣಯಗಳ ಬಗ್ಗೆಯೂ ಕೂಡ ತಾವು ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ):– ಮಾನ್ಯ ಸಭಾಧ್ಯಕ್ಷರೇ, ಹಲವಾರು ಜನ ಮಹನೀಯರು ರಾಷ್ಟ್ರಕ್ಕಾಗಿ ಮತ್ತು ರಾಜ್ಯಕ್ಕಾಗಿ, ಸಾಹಿತ್ಯ ಕ್ಷೇತ್ರ ಹಾಗೂ ರಾಜಕಾರಣದಲ್ಲಿ ಮತ್ತು ರಾಷ್ಟ್ರಸೇವೆಯಲ್ಲಿ ಇದ್ದಂಥವರು ನಮ್ಮನ್ನು ಅಗಲಿ ಹೋಗಿದ್ದಾರೆ. ತಮ್ಮಿಂದ ಮತ್ತು ಮಾನ್ಯ ಮುಖ್ಯಮಂತ್ರಿಯವರಿಂದ ಮಂಡಿತವಾಗಿರತಕ್ಕಂಥ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ ಎರಡು ಮಾತುಗಳನ್ನು ಆಡಬೇಕೆಂಬ ಎಲ್ಲರ ಆಶೆಯ ಜೊತೆಗೆ ನನ್ನ ಆಶೆಯೂ ಇದೆ ಎಂಬ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಚಂದ್ರಶೇಖರ ಮಟ್ಟಿಯವರು ನಮ್ಮ ಕರ್ನಾಟಕ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಯವರಾಗಿದ್ದರು ಎಂಬ ಉಲ್ಲೇಖದ ಜೊತೆಗೆ ವಿಧಾನ ಪರಿಷತ್ತಿನ ಸದಸ್ಯರು ಕೂಡ ಆಗಿದ್ದರು. ಅವರು ಅಪಘಾತದಲ್ಲಿ ಮೃತರಾದರು. ಅವರಿಗೆ ಬಹಳ ವಯಸ್ಸೇನೂ ಆಗಿರಲಿಲ್ಲ. ಅವರ ನಿಧನದಿಂದಾಗಿ ವೈಯಕ್ತಿಕವಾಗಿ ನನಗೆ ಮತ್ತು ಅವರ ಸಂಪೂರ್ಣ ಗೆಳೆಯರ ವೃತ್ತ ಏನಿತ್ತು, ಅವರೆಲ್ಲರಿಗೂ ದೊಡ್ಡ ನಷ್ಟವಾದಂತಾಗಿದೆ. ವಿಧಾನ ಪರಿಷತ್ತಿನ ಮೂಲಕ ಅವರ ಸೇವೆ ಈ ರಾಜ್ಯಕ್ಕೆ ಏನಿತ್ತು, ಹಾಗೆ ಸಿಗತಕ್ಕಂಥ ಸೇವೆಯು ಕೂಡ ನಷ್ಟವಾಗಿದೆ. ಆ ದುಃಖದಲ್ಲಿ ನಾವೆಲ್ಲರೂ ಸೇರಿ ಭಾಗಿಗಳಾಗಿದ್ದೇವೆ. ಅದೇ ರೀತಿಯಲ್ಲಿ ಅನೇಕರು ಮಧ್ಯ ಮತ್ತು ಚಿಕ್ಕ ವಯಸ್ಸಿನಲ್ಲಿಯೇ ನಿಧನರಾಗಿರತಕ್ಕಂಥಾದ್ದು ಈ ಪಟ್ಟಿಯಲ್ಲಿ ಕಂಡುಬರುತ್ತದೆ. ಅವರೆಲ್ಲರ ನಿಧನಕ್ಕೆ ಅತೀವ ದುಃಖವನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಇನ್ನು ಉಳಿದಿರತಕ್ಕಂಥ ಹಾಗೂ ಪ್ರಾಮುಖ್ಯರಾಗಿರತಕ್ಕಂಥ ವ್ಯಕ್ತಿ, ಅನೇಕ ಜನ ಭಾಷಣಕಾರರು ಹೇಳಿದ ಹಾಗೆ, ಶೂದ್ರಕವಿ, ರಾಷ್ಟ್ರಕವಿ ಕುವೆಂಪುರವರ ಬಗ್ಗೆ ಆ ಕಾಲದಲ್ಲಿ ಕನ್ನಡಕ್ಕೆ ಆಗತಕ್ಕಂಥ ಅನ್ಯಾಯದ ವಿರುದ್ಧ ತಮ್ಮ ಲೇಖನಗಳ ಮುಖಾಂತರ ಸಿಡಿದೆದ್ದಂಥ ಕ್ರಾಂತಿಕಾರಕ ಕವಿ ಅವರಾಗಿದ್ದರು. ಆಗಲೇ ಅವರು ಒಂದು ಮಾತನ್ನು ಹೇಳಿದ್ದರು. ಕನ್ನಡ ಭಾಷೆಯ ಬೆಳವಣಿಗೆಗೆ ಸಂಪೂರ್ಣವಾಗಿ ಅಡ್ಡಬರತಕ್ಕಂಥವು ದೇಷಭಾಷೆ, ರಾಷ್ಟ್ರಭಾಷೆ ಎನ್ನತಕ್ಕಂಥ ಮಾತನ್ನು ಆ ಕಾಲದಲ್ಲಿ ಆಡಿ ಬರೆದು, ತಮ್ಮ ಪ್ರತಿಭಟನೆಯನ್ನು ಬಹಳ ಶಕ್ತಿಯುತವಾಗಿ ವ್ಯಕ್ತಪಡಿಸಿರತಕ್ಕಂಥವರು ಅವರಾಗಿದ್ದರು. ಯಾವುದೇ ಸಹಕಾರ ಮತ್ತು ಬೆಂಬಲವನ್ನು ಆಗಿನ ಸಮಾಜ ಅವರಿಗೆ ಕೊಡಲಿಲ್ಲ. ಆದರೂ ಕೂಡ ಅವರು ತಮ್ಮ ಹಠವನ್ನು ಬಿಡಲಿಲ್ಲ. ವಿಶ್ವಮಾನವ ತತ್ವವನ್ನು ಸಾರತಕ್ಕಂಥ ಈ ಮಹಾನ್ ವ್ಯಕ್ತಿ, ಅಂಥ ಪರಿಸ್ಥಿತಿಯಲ್ಲಿಯೂ ಕೂಡ ತಮಗೆ ಸರಿಕಂಡಿರತಕ್ಕಂಥ ವಿಚಾರಗಳನ್ನು ಸ್ಪಷ್ಟವಾಗಿ ಇಡತಕ್ಕಂಥ ಬರೆಯತಕ್ಕಂಥ ಸರ್ವಶಕ್ತಿಯನ್ನು ಅವರು ರೂಢಿಸಿಕೊಂಡಿದ್ದರು. ಭಾರತಮಾತೆಯ ಮೇಲೆ ಬರೆಯತಕ್ಕಂಥ ಸಂದರ್ಭದಲ್ಲಿ ಅವರ ರಾಷ್ಟ್ ಪ್ರೇಮವು ಬಹಳ ಆಳವಾಗಿ ಅಭಿವ್ಯಕ್ತವಾಗಿರತಕ್ಕಂಥಾದ್ದನ್ನು ನಾವು ಕಾಣುತ್ತೇವೆ.

ಆಂಗ್ಲ ಸಾಹಿತ್ಯದಲ್ಲಿ ಬಹಳ ಅಭಿರುಚಿಯನ್ನಿಟ್ಟು ಬರವಣಿಗೆಯನ್ನು ಪ್ರಾರಂಭ ಮಾಡಿದವರು. ಕನ್ನಡಕ್ಕಾಗಿರುವ ಅನ್ಯಾಯವನ್ನು ಕಂಡು ಸಿಡಿದೆದ್ದು ಅಪ್ರತಿಮ ಲೇಖಕರಾಗಿ ಈ ಶತಮಾನದಲ್ಲಿ

ಯಾರೂ ಕೂಡ ಆ ರೀತಿ ಇನ್ನು ಮೇಲೆ ಬರೆಯಲು ಸಾಧ್ಯವೇ ಇಲ್ಲ ಎಂಬ ಅನಿಸಿಕೆ ಅವರ ಬರವಣಿಗೆಗಳನ್ನು ಓದಿದವರಿಗೆ ಅನಿಸದೇ ಇರಲಾರದೆಂಬ ಅಭಿಪ್ರಾಯ ನಮಗೆಲ್ಲರಿಗೂ ಒಡಮೂಡಿಬರುತ್ತದೆ. ಕಾನೂರು ಸುಬ್ಬಮ್ಮ ಹೆಗ್ಗಡಿತಿ ಕಾದಂಬರಿಯನ್ನು ಮೊಟ್ಟಮೊದಲು ಅವರು ಬರೆದಾಗ ಅವರು ಅಲ್ಲಿ ಕೊಡುವ ವಿವರಗಳ ಬಗ್ಗೆ ನಾನು ಕಾಲದ ಅಭಾವದಿಂದ ಹೋಗುತ್ತ ಇಲ್ಲ, ಕೆಲವು ಪದಗಳನ್ನು ಅವರೇ ಹುಟ್ಟಿಹಾಕುತ್ತಾರೆ, ಗಿಳಿಮಾತನ್ನು ನಾವು ಕೇಳಿದ್ದೇವೆ, ಕೋಗಿಲೆ ಮಾತು ಕೇಳಿದ್ದೇವೆ, ಆದರೆ ಕಾಜಾಣ ಎಂಬ ಮಾತನ್ನು ನಾವು ಕೇಳಿರಲಿಲ್ಲ, ಗಿಳಿ ಕಾಜಾಣ ಕೋಗಿಲೆ ಈ ಮಾತುಗಳು ಕುವೆಂಪುರವರರಲ್ಲಿ ಮಾತ್ರ ಸಿಗುತ್ತವೆ ವಿನಃ ಬೇರೆಯವರಲ್ಲಿ ಎಂದಿಗೂ ಸಿಗಲು ಸಾಧ್ಯವೇ ಇಲ್ಲ. ರವಿ ಮಲೆನಾಡಿನ ಮಡಿಲಲ್ಲಿ ಕುಪ್ಪಳ್ಳಿ ಇರುವುದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನಲ್ಲಿ. ಅವರ ಕಾಲದ ಆ ಕಾಡು – ಈಗಿರುವಂತಹ ಕಾಡಲ್ಲ ಅದು. ಅವರು ಬರೆಯುತ್ತಿದ್ದ ಕಾಲದಲ್ಲಿ ಬಹಳ ಗಿಳಿ ಕಾಜಾಣ ಕೋಗಿಲೆಗಳು ತುಂಬಿರಬೇಕು ಎಂದು ನನ್ನ ಅಭಿಪ್ರಾಯ. ಆ ಜನಗಳನ್ನು ಕೂಡ ಕೇಳಿದೆ. ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಆ ಟ್ರಸ್ಟ್ ಏನಿತ್ತು ಅದರ ಬಗ್ಗೆ ಆಸೆಪಟ್ಟು ಅಲ್ಲಿ ಓಡಿಹೋದ ಶ್ರೀ ಡಿ.ಬಿ. ಚಂದ್ರೇಗೌಡರು ಈ ಸದನಕ್ಕೆ ಈ ಸಲ ಬರುವುದಕ್ಕೆ ಆಗಲಿಲ್ಲ. ತೀರ್ಥಹಳ್ಳಿ ಅವರ ಕ್ಷೇತ್ರವಾಗಿತ್ತು. ನಾವಲ್ಲಿ ಹೋದಾಗ ಈಗಿರುವ ಕಾಡನ್ನು ಎಷ್ಟೋ ಸಲ ನಾನು ನೋಡಿದ್ದೇನೆ. ಆದರೆ ಆ ಹಳ್ಳಿಗೆ ನಾನು ಹೋಗಿರಲಿಲ್ಲ, ಸುತ್ತಮುತ್ತ ಕೆಲವು ಕಡೆ ಹೋಗಿದ್ದೆ. ಬರೀ ಗಿಳಿ ಕಾಜಾಣ ಕೋಗಿಲೆಗಳೇ ತುಂಬಿರಬೇಕು ಆ ಕಾಲದಲ್ಲಿ. ಏಕೆಂದರೆ ಒಳ್ಳೆಯ ತಾಣ ಅದು. ಅಲ್ಲಿನ ವನಸಿರಿ, ಆ ಗುಡ್ಡಕಾಡುಗಳು ಅದರ ಮಧ್ಯೆ ಯಾರಿಗಾದರೂ ಕೂಡ ಮೈ ಪುಳಕಿತಗೊಳ್ಳುವಂತಹ ವಿಶೇಷ ಸೌಂದರ್ಯರಾಶಿ ಅಲ್ಲಿ ಹುಟ್ಟಿ ಬೆಳೆದಿದೆ. ಎಷ್ಟೋ ಕವಿಗಳು ಹುಟ್ಟಿ ಬೆಳೆದುಬರುವುದಕ್ಕೆ ವಿಶೇಷವಾದ ಸಂದರ್ಭಗಳು ಅವು. ಹಾಗೆಂದು ಬೇರೆ ಕಡೆಯಿಂದ ಬಂದಿಲ್ಲ ಅಂತಲ್ಲ. ದ.ರಾ. ಬೇಂದ್ರೆಯವರನ್ನು ನಾವು ತೆಗೆದುಕೊಂಡರೆ ಇದರಿಂದ ಬಹುದೂರ ಇರುವವರು. ಅವರು ಹೇಳುವ ವಿಚಾರಧಾರಗಳೇ ಬೇರೆ ಸಮಾಜದ ಹಲವಾರು ಮುಖಗಳನ್ನು ಮತ್ತೊಮ್ಮೆ ನಮ್ಮ ರಾಜ್ಯ ಸಮಾಜಕ್ಕೆ ಪರಿಚಯ ಮಾಡಿಕೊಡುವ ವಿಧಿವಿಧಾನಗಳೇ ಬೇರೆ. ಆದರೆ ಕುವೆಂಪುರವರ ವಿಚಾರಧಾರೆಗಳೇ ಬೇರೆ.

ಅಲ್ಲಿನ ಅನ್ಯಾಯಗಳ ವಿರುದ್ಧ ಸಿಡಿದೇಳುವ ವಿಚಾರಧಾರೆ ಒಂದು ಕಡೆಗಿದ್ದರೆ ಆ ವನಸಿರಿ ಸೊಬಗನ್ನು ಮೆಲುಕು ಹಾಕುತ್ತ ಅದರ ಬಗ್ಗೆ ತಮ್ಮ ವಿಚಾರಧಾರೆ ಇಡುವುದು, ಸೂರ್ಯ ಹುಟ್ಟಿ ಬರಬೇಕಾದರೆ ಗುಡ್ಡಗಳ ಮಧ್ಯೆ ಅವರು ಹೇಳುವ ಅನೇಕ ಮಾತುಗಳನ್ನು ನಾನು ಮರೆತಿದ್ದೇನೆ, ಕೆಲವನ್ನು ಮಾತ್ರ ಮೆಲಕು ಹಾಕಬಹುದೆಂದು ಮನಸ್ಸು ಒಂದೊಂದು ಸಲ ಎಳೆಯುತ್ತಿರುತ್ತದೆ. ಸೂರ್ಯ ಹುಟ್ಟಿ ಬರಬೇಕಾದರೆ ಪ್ರಶಾಂತ ವಾತಾವರಣದ ಮಧ್ಯೆ ಅಲ್ಲಿ ಹಸಿರು ದಡಗಳ ನಡುವೆ ಜಳಜಳನೆ ಜಳಪಿ ಗಳಗಳನೆ ಗಳುಪಿ ಇಳಿದೋಡುವ ಮಲೆಯತ್ತೋರೆ. ಇಂತಹ ಅನೇಕ ವಿಚಾರಗಳು ನನ್ನ ಹತ್ತಿರ ಇವೆ. ಹಸಿರು ದಡಗಳ ನಡುವೆ ಜಳಜಳನೆ ಜಳಪಿ ಗಳಗಳನೆ ಗಳುಪಿ ಇಳಿದೋಡುವ ಮಲೆಯತ್ತೋರೆ, ಸೂರ್ಯ ಹುಟ್ಟಿ ಬರುವಾಗ ಸೂರ್ಯ ರಶ್ಮಿ ಹರಿಯುವ ನೀರಿನ ಮೇಲೆ ಬಿದ್ದಾಗ ಆ ಹಸಿರು ದಡಗಳು ಅಲ್ಲಿ ಮಾತ್ರ ಸಿಗುತ್ತದೆ. ಆ ವನಸಿರಿಯ ಮಡಿಲಲ್ಲಿ ಮಾತ್ರ ಸಿಗುವುದಕ್ಕೆ ಸಾಧ್ಯ. ಈಗಲೂ ಕೂಡ ಶೃಂಗೇರಿ ಆಗುಂಬೆ, ತೀರ್ಥಹಳ್ಳಿ, ಹೊಸನಗರ ಆ ಕಡೆಯ ಭಾಗಗಳಲ್ಲಿ ಮಾತ್ರ ಸಾಧ್ಯ. ಕೊಡಗು ಇವೆಲ್ಲಾ ಬಹಳ ಒಳ್ಳೆಯ ತಾಣಗಳು. ಸೂರ್ಯ ರಶ್ಮಿ ಬಿದ್ದಾಗ ಝುಲ ಝುಲನೆ ಝುಲಪಿ ಫಳಕ್ ಫಳಕ್ ಎಂದು ಹೆಳೆಯಬೇಕು.

ಶ್ರೀ ಜೆ.ಹೆಚ್. ಪಟೇಲ್:– ಬೊಂಬಾಯಿ, ದಿಲ್ಲಿ ಇಂತಹ ಪಟ್ಟಣಗಳಲ್ಲಿ ಹುಟ್ಟಿದಂತಹವರಿಗೆ ತಾವು ಹೇಳಿದ ಪ್ರಾಣಿಗಳು, ಆ ದೃಶ್ಯಗಳನ್ನು ನೋಡಲಿ ಎಂದು ಕೆಲವು ಕಡೆ ಝೂಗಳನ್ನು ಮಾಡಿರುತ್ತಾರೆ. ಕೆಲವರು ಅವರ ಜೀವನದಲ್ಲಿಯೇ ಇಂಥವನ್ನು ನೋಡಿರುವುದಿಲ್ಲ. ಇಂತಹ ಪ್ರಾಣಿಗಳ

ಪಕ್ಷಿಗಳ ಶಬ್ದ ಕೇಳದೇ ಇರತಕ್ಕಂತಹ, ಇವುಗಳನ್ನು ನೋಡದೇ ಇರತಕ್ಕಂತಹ ಕೋಟ್ಯಾಂತರ ಜನ ಪಟ್ಟಣದಲ್ಲಿ ಹುಟ್ಟಿದವರು ಇದ್ದಾರೆ. ಅವರಿಗೆ ಯಾವ ಕವಿಯನ್ನು ಹುಡುಕಬೇಕೋ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಕೆಲವರು ಹಳ್ಳಿಯಲ್ಲಿ ಹುಟ್ಟಿದವರೂ ಪಟ್ಟಣಕ್ಕೆ ಬಂದು ಸೇರಿ ಈ ರೀತಿಯಾಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ:- ಅವರ ಭಾವನೆಗಳ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಹರಿಯುತಕ್ಕಂತಹ ನೀರು ಹರಿದು ಹೋಗುತ್ತದೆಂಬ ಮಾತನ್ನು ಆಡಿದ್ದರೆ ಸಾಕಾಗಿತ್ತು. ಆದರೆ ಕವಿಯ ಶೈಲಿಯೇ ಬೇರೆ. ಸಾಮಾನ್ಯರಿಗೆ ದೊರಕದೇ ಎಟುಕದೇ ಇರತಕ್ಕಂತಹ ಭಾವನೆಗಳಿಂದ ಬಲುದೂರ ಇರತಕ್ಕಂತಹ ವಿಚಾರಧಾರೆಯ ಶೈಲಿ ಅಭಿವ್ಯಕ್ತವಾಗುತ್ತದೆ. ಅಂತಹ ಮಹಾನ್ ಕವಿಯ ಕಾವ್ಯಶೈಲಿಯ ಮುಖಾಂತರ ಭಾವನೆಗಳು ಹೊರಹೊಮ್ಮುತ್ತವೆ. ಅದು ಬೇರೆಯವರಿಗೆ ಬರುವುದಕ್ಕೆ ಸಾಧ್ಯವಿಲ್ಲ. ಝುಲ ಝುಲನೆ ಜಲಪಿ ಅಂದರೆ ಸೂರ್ಯರಶ್ಮಿ ಅದರ ಮೇಲೆ ಬಿದ್ದಾಗ ಫಳಕ್ ಫಳಕ್ ಎಂದು ಹೊಳೆಯುತ್ತವೆ. ಝುಲಕ್ ಝುಲಕ್ ಎಂದು ಹೊಳೆಯುವುದು ಗಲ ಗಲನೆ ಗಲಪಿ ಅಂದರೆ ನೀರು ಹರಿದು ಹೋಗಬೇಕಾದರೆ ಸುಮ್ಮನೆ ಹೋಗುವುದಿಲ್ಲ. ಇಲ್ಲಿ ಅದು ಸೌಂಡ್ ಮಾಡಿದ್ದನ್ನು ಹೇಳುತ್ತಾರೆ. ಆದರೆ ಕವಿಯ ಶೈಲಿ ಅದಲ್ಲ. ಇಲ್ಲಿ ಚಂದ್ರ ಯಾವಾಗ ಹುಟ್ಟಿ ಯಾವಾಗ ಹೋಗುತ್ತಾನೆಂದು ಗೊತ್ತಾಗುವುದಿಲ್ಲ. ಅಮಾವಾಸ್ಯೆ, ಹುಣ್ಣಿಮೆ ಯಾವಾಗ ಬರುತ್ತದೆ ಎಂದು ತಿಳಿಯುವುದಿಲ್ಲ. ಇದರಿಂದ ಬಲುದೂರ ಇರತಕ್ಕಂತಹ ಹಲವಾರು ಬಲ್ಬುಗಳ ಮಧ್ಯೆ ಕೆಲವು ಹೋಗಿಬಿಟ್ಟಿವೆ. ಇಂತಹ ಬೆಂಗಳೂರು ನಗರದಲ್ಲಿ ಬೆಳದಿಂಗಳಿದ್ದರೂ ಗೊತ್ತಾಗುವುದಿಲ್ಲ. ಆದರೆ ಅಲ್ಲಿ ಹಾಗಲ್ಲ. ನೀವು ಬೆಂಗಳೂರಿಗೆ ಬಂದು ನಿಂತು ಬಿಡುತ್ತಿದ್ದೀರಿ.

ಅಧ್ಯಕ್ಷರು:- ನಮ್ಮ ಕೋಲಾರದವರಿಗೆ ಅದರ ಕಲ್ಪನೆ ಕೂಡ ಇರುವುದಿಲ್ಲ. ನಮ್ಮ ಕಷ್ಟ ಸ್ವಲ್ಪ ಹೇಳಿ.

ಶ್ರೀ ಎಸ್. ಬಂಗಾರಪ್ಪ:- ಝುಲ ಝುಲನೆ ಝುಲಪಿ ಗಳಗಳನೆ ಗಳಪಿ ಅಂದರೆ ನೀರು ಹರಿದು ಹೋಗಬೇಕಾದರೆ ಸುಮ್ಮನೆ ಹೋಗುವುದಿಲ್ಲ ಶಬ್ದ ಮಾಡುತ್ತದೆ. ಗಲ ಗಲ ಝುಲ ಝುಲ ಎಂದು ಶಬ್ದ ಮಾಡುತ್ತದೆ.

ಶ್ರೀ ಕೆ.ಎನ್. ನಾಗೇಗೌಡ:- ರವಿ ಸೂರ್ಯನ ಬೆಳಕು ನೋಡಿ ಅವರು ಮುಖ್ಯಮಂತ್ರಿಯಾದರು. ಇವರು ಉಪ ಮುಖ್ಯಮಂತ್ರಿಯಾದರು. ಅವರು ವಿರೋಧ ಪಕ್ಷದ ನಾಯಕರಾದರು. ಸೂರ್ಯ ರವಿಯ ಬೆಳಕು ಇದೆಲ್ಲಾ ನೋಡಿದರೆ ಸಿಗುತ್ತದೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ:- ಹಸಿರು ದಡಗಳ ನಡುವ ಝುಲಝುಲನೆ ಜಲಪಿ ಗಲಗಲನೆ ಗಲಪಿ ಇಳಿದು ಓಡುವ ಮಲೆಯ ತೊರೆ, ಮಲೆನಾಡಿನ ತೊರೆ. ಡಾ. ಡಿ.ವಿ.ಜಿಯವರದ್ದು ಮತ್ತೊಂದು ಉಮರನ ಒಸಗೆ ಇದೆ. ಅಷ್ಟು ಏಕೆ ಪ್ರೊಫೆಟ್ ಆಫ್ ಉಮರ್ ಖಯಾಂ ಜಾನ್ ಫೆಡ್ಸ್‌ರಾಲ್ಡ್ ಅವರು ಪರ್ಶಿಯನ್ ಭಾಷೆಯಿಂದ ತರ್ಜುಮೆ ಮಾಡಿದ್ದು ಪ್ರಪಂಚದ ನೂರಾರು ಭಾಷೆಯಲ್ಲಿ ಇದೆ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್:- ಕುವೆಂಪು ಅವರು ನಮ್ಮಂತಹ ಜನ ಅರ್ಥ ಮಾಡಿಕೊಳ್ಳುವಂತಹ ರೀತಿಯಲ್ಲಿ ಬಹಳ ಚೆನ್ನಾಗಿ ಬರೆದಿದ್ದಾರೆ. ಮೂಡುವನು ರವಿ ಮೂಡುವನು ಏರುವನು ರವಿ ಏರುವನು ಬಾನೊಳು ಸಣ್ಣಗೆ ತೋರುವನು ಏರಿದವನು ಚಿಕ್ಕವನು ಇರಬೇಕೆಲೆ ಎಂಬ ಮಾತನು ಸಾರುವನು. ಏರುವನು ಬಹಳ ಸಣ್ಣವನು ಇರಬೇಕು ಎನ್ನುವ ಮಾತನ್ನು ಅವನು ಹೇಳಿದ್ದಾನೆ. ಅಂದರೆ ಮೇಲೇರುತ್ತಾ ಮೇಲೇರುತ್ತಾ ಬಹಳ ಚಿಕ್ಕವನೇನೋ ಎನ್ನುವ ರೀತಿಯಲ್ಲಿ ಜನಕ್ಕೆ ಕಾಣಿಸುತ್ತಾನೆ. ಅಂದರೆ ರವಿ ಬಹಳ ದೊಡ್ಡವನೆಂದು ತೋರಿಸಿಕೊಳ್ಳುವುದಿಲ್ಲ. ಅಂದರೆ

ದೊಡ್ಡವರು ಯಾವಾಗಲೂ ಬಹಳ ಚಿಕ್ಕವರ ರೀತಿ ಇರುತ್ತಾರೆ ಎನ್ನುವುದನ್ನು ಅವರು ಇಲ್ಲಿ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ರಾಷ್ಟ್ರಕವಿ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಹೋದರೆ 1 ತಿಂಗಳಲ್ಲ ವರ್ಷಗಟ್ಟಲೆ ಮಾತನಾಡಬಹುದು. ಇದೆಲ್ಲಾ ಬಿಟ್ಟು ಪ್ರಾರಂಭ ಮಾಡೋಣವೆಂದರೆ ಕಾವ್ಯವನ್ನು ಶುರು ಮಾಡೋಣ. ತಾವು ಅವಕಾಶ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು:– ಈಗ ನಮಗೆ ಒಂದು ಅಂದಾಜು ಸಿಕ್ಕಿದರೆ ಮುಂದಿನ ಸಾಹಿತ್ಯ ಸಮ್ಮೇಳನಕ್ಕೆ ಇಲ್ಲಿಂದ ಕೆಲವು ಪ್ರತಿನಿಧಿಗಳನ್ನು ಕಳುಹಿಸುವುದಕ್ಕೆ ನಮಗೆ ಅವಕಾಶವಾಗುತ್ತದೆ. ಈಗ ನಾವು ಬಂಗಾರಪ್ಪನವರ ಹೆಸರನ್ನು ಅಪ್ರೂವ್ ಮಾಡಿ ಆಯಿತು. ಅವರ ಹೆಸರನ್ನು ಕಳುಹಿಸುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ:– ಮಾನ್ಯ ಸಭಾಧ್ಯಕ್ಷರೇ, ನಾನು ಹೇಳತಕ್ಕಂಥದ್ದು ಒಂದೇ ಒಂದು. ನಾನು ಒಂದು ಆಸೆಯಿಂದ ಹೇಳಿದೆ. ಒಬ್ಬ ಆಂಗ್ಲಕವಿ ಥಾಮಸ್ ಗ್ರೇ. The elegy written in a country church yard ಎನ್ನುವ ಒಂದು ದುಃಖದ ಸನ್ನಿವೇಶದಲ್ಲಿ ಒಂದು ಮಾತನ್ನು ಆಡುತ್ತೇನೆ ಕ್ಷಮಿಸಬೇಕು. ಬಹಳ ವಿವರಗಳಿಗೆ ಹೋಗುವುದಕ್ಕೆ ಈ ಸದನದಲ್ಲಿ ಸಾಧ್ಯವಾಗಲಾರದು. "The sarrow dawns the kneel of the parting day" ಎಂದು ಕವನ ಪ್ರಾರಂಭವಾಗುತ್ತದೆ. ಅದು ಹಳೆಯ ಇಂಗ್ಲೀಷ್. ನಮ್ಮ ಹಳಗನ್ನಡ ಇದ್ದಹಾಗೆ. ನಡುಗನ್ನಡ, ಹಳಗನ್ನಡ ಮಿಕ್ಸ್ ಆಗಿರುವಂಥದ್ದು. ಇದು ಆಂಗ್ಲ ಸಾಹಿತ್ಯಕ್ಕೆ ಸಂಬಂಧಿಸಿರುವಂಥದ್ದು. ಅವನು ಒಂದು ಮಾತನ್ನು ಹೇಳುತ್ತಾನೆ. ಎಲ್ಲಿಯೋ ಒಂದು ಅವ್ಯಕ್ತ ಚೇತನ ಹುದುಗಿರುತ್ತದೆ, ಒಂದು ಅವ್ಯಕ್ತ ಚೇತನ ಅಲ್ಲಿರುತ್ತದೆ. ಸರ್ವಶಕ್ತಿಯುತವಾಗಿರತಕ್ಕಂಥ ಒಂದು ಚೇತನ ಅಲ್ಲಿರುತ್ತದೆ. ಅದು ಯಾವಾಗ ಹುಟ್ಟುತ್ತದೆ, ಯಾವಾಗ ಅದು ಬೆಳವಣಿಗೆಯಾಗಿ ಬರುತ್ತದೆ, ಮೇಲೆ ಎದ್ದುಬರುತ್ತದೆ ಎಂದು ನಮಗೆ ಗೊತ್ತಾಗುವುದಿಲ್ಲ. ಆದರೆ ಅದಕ್ಕೆ ಪೂರಕವಾಗಿರತಕ್ಕಂಥ ಒಂದು ಪರಿಸರ ಅದಕ್ಕೆ ನಿರ್ಮಾಣವಾದರೆ ತನ್ನಲ್ಲಿ ಹುದುಗಿರತಕ್ಕಂಥ ಒಂದು ಪರಿಸರ ಅದಕ್ಕೆ ನಿರ್ಮಾಣವಾದರೆ ತನ್ನಲ್ಲಿ ಹುದುಗಿರತಕ್ಕಂಥ ಅಡಗಿರತಕ್ಕಂಥ ಆ ಸರ್ವಶಕ್ತಿಯನ್ನು ಅಭಿವ್ಯಕ್ತಪಡಿಸುವುದಕ್ಕೆ ಅದು ಸದಾವಕಾಶ ಮಾಡಿಕೊಡುತ್ತದೆ ಎನ್ನುವ ಮಾತನ್ನು ಅವನು ಹೇಳಿ chance in one's life ಎನ್ನುವಂಥ ಒಂದು ಮಾತನ್ನು ಆಡುತ್ತಾನೆ. ಆ ಅರ್ಥದಲ್ಲಿ ಅವನು ಹೇಳುತ್ತಾನೆ. ಒಬ್ಬ ವ್ಯಕ್ತಿಯ ಜೀವನದಲ್ಲಿ ಒಂದು ಸದಾವಕಾಶ, ಶುಭಸಂದರ್ಭ ಅದು ಒದಗಿ ಬಂದಾಗ ಮಾತ್ರ ಅಭಿವ್ಯಕ್ತಗೊಳಿಸುವುದಕ್ಕೆ ಅದಮ್ಯವಾಗಿರತಕ್ಕಂಥ ಚೇತನವನ್ನು ಅಭಿವ್ಯಕ್ತಗೊಳಿಸುವುದಕ್ಕೆ ಅದು ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಅವನು ಆಡುತ್ತಾನೆ. ಕವಿ ಕುವೆಂಪುರವರ ಬಗ್ಗೆ ನಾನು ಕಂಡಿರುವ ಹಾಗೆ ಆ ಸರ್ವಶಕ್ತಿಗೆ ಯಾವುದು ಕೂಡ ಆ ಕಾಲದಲ್ಲಿ ಪೂರಕವಾಗಿ ಬರಲಿಲ್ಲ. ಥಾಮಸ್ ಗ್ರೇ ಆಡಿರತಕ್ಕಂಥ ಮಾತನ್ನು ಕೂಡ ಮೀರಿರತಕ್ಕಂಥ ಒಂದು ದಿವ್ಯಚೇತನ. ಮಾನವ ಸೇತುವೆ ಎನ್ನತಕ್ಕಂಥ ಚೇತನ ರಾಷ್ಟ್ರಕವಿ ಕುವೆಂಪುರವರಲ್ಲಿ ನಾನಂತೂ ಕಂಡಿದ್ದೇನೆ. ನಾನು ಮೈಸೂರು ಮಹಾರಾಜ ಕಾಲೇಜಿನಲ್ಲಿ ಓದಬೇಕಾದರೆ ಶ್ರೀಮಾನ್ ಜೆ.ಹೆಚ್. ಪಟೇಲರವರಿಗೆ ಅವರು ಗುರುಗಳಾಗಿದ್ದರು. ಅದಕ್ಕೆ ನಾನು ಸಂತೋಷಪಟ್ಟೆ. ಆದರೆ ನನಗೆ ಅವರು ಗುರುಗಳಾಗುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ಅವರು ಒಂದು ವರ್ಷ ನನಗೆ ಪ್ರಿನ್ಸಿಪಾಲರಾಗಿದ್ದರು. ಆಗ ಜೂನಿಯರ್ ಬಿ.ಎ. ಸೀನಿಯರ್ ಬಿ.ಎ. ಎಂದು ಇತ್ತು. ಆ ಕಾಲದಲ್ಲಿ ನನಗೆ ಪ್ರಿನ್ಸಿಪಾಲರು ಅವರು ಒಂದು ವರ್ಷ ಅದು ಮೈಸೂರು ಯೂನಿವರ್ಸಿಟಿ. ಆಗ ಇನ್ನೂ ಬೆಂಗಳೂರು ಯೂನಿವರ್ಸಿಟಿ ಎಂದು ಇರಲಿಲ್ಲ. ಮೈಸೂರು ಯೂನಿವರ್ಸಿಟಿಗೆ ಅವರು ವೈಸ್ ಛಾನ್ಸಲರ್ ಆಗಿ ಹೋದರು. ಆದರೆ ಒಂದು ವರ್ಷ ನಮ್ಮ ಕಾಲೇಜಿನಲ್ಲಿ ಅವರನ್ನು ಪ್ರಿನ್ಸಿಪಾಲರಾಗಿ ನೋಡುವ ಸದಾವಕಾಶ ನನಗೆ ಸಿಕ್ಕಿತ್ತು.

ಆಮೇಲೆ ಮಧ್ಯೆ ಮಧ್ಯೆ ನಮ್ಮ ರಾಜಕೀಯ ಜೀವನದಲ್ಲಿ ಆಗಾಗ್ಗೆ ಅವರ ಮನೆಗೆ ಹೋಗಿ ಭೇಟಿ

ಕಟ್ಟು ಮಾತುಕತೆಯಾಡಿರತಕ್ಕಂಥ ಎಷ್ಟೋ ಸಂದರ್ಭಗಳನ್ನು ನಾನು ಪಡೆದುಕೊಂಡಿದ್ದೆ. ಮುಖ್ಯಮಂತ್ರಿಯಾದ ಮೇಲೆ ನನ್ನ ಕಾಲದಲ್ಲಿ 'ಕರ್ನಾಟಕ ರತ್ನ' ಎನ್ನುವ ಒಂದು ಬಿರುದನ್ನು ಕೊಡುವ ತೀರ್ಮಾನವನ್ನು ಮಂತ್ರಿಮಂಡಲದಲ್ಲಿ ನಾವೆಲ್ಲ ಮಾಡಿದೆವು. ಮೊಟ್ಟಮೊದಲನೆಯ ಒಂದು ಬಿರುದನ್ನು ನಾವು ಅವರಿಗೆ ಕೊಡಬೇಕು ಎಂದು ತೀರ್ಮಾನ ಮಾಡಿದಾಗ ಅವರಿಗೆ ಅಷ್ಟೊಂದು ಎಚ್ಚರ ಇರಲಿಲ್ಲ. ಆದರೂ ಕೂಡ ಮನಸ್ಸು ತಡೆಯಲಿಲ್ಲ. ಇಡೀ ಸರ್ಕಾರದ ಪರವಾಗಿ ನಾನು ಅವರ ಮನೆಗೆ ಹೋಗಿ ಅವರ ಮನೆಯ ಕಿಟಕಿಯ ಪಕ್ಕದಲ್ಲಿ ಅವರನ್ನು ಕರೆತಂದು ಹೊರಗಡೆ ಜನ ರಾಶಿ, ಸಮೂಹ ಸೇರಿತ್ತು ಎಲ್ಲರೂ ಸೇರಿ ಸರ್ಕಾರದ ಪರವಾಗಿ ಎಲ್ಲಾ ವ್ಯವಸ್ಥೆಯನ್ನು ಮಾಡಿ ಅವರಿಗೆ ಗೌರವವನ್ನು ಕೊಟ್ಟು ಬಂದೆವು. ಅವರಿಗೆ ಬೇಕಾದಷ್ಟು ಬಿರುದುಬಾವಲಿಗಳ ಮಧ್ಯೆ ಅವರ ಶಕ್ತಿಯನ್ನು ಅಳೆಯುವುದಕ್ಕೆ ನನ್ನಿಂದ ಸಾಧ್ಯವಿಲ್ಲ. ಅದು ಯಾರಿಂದಲೂ ಸಾಧ್ಯವಿಲ್ಲ. ನನಗೆ ಗೊತ್ತಿದೆ. ಆದರೆ ರಾಜ್ಯ ಸರ್ಕಾರದ ಒಂದು ಕರ್ತವ್ಯ ಎನ್ನುವ ದೃಷ್ಟಿಯಿಂದ ನಾವು ಹೋಗಿ ಗೌರವವನ್ನು 'ಕರ್ನಾಟಕ ರತ್ನ' ಎನ್ನುವ ಬಿರುದನ್ನು ನಾವೆಲ್ಲ ಕೊಟ್ಟುಬಂದೆವು. ಇಂಥ ಮಹಾನ್ ವ್ಯಕ್ತಿಯ ಬಗ್ಗೆ, ಅವರ ಚಿಂತನೆಯ ಬಗ್ಗೆ, ಸಾಹಿತ್ಯಕ್ಷೇತ್ರದಲ್ಲಿ ಅವರು ಮಾಡಿರುವ ಸೇವೆಯನ್ನು ಸ್ಮರಣೆಯನ್ನು ನಾವು ಚಿರನೂತನವಾಗಿ ಮಾಡಬೇಕು. ಎಂದು ಇದ್ದರೆ ಅವರು ಬರೆದಿರುವ ಹಲವಾರು ವಿಚಾರಗಳ ಬಗ್ಗೆ ನಾವು ಹೋಗಬೇಕಾಗುತ್ತದೆ. 'ಓ ನನ್ನ ಚೇತನ, ಆಗು ನೀ ಅನಿಕೇತನ' ಅದು ಅವರಿಗೆ ಅನ್ವಯವಾಗುತ್ತದೆ ಎನ್ನುವ ಮಾತು ನನ್ನ ಸ್ಪಷ್ಟವಾದ ಅಭಿಪ್ರಾಯ. 'ಓ ನನ್ನ ಚೇತನ , ಆಗು ನೀ ನಿಕೇತನ' ಅದಕ್ಕೆ ಎಲ್ಲಿಗೆ ಎನ್ನುವುದು Two parrallel lines – ಹೋಗುತ್ತದೆ. ಎಲ್ಲಿ ಮೀಟ್ ಆಗುತ್ತೇವೆ ಎಂದರೆ ಮೀಟೇ ಆಗುವುದಿಲ್ಲ. ಅದಮ್ಯವಾಗಿರುವಂಥ ಅವರ ಚೇತನ ಅಲ್ಲಿಗೆ ಹೋಗಿ ನಿಲ್ಲುತ್ತದೆ. ಅದು ಅವರಿಗೇ ಅನ್ವಯ ಆಗುತ್ತದೆ; ಎನ್ನುವ ಮಾತನ್ನು ನಾನು ಆಡಲೇಬೇಕು.

ಬಾರಿಸು ಕನ್ನಡದ ಡಿಂಡಿಮವಾ ಎನ್ನತಕ್ಕ ಮಾತನ್ನು ಆಡಬೇಕಾದರೆ ಇಲ್ಲಿ ಸುಸ್ತು ಆಗಿ ಹುಟ್ಟತಕ್ಕ ಕನ್ನಡ ಸಾಹಿತ್ಯ. ಸಂಪೂರ್ಣವಾಗಿ ಇದು ಏಳಲೇಬೇಕು. ಆದ್ದರಿಂದ ಪ್ರತಿಯೊಬ್ಬ ಕನ್ನಡಿಗ, ಕರ್ನಾಟಕ ರಾಜ್ಯದಲ್ಲಿ ಯಾರ್ಯಾರು ಇದ್ದಾರೆ, ಈಗಲೂ ಕೂಡ ನನಗೆ ಸಂತೋಷವಾಗುತ್ತದೆ. ಏಐಡಿಎಂಕೆಯ ಮಾನ್ಯ ಸದಸ್ಯರೊಬ್ಬರು ಬಂದು ಚೊಕ್ಕವಾಗಿರತಕ್ಕ ಕನ್ನಡ ಭಾಷೆಯಲ್ಲಿ ಇವತ್ತು ಪ್ರತಿಜ್ಞಾವಿಧಿ ಸ್ವೀಕಾರ ಮಾಡಿರತಕ್ಕದ್ದು. ಎಷ್ಟು ಚೆನ್ನಾಗಿ ಕನ್ನಡವನ್ನು ಅವರು ಮಾತನಾಡಿದರು. ಅವರು ಕನ್ನಡಿಗರೇ. ಆದರೆ ಏಐಡಿಎಂಕೆ ಎಂದ ತಕ್ಷಣ ನಾವು ತಪ್ಪು ತಿಳಿದುಕೊಳ್ಳುವುದಕ್ಕೆ ಇಲ್ಲಿ ಈ ಸದನದಲ್ಲಿ ಅವಕಾಶ ಇಲ್ಲ; ಅವರವರ ಮಾತೃ ಭಾಷೆ ಯಾವುದೇ ಇದ್ದರೂ ಕೂಡ ನಾವು ಇಲ್ಲಿ ಆಡಳಿತ ಭಾಷೆಯಾಗಿ ಅಡಿಯಿಂದ ಮುಡಿಯವರೆಗೆ ಕನ್ನಡ ಬರಬೇಕು. ಶೈಕ್ಷಣಿಕ ಕ್ಷೇತ್ರದಲ್ಲಿ ಕೂಡ, ಪೂರ್ವ ಪ್ರಾಥಮಿಕ ಶಿಕ್ಷಣದಿಂದ ನಾವೇನು ಹೇಳುತ್ತೇವೆ, ಎಂಎ ಎಂದು ಹೇಳುತ್ತೇವೆ. ಸ್ನಾತಕೋತ್ತರ ಶಿಕ್ಷಣ; ಅಲ್ಲಿಯವರೆಗೆ ಕೂಡ ತೆಗೆದುಕೊಂಡು ಹೋಗಬೇಕು ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ. ಆಡಳಿತ ಭಾಷೆಯಾಗಿ ಕನ್ನಡ ಬರಬೇಕು. ಅದು ವಿಧಾನಸೌಧದಲ್ಲಿ ಕುಳಿತಿರುವವರಿಂದ ಬರಬೇಕು. ಅದು ಹಳ್ಳಿಯಲ್ಲಿರತಕ್ಕ ಆಡಳಿತಗಾರನಿಂದ ಬರಬೇಕು. ಎಲ್ಲ ಕಡೆಯಲ್ಲಿಯೂ ಕೂಡ ಸಂಪೂರ್ಣವಾಗಿ ಕನ್ನಡ ಆಡಳಿತ ಭಾಷೆಯಾಗಿ ಬರಬೇಕು ಎಂದು ಇದ್ದರೆ ನಾವು ಯಾವ ರೀತಿಯಾಗಿ ತೆಗೆದುಕೊಂಡು ಹೋಗಬೇಕಾಗುತ್ತದೆ ಎನ್ನುವ ವಿಚಾರ. ಆಗ ಭಾಷಾವಾರು ಪ್ರಾಂತ್ಯಗಳ ರಚನೆಗೆ ಸಂಪೂರ್ಣವಾಗಿ ಅರ್ಥ ಬರುತ್ತದೆ, 1956ನೇ ಇಸವಿ ಆಕ್ಟ್ ಪ್ರಕಾರ. ಇಲ್ಲದಿದ್ದರೆ ಅದಕ್ಕೆ ಅರ್ಥ ಬರುವುದಿಲ್ಲ ಎನ್ನುವ ಮಾತನ್ನು ಕೂಡ ಅವರು ಆಗಲೂ ಹೇಳಿದ್ದರು. ಅನಂತರ ನಾನು ಈ ಸಂದರ್ಭದಲ್ಲಿ ಒಂದೇ ಒಂದು ಮಾತನ್ನು ಆಡಿ ನನ್ನ ಮಾತನ್ನು ಮುಗಿಸುತ್ತೇನೆ. ಈಗ ಟ್ರಸ್ಟ್ ಅಂತೂ ಇದೆ. ಆ ಟ್ರಸ್ಟ್‌ನಲ್ಲಿ ನಾನು ಕೂಡ ಇದ್ದೇನೆ ಎಂದು ನನ್ನ ನೆನಪು. ನಾನು ಬೇಡ ಎಂದು ಹೇಳಿದೆ. ಆದರೆ ದೇ ಜವರೇಗೌಡರು ಏನು ಇದ್ದಾರೆ, ಅವರೇ ಅಧ್ಯಕ್ಷರು ಎಂದು ಕಾಣುತ್ತದೆ. ಕ್ಷಮಿಸಬೇಕು. ನಾನು ಮರೆತಿದ್ದೇನೆ. ಅವರು

ನನಗೆ ಗುರುಗಳು. ನನಗೆ ಮೈಸೂರು ಮಹಾರಾಜ ಕಾಲೇಜಿನಲ್ಲಿ ಪಾಠ ಹೇಳಿಕೊಟ್ಟವರು. ಅನಂತರ ಮೈಸೂರು ಮಹಾರಾಜ ಕಾಲೇಜಿಗೆ ಉಪ ಕುಲಪತಿಗಳು ಆದರು. ಅವರೆಲ್ಲರೂ ಇದ್ದಾರೆ. ಇವತ್ತು ರಾಷ್ಟ್ರಕವಿ ಕುವೆಂಪು ಅವರ ಕೃತಿಗಳ ಬಗ್ಗೆ ಮತ್ತು ಅವರು ಇರತಕ್ಕ ಜಾಗ. ಅಲ್ಲಿ ಏನಾಗಿದೆ ಅಂದರೆ ಅವರು ಹುಟ್ಟಿ ಬೆಳೆದಿರತಕ್ಕ ಒಂದು ಹಳೆ ಮನೆ ಇದೆ ಅದಕ್ಕೆ ಕವಿಶೈಲ ಎನ್ನತಕ್ಕ ಒಂದು ಹೆಸರು ಇತ್ತು. ಅಲ್ಲಿ ಜನ ಹೋಗಿ ನೋಡುವುದಕ್ಕೆ ಅದಕ್ಕೆಲ್ಲಾ ಒಂದು ತಾಣ ಮಾಡಿ, ರಸ್ತೆ ಮತ್ತೊಂದು ಮಾಡಿ ನಾನೇ ಮುಖ್ಯಮಂತ್ರಿಯಾಗಿದ್ದಾಗ ಅದಕ್ಕೆ ಹಣವನ್ನು ಸರ್ಕಾರದ ಪರವಾಗಿ ಮಂಜೂರು ಮಾಡಿದ್ದೇವೆ. ಹಣವನ್ನು ಕೊಡತಕ್ಕ ತೀರ್ಮಾನ ನಾವೇ ನಮ್ಮ ಕಾಲದಲ್ಲಿ ಮಾಡಿದ್ದೇವೆ.

ಈಗಿನ ಸರ್ಕಾರದವರು, ಮಾನ್ಯ ದೇವೇಗೌಡರು ಅದರ ಬಗ್ಗೆ ವಿಚಾರ ಮಾಡಿ ಹಣವನ್ನು ಕೊಡಿಸುವುದರಿಂದ ಹಿಡಿದು ಆ ಕೆಲಸವನ್ನು ಮುಂದುವರಿಸಬೇಕಾಗುತ್ತದೆ. ಇದು ಒಂದೆರಡು ದಿನಗಳಲ್ಲಿ ಮಾಡಿ ಮುಗಿಸತಕ್ಕಂಥ ಕೆಲಸ ಆಗಲಾರದು. ಏಕೆಂದರೆ ಐದು ವರ್ಷ, ಹತ್ತು ವರ್ಷ ಇನ್ನೂ ಮುಂದಕ್ಕೆ ಹೋಗುತ್ತಿರುತ್ತದೆ. ಆದ್ದರಿಂದ ಆ ಕೆಲಸಕಾರ್ಯದ ಬಗ್ಗೆ ತಾವು ಹೆಚ್ಚು ಗಮನ ಕೊಡಬೇಕು, ಹಣವನ್ನು ಮಂಜೂರು ಮಾಡಬೇಕು. ಆ ಮನೆಗೆ ಅವರು ಹಣ ಕೇಳಿದ್ದರು. ಆಗ ನಾನು ಅವರು ಕೇಳಿದಷ್ಟು ಕೊಟ್ಟುಬಿಡಿ ಎಂದು ಹೇಳಿದೆ. ಏಕೆಂದರೆ, ಭಾಗವಾಗಿ ಹಿಸ್ಸೆಯಾಗಿ ಬೇರೆ ಬೇರೆ ಆಗಿಬಿಟ್ಟಿದ್ದಾರೆ. ಅವರಿಗೆ ತೊಂದರೆ ಇದೆ. ನಾನು ಕೊಟ್ಟುಬಿಡಿ ಎಂದು ಹೇಳುತ್ತೇನೆ. ಮಾನ್ಯ ಜವರೇಗೌಡರು ನನ್ನ ಹತ್ತಿರ ಬಂದಿದ್ದರು. ಮೊನ್ನೆ ಐದಾರು ದಿವಸಗಳ ಮುಂಚೆ ನಾನು ಕುಳಿತುಕೊಂಡು ಮಾತನಾಡಿದ್ದೇವೆ. ಅವರು ಬಿಟ್ಟುಕೊಡುವುದಕ್ಕೆ ರೆಡಿ ಇದ್ದಾರೆ. ಅಂದರೆ ಈ ತಿಂಗಳ 28 ಅಥವಾ 29ರಂದೋ ಏನೋ ಟ್ರಸ್ಟ್ ಪರವಾಗಿ ಅದರ ರಿಜಿಸ್ಟ್ರೇಷನ್ ಇಟ್ಟುಕೊಂಡಿದ್ದಾರೆ. ಮಾನ್ಯ ದೇವೇಗೌಡರು ಮತ್ತು ಮಾನ್ಯ ಪಟೇಲ್ ಅವರ ಗಮನಕ್ಕೆ ನಾನು ತುರುವುದು ಏನೆಂದರೆ, ಅವರು ಹುಟ್ಟಿದ ಮನೆ ಟ್ರಸ್ಟಿಗಾಗಿ ಬರೆಸಿಕೊಳ್ಳುವುದಕ್ಕಾಗಿ ರಿಜಿಸ್ಟ್ರೇಷನ್ ಈ ತಿಂಗಳ ಕೊನೆಯಲ್ಲಿ ಇಟ್ಟುಕೊಂಡಿದ್ದಾರೆ. ಅದಕ್ಕೆ ಬೇರೆ ಬೇರೆ ಕೆಲವು ಅಡಚಣೆಗಳು ಇದ್ದರೂ ಅದನ್ನು ಅವರವರೇ ಸರಿಪಡಿಸಕೊಂಡಿದ್ದಾರೆ. ಅದರಲ್ಲಿ ಮಾನ್ಯ ಚಂದ್ರೇಗೌಡರು ಸಹ ಸಹಾಯ ಮಾಡಿದ್ದಾರೆ. ಅನಂತರ ಎನ್.ಡಿ. ವೆಂಕಟೇಶ್ ಅವರು ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರು. ಅಂದರೆ ಕುವೆಂಪು ಅವರ ಬಹಳ ಹತ್ತಿರದ ಸಂಬಂಧಿ ಅವರು. ಅದು ಏನೇ ಇರಲಿ. ಇವೆಲ್ಲ ಇರುವುದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರತಕ್ಕದ್ದು, ಮಾನ್ಯ ದೇ. ಜವರೇಗೌಡರನ್ನು ಕರೆಸಿಕೊಂಡರೆ ನಿಮಗೆ ಎಲ್ಲಾ ವಿವರಗಳು ಸಿಗುತ್ತವೆ. ಅನಂತರ ನೀವು ಕಾರ್ಯೋನ್ಮುಖರಾಗುವುದಕ್ಕೆ ಬಹಳ ಸಹಕಾರಿ ಆಗುತ್ತದೆ. ಆ ವಿವರಗಳೆಲ್ಲಾ ಪ್ರತ್ಯೇಕ. ಆ ವಿವರಗಳನ್ನು ಕುರಿತು ನೀವು ಕುಳಿತುಕೊಂಡು ಮಾತನಾಡುಬಹುದು. ಇಷ್ಟು ಮಾತನ್ನು ಈ ಸಂದರ್ಭದಲ್ಲಿ ಹೇಳಿ ಈ ಒಂದು ಯುಗದ ಕವಿ, ರಾಷ್ಟ್ರಕವಿ ಎಂದು ಹೇಳತಕ್ಕದ್ದು, ಈಗ ಪೋಯೆಟ್ ಲಾರಿಯಟ್ ಎಂಬ ಹೆಸರು ಬಂದರೂ ಕೂಡ ವರ್ಣನೆ ಒಬ್ಬ ವ್ಯಕ್ತಿಯಿಂದ ನಾಲ್ಕು ಮಾತಿನಿಂದ ಹೇಳಿ ಮುಗಿಸಲಿಕ್ಕೆ ಸಾಧ್ಯವಿಲ್ಲದೇ ಇರತಕ್ಕ ಒಂದು ಮಹಾನ್ ಚೇತನ. ಅವರು ಅಗಲಿ ಹೋಗಿದ್ದಾರೆ. ಈ ದುಃಖ ಒಬ್ಬ ವ್ಯಕ್ತಿಯ ಅಥವಾ ಅವರ ಕುಟುಂಬದ ದುಃಖವಾಗಿ ಉಳಿದಿಲ್ಲ. ಇದು ನಮ್ಮೆಲ್ಲರ ದುಃಖ, ಇದು ರಾಷ್ಟ್ರದ, ರಾಜ್ಯದ ದುಃಖ. ಇದರಲ್ಲಿ ನಾವೆಲ್ಲರೂ ಕೂಡ ಸಂಪೂರ್ಣವಾಗಿ ಭಾಗಿ ಆಗುತ್ತೇವೆ ಎನ್ನತಕ್ಕ ಮಾತನ್ನು ಹೇಳಿ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಕುಟುಂಬ ವರ್ಗದರಿಗೆ ದುಃಖವನ್ನು ತಡೆದುಕೊಳ್ಳತಕ್ಕ ಶಕ್ತಿ ಕೊಡಲಿ. ಅದರಲ್ಲಿಯೂ ಕೂಡ ಅವರ ಒಬ್ಬ ಮಗಳು ಬಹಳ ಸೇವೆ ಮಾಡಿದ್ದಾರೆ. ಅವರಿಗೆ ಇಬ್ಬರು ಹೆಣ್ಣು ಮಕ್ಕಳಿರಬೇಕೆಂದು ನನಗೆ ನೆನಪು. ಒಬ್ಬರು ಇಲ್ಲಿದ್ದಾರೆ. ಇನ್ನೊಬ್ಬರು ಕುವೆಂಪುರವರು ಕೊನೆಯ ಉಸಿರೆಳೆಯುವವರೆಗೆ ಅವರೊಂದಿಗಿದ್ದು ಚೆನ್ನಾಗಿ ನೋಡಿಕೊಂಡಿದ್ದರು. ಅಲ್ಲದೆ, ಅವರಿಗೆ ಇಬ್ಬರು ಗಂಡು ಮಕ್ಕಳಿದ್ದು, ಅವರಲ್ಲಿ ಕನ್ನಡದ ಉದ್ದಾಮ ಸಾಹಿತಿಯಾಗಿರುವ ಶ್ರೀ ಪೂರ್ಣಚಂದ್ರ

ತೇಜಸ್ವಿಯವರು ನನಗೆ ಪರಿಚಿತರಿದ್ದು, ಮತ್ತೊಬ್ಬರು ಆಸ್ಟ್ರೇಲಿಯಾದಲ್ಲಿದ್ದಾರೆ. ಅವರ ಪರಿಚಯ ನನಗಿಲ್ಲ. ಇಷ್ಟು ಮಾತುಗಳನ್ನು ಮಾತ್ರ ಹೇಳುತ್ತಾ ಮುಂದೆ ಆಗುವ ಕರ್ತವ್ಯದ ಬಗ್ಗೆ ಸರ್ಕಾರ ಹೆಚ್ಚು ನಿಗಾವಹಿಸಬೇಕೆಂದು ಗಮನ ಸೆಳೆಯುತ್ತಾ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಸದಸ್ಯರುಗಳಲ್ಲಿ ಒಂದು ವಿನಂತಿ. ಅಗಲಿದ ಗಣ್ಯರಿಗೆ ನಾವು ಸಂತಾಪ ಸೂಚಿಸುವಾಗ ಅನೇಕ ಜನ ಸದಸ್ಯರುಗಳಿಗೆ ಭಾಗವಹಿಸಬೇಕೆಂಬ ಆಸೆ ಇದೆ. ಆದುದರಿಂದ, ಸಂಕ್ಷಿಪ್ತವಾಗಿ ಮಾತನಾಡಿದರೆ ಎಲ್ಲಾ ಸದಸ್ಯರಿಗೂ ಅವಕಾಶ ಕೊಡುವುದಕ್ಕೆ ಅನುಕೂಲವಾಗುತ್ತದೆ. ಈ ಕಲಾಪದಲ್ಲಿ ಮುಂದೆ ಭಾಗವಹಿಸತಕ್ಕಂಥ ಸದಸ್ಯರು ಆದಷ್ಟು ಸಂಕ್ಷಿಪ್ತವಾಗಿ ಹೇಳಿದರೆ ನನಗೆ ಕಲಾಪವನ್ನು ಸುಗಮವಾಗಿ ನಡೆಸುವುದಕ್ಕೆ ಅನುಕೂಲವಾಗತ್ತದೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೆ, ತಾವು ಅಗಲಿದ ಕೆಲವು ಹಿರಿಯರ ಕುರಿತು ಗುಣಗಾನ ಮಾಡಿ ಅವರ ಆತ್ಮಕ್ಕೆ ಶಾಂತಿ ಕೋರುವ ನಿರ್ಣಯವನ್ನು ಏನು ಮಂಡಿಸಿದ್ದೀರಿ, ಅದಕ್ಕೆ ನನ್ನ ಸಂಪೂರ್ಣ ಸಹಮತ ವ್ಯಕ್ತಪಡಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಕೆಲವರ ಬಗ್ಗೆ ಕೆಲವು ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳಬೇಕೆನ್ನುವ ತೀರ್ಮಾನದಲ್ಲಿ ನಾನು ಇದ್ದೇನೆ. ಮೊದಲನೆಯದಾಗಿ, ರಾಷ್ಟ್ರಕವಿ ಕುವೆಂಪುರವರ ಬಗ್ಗೆ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವೇಗೌಡರು ಮಂಡಿಸಿರತಕ್ಕಂಥ ನಿರ್ಣಯವನ್ನು ನಾನು ಅನುಮೋದಿಸಿ ರಾಷ್ಟ್ರಕವಿಯ ಬಗ್ಗೆ ಎಷ್ಟು ವರ್ಣನೆ ಮಾಡಿದರೂ ಸಾಲದು. ಸೂರ್ಯಚಂದ್ರರಿರುವವರೆಗೂ ರಾಷ್ಟ್ರಕವಿ ಕುವೆಂಪುರವರ ಹೆಸರು ಅಜರಾಮರವಾಗಿರುತ್ತದೆ ಎನ್ನುವ ಮಾತನ್ನು ಇವೊತ್ತು ನಾವು ಒಪ್ಪಬೇಕಾಗಿದೆ. ಅವರ ಮನೆಯ ಹೆಸರು 'ಉದಯ ರವಿ' ಯಾಗಿದ್ದು, ಇಲ್ಲಿಂದ ಅವರ ಪಾರ್ಥಿವ ಶರೀರ ಹೊರಕ್ಕೆ ಹೋಗಿದೆ. ಆದರೆ, 'ಉದಯ ರವಿ' ಯಿಂದ ಅವರು ಕನ್ನಡಕ್ಕೆ ಕೊಟ್ಟಂಥ ಕಾವ್ಯ ಸಾಹಿತ್ಯ, ಚೈತನ್ಯ, ಕರ್ನಾಟಕದ ಏಕೀಕರಣಕ್ಕೆ ಅವರು ತಮ್ಮ ಬರಹದ ಮೂಲಕ ಕೊಟ್ಟ ಶಕ್ತಿ ಅಪಾರವಾದುದು. ಅವರ ಮಹಾಕಾವ್ಯವಾದ 'ಶ್ರೀರಾಮಾಯಣ ದರ್ಶನಂ' ಕೃತಿಯನ್ನು ಬೆಂಗಳೂರು ಮಹಾನಗರದಲ್ಲಿ ಆನೆಯ ಮೇಲಿಟ್ಟು ಮೆರವಣಿಗೆ ಮಾಡಿದಂಥ ಸೌಭಾಗ್ಯ ನನಗೆ ದೊರೆತದ್ದು ಅತ್ಯಂತ ಸಂತೋಷವೆನಿಸಿದ್ದು, ನಾನು ಈ ಸಂತೋಷವನ್ನು ತಮ್ಮ ಜೊತೆ ಹಂಚಿಕೊಳ್ಳುತ್ತಿದ್ದೇನೆ. ನನಗೂ ಅವರಿಗೂ ಬಹಳ ನಿಕಟವಾದ ಸಂಬಂಧವಿದ್ದು, ಪ್ರತಿವರ್ಷ ಪ್ರತಿಸಾರಿ ಅವರ ಮನೆಗೆ ತಪ್ಪದೆ ಹೋಗಿ ಅವರಿಗೆ ಪುಷ್ಪಮಾಲಿಕೆಯನ್ನು ಅರ್ಪಿಸಿ ಅವರ ಜೊತೆ ಸ್ವಲ್ಪ ಸಮಯ ಕಳೆದು ಅವರೊಂದಿಗೆ ಮಾತನಾಡಿಕೊಂಡು ಬರತಕ್ಕಂಥಾದ್ದು ನನ್ನ ಕರ್ತವ್ಯವಾಗಿತ್ತು.

ಹೋದ ಶಾಸನ ಸಭೆಯಲ್ಲಿ ಇನ್ನೂ ಅವರು ಮಾತನಾಡುವ ವ್ಯವಸ್ಥೆಯಲ್ಲಿ ಇದ್ದಾಗ ಶಾಸನಸಭೆಗೆ ಬಂದ ನಂತರ ಅವರ ಮನೆಗೆ ಹೋದೆ. ಬಹಳ ದಿವಸ ನಾನು ಅವರ ಮನೆಗೆ ಹೋಗಿರಲಿಲ್ಲ. ಬಹಳ ದಿವಸ ಮನೆಗೆ ಹೋಗಿರಲಿಲ್ಲ ನೀವು ಬರಲಿಲ್ಲ ಅಂತ ಹೇಳಿದರು. ಸೋತಿದ್ದೇನೆ ಬಹಳ ತೊಂದರೆಯಲ್ಲಿದ್ದೇನೆ ಎಂದು ಹೇಳಿದೆ. ಸೋಲಿಗೂ ನನ್ನ ಮನೆಗೆ ಬರುವುದಕ್ಕೂ ಸಂಬಂಧ ಇಲ್ಲ ಎಂದು ಹೇಳಿದರು. ಈಗ ನಾನು ಗೆದ್ದಿದ್ದೇನೆ ಎಂದು ಹೇಳಿದೆ. ಶಾಸನಸಭೆಯಲ್ಲಿ ಕನ್ನಡದ ಧ್ವನಿ ಎಂಬ ಮಾತನ್ನು ಬಹಳ ಅತ್ಯಂತ ಅಭಿಮಾನದಿಂದ ಪ್ರೀತಿಯಿಂದ ನನೆಗ ಹೇಳಿದರು. ಕುವೆಂಪುರವರು ಇವತ್ತು ರಾಷ್ಟ್ರಕವಿ ಮಾತ್ರವಲ್ಲ ವಿಶ್ವಕವಿ. ನಮ್ಮ ಕನ್ನಡದ ಗಂಡುಮೆಟ್ಟಿದ ನೆಲದಲ್ಲಿ ಹುಟ್ಟಿದಂತಹ ಮಹಾ ಚೇತನ. ಈ ವಿಶ್ವಕವಿಯ ನೆನಪು ಪ್ರಪಂಚದಾದ್ಯಂತ ಉಳಿಯತಕ್ಕಂತಹ ಕೆಲಸವನ್ನು ಕರ್ನಾಟಕ ಸರ್ಕಾರ ಮಾಡಬೇಕು ಅನ್ನತಕ್ಕಂಥಾದ್ದು ನನ್ನ ಅತ್ಯಂತ ಅಭಿಲಾಶೆ ಮತ್ತು ಆಕಾಂಕ್ಷೆ. ಮಾನ್ಯ ಮುಖ್ಯಮಂತ್ರಿಗಳಾದಂತಹ ಶ್ರೀಮಾನ್ ದೇವೇಗೌಡರು ಈ ಕಾರ್ಯವನ್ನು ಮಾಡಬೇಕು ಮತ್ತು

ಸಮರ್ಥರು ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರು ಬರೆದಂತಹ ಸಮಗ್ರ ಸಾಹಿತ್ಯವನ್ನು ವಿಶ್ವದ ಎಲ್ಲಾ ಭಾಷೆಗಳಿಗೆ ಭಾಷಾಂತರಿಸುವ ಕೆಲಸವನ್ನು ಮಾಡತಕ್ಕಂತಹ ಹೊಣೆಗಾರಿಕೆಯನ್ನು ಕರ್ನಾಟಕ ಸರ್ಕಾರ ಕೈಗೊಳ್ಳಬೇಕು ಎನ್ನತಕ್ಕಂತಹ ಮಾತನ್ನು ನಾನು ಬಹಳ ಕಳಕಳಿಯಿಂದ, ಪ್ರೀತಿಯಿಂದ, ವಿಶ್ವಾಸದಿಂದ, ಅಭಿಮಾನದಿಂದ ಅವರಿಗೆ ಹೇಳುತ್ತಿದ್ದೇನೆ. ಇದನ್ನು ಮಾಡಿದಾಗ ವಿಶ್ವದಲ್ಲಿ ಅವರ ಚಿಂತನೆ, ಅವರು ಎಲ್ಲಾ ವರ್ಗದ ಜನರಿಗೆ ಬರೆದಂತಹ ಸಾಹಿತ್ಯ ವಿಶ್ವದ ಎಲ್ಲರಿಗೂ ಪರಿಚಯವಾಗುತ್ತದೆ. ಅಂತಿಮವಾಗಿ ಅವರಿಗೆ ನೊಬೆಲ್ ಪಾರಿತೋಷಕ ಪ್ರಶಸ್ತಿ ಇಷ್ಟೊತ್ತಿಗಾಗಲೇ ಬರಬೇಕಾಗಿತ್ತು ಎಂದು ನನಗೆ ಎನಿಸುತ್ತದೆ. ಈ ಒಂದು ಮಣ್ಣಿನಲ್ಲಿ ಹುಟ್ಟಿದಂತಹ ಒಬ್ಬ ಮಹಾ ಚೇತನ ರಾಷ್ಟ್ರಕವಿ ಕುವೆಂಪುರವರ ಅಗಲಿಕೆಯಿಂದ ನಾವು ಅವರ ಪಾರ್ಥಿವ ಶರೀರವನ್ನು ಕಳೆದುಕೊಂಡಿದ್ದೇವೆ ಅಷ್ಟೇ ಹೊರತು, ಅವರ ಶಕ್ತಿ ಚೈತನ್ಯ ಕರ್ನಾಟಕಕ್ಕೆ ನಾಮಕರಣ ಮಾಡಬೇಕೆಂದು ಹೇಳಿ ಅದರ ಬಗ್ಗೆ ದೊಡ್ಡ ಮಂತ್ರಕಣ, ಶಕ್ತಿಕಣ ಕರ್ನಾಟಕ ಅಂತ ಹೇಳಿದರೆ ಅದಕ್ಕೆ ಏನು ಶಕ್ತಿ ಇದೆ, ಅದಕ್ಕೆ ಏನು ಒಂದು ಆಧಾರ ಇದೆ, ಬರೀ ಕೇವಲ ಕರ್ನಾಟಕ ಎಂದು ಹೇಳಿದರೆ ಯಾವುದೋ ಒಂದು ಮಾತಲ್ಲ, ಯಾವುದೋ ಒಂದು ಜಾತಿಯ ಸಂಕೇತ ಅಲ್ಲ, ಯಾವುದೋ ಒಂದು ವಿಚಾರ ಅಲ್ಲ.

ಅದಕ್ಕೆ ಒಂದು ಶಕ್ತಿಕಣ, ಮಂತ್ರಕಣ, ಅದಕ್ಕೆ ಶಕ್ತಿ ತುಂಬಿ ಕರ್ನಾಟಕ ನಾಮಕರಣಕ್ಕೆ ಹೊಸ ಚೈತನ್ಯ ಕೊಟ್ಟವರು ಕನ್ನಡ ಭಾಷೆಗೆ ಶ್ರೀಮಂತಿಕೆಯನ್ನು ಕೊಟ್ಟವರು ರಾಷ್ಟ್ರಕವಿ ಕುವೆಂಪುರವರು. ನಮ್ಮಲ್ಲಿ ಅನೇಕ ಜನ ದಿಗ್ಗಜಗಳು ನಮ್ಮ ಕೈಬಿಟ್ಟಿದ್ದಾರೆ. ದ.ರಾ. ಬೇಂದ್ರೆ ಅವರದೇ ಒಂದು ಶೈಲಿ, ರಾಜರತ್ನಂ ಅವರದೇ ಒಂದು ಶೈಲಿ. ಡಿ.ವಿ.ಜಿ. ಅವರದೇ ಒಂದು ಶೈಲಿ. ಒಬ್ಬೊಬ್ಬರು ಒಂದೊಂದು ದಿಕ್ಕಿನಲ್ಲಿ ದಿಗ್ಗಜಗಳಾಗಿ ಮೆರೆದು ಈ ನಾಡಿನ ಭಾಷೆಗೆ ಅಪಾರವಾದಂತಹ, ಶಕ್ತಿಪೂರ್ಣವಾದಂತಹ ಕೆಲಸವನ್ನು ಮಾಡಿದ್ದಾರೆ. ತಮಗೆ ನಾನು ಹೇಳುವುದೇನೆಂದರೆ, ಬೊಮ್ಮನ ಹಳ್ಳಿ ಕಿಂದರಜೋಗಿಯಿಂದ ಶ್ರೀ ರಾಮಾಯಣ ದರ್ಶನಂವರೆಗೆ ಅಂತಹ ಮಹಾ ಕಾವ್ಯವನ್ನು ಬರೆದು ಕನ್ನಡಿಗರಿಗೆ ಶಕ್ತಿಯನ್ನು ತಂದಂಹ ಧೀಮಂತ ಮೇರು ಪರ್ವತದಷ್ಟೇ ಎತ್ತರವಾದ ರಾಷ್ಟ್ರಕವಿ. ''ಬಾರಿಸು ಕನ್ನಡ ಡಿಂಡಿಮವ'' ನಮ್ಮ ಕನ್ನಡ ನಾಡಿನ ಜನರಿಗೆ ಶಕ್ತಿಯನ್ನು ಮತ್ತು ಶೌರ್ಯವನ್ನು ಕೊಡುವಂತಹ ಮತ್ತು ಒಗ್ಗಟ್ಟಾಗಿರಬೇಕು, ಒಮ್ಮತವಾಗಿರಬೇಕು ಎಂದು ಸಾರುವ

''ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯ ಶಿವ
ಸತ್ತಂತಿಹರನು ಬಡಿದೆಬ್ಬಿಸು
ಕಚ್ಚಾಡುವವರನು ಕೂಡಿಸು ಒಲಿಸು...

ಎಂತಹ ಪವಿತ್ರವಾದಂತಹ ರೀತಿ ಕವಿ ತನ್ನ ಅನೇಕ ಸಾಹಿತ್ಯವನ್ನು ಬರೆದು ಅಪಾರವಾದ ಸೇವೆಯನ್ನು ಮಾಡಿರತಕ್ಕಂತಹ, ಅಪಾರ ಶಕ್ತಿಯುತವಾದ ವಿಚಾರಪೂರ್ಣವಾದಂತಹ ಮಹಾವ್ಯಕ್ತಿ ರಾಷ್ಟ್ರಕವಿ ಕುವೆಂಪುರವರು. ರಾಷ್ಟ್ರಕವಿ ಕುವೆಂಪುರವರ ಒಂದು ಅಗಲಿಕೆ ನಮ್ಮ ನಾಡಿಗೆ ಅಪಾರವಾದಂತಹ ನಷ್ಟವಾಗಿದೆ. ಕನ್ನಡದ ಸಾಹಿತ್ಯ ಲೋಕಕ್ಕೆ ಅಪಾರವಾದ ಚೈತನ್ಯ ಹೋಗಿದೆ. ಇಂತಹ ಸಂದರ್ಭದಲ್ಲಿ ಅವರ ಸಾಹಿತ್ಯವನ್ನು ವಿಶ್ವದ ಎಲ್ಲಾ ಭಾಷೆಗಳಿಗೂ ತರ್ಜುಮೆ ಮಾಡಿಸಿ ಭಾಷಾಂತರ ಮಾಡಿಸುವ ಕೆಲಸವನ್ನು ಮಾನ್ಯ ಮುಖ್ಯ ಮಂತ್ರಿಗಳು, ಅವರ ಸರ್ಕಾರ ಮಾಡಬೇಕು ಎನ್ನತಕ್ಕಂತಹ ಮಾತನ್ನೂ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ''ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು'' ಇಂತಹ ನಿಜವಾಗಿಯೂ ರೋಮಾಂಚನಕಾರಿಯಾದಂತಹ ಅನೇಕ ಪದ್ಯಗಳನ್ನು, ಅನೇಕ ಕಾವ್ಯಗಳನ್ನು ಮತ್ತು ಹೊಸ ಹೊಸ ಸೃಷ್ಟಿಯನ್ನು ಬರೆದು ಎಲ್ಲಾ

ಜನಾಂಗಕ್ಕೂ ಆಗತಕ್ಕಂತಹ ವಿಶ್ವ ಮಾನವರಾಗಿ ಮೆರೆದಂತಹ ರಾಷ್ಟ್ರಕವಿ ಕುವೆಂಪುರವರ ಆತ್ಮಕ್ಕೆ ಶಾಂತಿ ದೊರಕಲೆಂದು ಹೇಳಿ, ಈ ಸಂದರ್ಭದಲ್ಲಿ ಹೆಚ್ಚಿಗೆ ಮಾತನಾಡತಕ್ಕಂತಹ ಅವಕಾಶವನ್ನು ತಾವು ಈಗಾಗಲೇ ಕೊಡಿಸಿದ್ದೀರಿ.

**2.25 ಪಿ.ಎಂ.**

ಅವರು ಬರೆದಿರುವಂಥ ಅನೇಕ ಪದ್ಯಗಳನ್ನು ಹೇಳಬೇಕೆಂದು ಮನಸ್ಸು ಮಾಡಿದ್ದೆ. ಆದರೆ, ತಮ್ಮ ಅಪ್ಪಣೆ ಮೇರೆಗೆ ನಾನು ಇಷ್ಟಕ್ಕೆ ನಿಲ್ಲಿಸಿ ಅವರ ಆತ್ಮಕ್ಕೆ ಶಾಂತಿ ಕೋರುತ್ತಾ ನಮ್ಮಿಂದ ಅಗಲಿರುವ ಇನ್ನಿತರ ವ್ಯಕ್ತಿಗಳ ಕುರಿತು ಹೇಳುವುದಾದರೆ ಸಿ.ಜಿ.ಕೆ. ರೆಡ್ಡಿಯವರ ಬಗ್ಗೆ ನನಗೆ ಹಾಗೂ ಪ್ಟೇಲರಿಗೆ ಚೆನ್ನಾಗಿ ಗೊತ್ತು. ಶಾಂತವೇರಿ ಗೋಪಾಲಗೌಡರು ನಿಧನ ಹೊಂದಿದಾಗ, ಅವರ ಶವ ಸಂಸ್ಕಾರ ಮುಗಿದ ಬಳಿಕ ಸ್ಥಳದಲ್ಲಿಯೇ ಸಂತಾಪ ಸೂಚಕ ಸಭೆ ನಡೆಯಿತು. ಆಗ ಜಾರ್ಜ್ ಫರ್ನಾಂಡಿಸ್ ಮತ್ತು ಪಟೇಲರು ಸ್ಥಳದಲ್ಲಿದ್ದರು. ದಿವಂಗತ ಶಾಂತವೇರಿ ಗೋಪಾಲಗೌಡರಿಗೆ ಶ್ರದ್ಧಾಂಜಲಿಯ ಅರ್ಪಿಸುವಾಗ ಸಿ.ಜಿ.ಕೆ. ರೆಡ್ಡಿಯವರು ಇಂಗ್ಲೀಷಿನಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಅವರು 'ನನಗೆ ಇಂಗ್ಲೀಷ್ ಭಾಷೆಯ ಮೇಲೆ ಬಹಳ ಪ್ರೌಢಿಮೆ ಇದ್ದರೂ ವಾಟಾಳ್ ನಾಗರಾಜ್‌ರವರು ಇರುವುದರಿಂದ ನಾನು ಕನ್ನಡದಲ್ಲಿಯೇ ಮಾತನಾಡುತ್ತೇನೆ' ಎಂದು ಹೇಳಿದರು. ಅವರೊಬ್ಬ ಧೀಮಂತ ಪತ್ರಕರ್ತರಾಗಿ, ಹಿರಿಯ ರಾಜಕಾರಣಿಯಾಗಿ, ಮುತ್ಸದ್ಧಿಯಾಗಿ ಇಂದು ನಮ್ಮನ್ನು ಅಗಲಿದ್ದಾರೆ. ಅವರನ್ನು ಇವೊತ್ತು ನಾವು ನಿಜವಾಗಿಯೂ ನೆನೆಸಿಕೊಳ್ಳಬೇಕಾಗಿದೆ. ಅನೇಕ ಸಾರಿ ನಾನು ಮತ್ತು ಪಟೇಲರು ಅವರನ್ನು ಭೇಟಿ ಮಾಡಿ ಮಾತನಾಡಿದ್ದೇವೆ. ಶ್ರೀ ಬಂಗಾರಪ್ಪನವರೂ ಸಹ ಸಿ.ಜಿ.ಕೆ. ರೆಡ್ಡಿಯವರ ಜೊತೆ ಒಡನಾಟವಿಟ್ಟುಕೊಂಡಿದ್ದರು. ಅವರು ಸಮಾಜವಾದ ತತ್ವವನ್ನು ಅಳವಡಿಸಿಕೊಂಡಿದ್ದರು. ಅವರು ಈ ರಾಜ್ಯದಲ್ಲಿ ಪತ್ರಿಕೋದ್ಯಮದ ಬೆಳವಣಿಗೆಗೆ ಹೊಸ ಚಿಂತನೆ ನಡೆಸಿದವರು. ಆಂಗ್ಲ ಪತ್ರಿಕೆಯಾದ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ ಪತ್ರಿಕೆ' ಇವೊತ್ತು ಇಷ್ಟು ಎತ್ತರಕ್ಕೆ ಬೆಳೆಯುವುದಕ್ಕೆ ಕಾರಣ ಅವರು ಹಾಕಿದ ಭದ್ರ ಬುನಾದಿ. ಅಂತಹ ಶಕ್ತಿಯುತವಾದ ಒಬ್ಬ ವ್ಯಕ್ತಿ ಇವೊತ್ತು ನಮ್ಮ ಮುಂದಿಲ್ಲದಿರತಕ್ಕಂಥಾದ್ದು ಬಹಳ ನೋವನ್ನುಂಟು ಮಾಡಿದೆ. ಅದೇ ರೀತಿ ನಿಧನರಾಗಿರುವ ಡಾ. ಹೆಚ್.ಎಲ್. ತಿಮ್ಮೇಗೌಡರ ಬಗ್ಗೆ ಮುಖ್ಯಮಂತ್ರಿಗಳು ಗುಣಗಾನ ಮಾಡಿರುವಂತೆ ಅವರು ಇತರರೊಂದಿಗೆ ಅಪಾರವಾದ ಸ್ನೇಹ, ವಿಶ್ವಾಸ, ಅಭಿಮಾನವಿಟ್ಟುಕೊಂಡಿದ್ದರಲ್ಲದೆ ಸರಳರೂ, ಸಹೃದಯ ವ್ಯಕ್ತಿಗಳಾಗಿದ್ದರು. ಅವರು ಗೃಹ ನಿರ್ಮಾಣ ಮಂಡಳಿಯ ಅಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ ಅಂದರೆ 1967–72ರ ಸಮಯದಲ್ಲಿ ನನ್ನನ್ನು ಕರೆದು 'ಬಹಳ ಕಡಿಮೆ ದರದಲ್ಲಿ ಮನೆ ತೆಗೆದುಕೊಳ್ಳಿ' ಎಂದಾಗ ನಾನು ಅದೇನೂ ನಮಗೆ ಬೇಡ, ಬಯ್ಯುತ್ತಾರೆ. ಎಂದು ಹೇಳಿದೆ. ಇಂತಹ ಸರಳ, ಸಜ್ಜನಿಕೆಯುಳ್ಳ ವ್ಯಕ್ತಿ ಇಂದು ನಮ್ಮನ್ನಗಲಿರುವಂತಾದ್ದು ಬಹಳ ನೋವುಂಟು ಮಾಡಿದೆ. ತಿಮ್ಮೇಗೌಡರು ಮತ್ತು ನಾನು ಅನೇಕ ಸಾರಿ ಸಂಧಿಸುತ್ತಿದ್ದೆವು. ಅವರು ಅಕಾಲಿಕ ಮರಣಕ್ಕೆ ತುತ್ತಾದುದು ನಿಜವಾಗಿಯೂ ನೋವಾಗುತ್ತದೆ. ಅನೇಕ ಮಹನೀಯರುಗಳು ನಿಧನರಾಗಿರುವಂಥ ಸಂದರ್ಭದಲ್ಲಿ ಸದನದಲ್ಲಿ ಮಂಡಿಸಿರತಕ್ಕ ನಿರ್ಣಯಕ್ಕೆ ನನ್ನ ಅನುಮೋದನೆ ಹೇಳುತ್ತಾ, ದಿವಂಗತರುಗಳ ಆತ್ಮಕ್ಕೆ ಶಾಂತಿ ಕೋರುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI QUMARUL ISLAM (Gulbarga):– Mr. Speaker Sir, May important personalities are no more now and condolence has already moved from the Chair. The death of National Poet, Kuvempu is a great loss not only to the State, but to the whole nation. He has done a great service to the Kannada language by his literature and poetry. I support the suggestion

given by Sri Bangarappaji that the Trust which has already been registered should get a land, house and sufficient money for the purpose the Trust has already been registered. He was such a great man, never opposed to any language. He always fought for the equal and respectable status for the Kannada language. Regarding Dr. H.L. Thimme Gowda, when I entered this Hosue in 1978, he was our Colleague. He used to sit there. He was a Member of this House and later on he became the Minister and he was the Chairman of the Housing Board.

Then there is a suddent demise of Mr. Chandrashekar Matti, particularly just before the General Elelctions to the State Legislative Assembly. He was not only a Member of the Karnataka Legislative Council, but was also the General secretary of the Karnataka Congress Party. It is a great loss to the Karnataka Congress Party. I pray the Almighty Allah to keep these souls in peace and give courage to the family members to bear their losses.

† ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):- ಮಾನ್ಯ ಅಧ್ಯಕ್ಷರೆ, ಇಲ್ಲಿ ಎಲ್ಲಾ ಹಿರಿಯ ಸದಸ್ಯರು ಎಲ್ಲಾ ವ್ಯಕ್ತಿಗಳ ವಿಚಾರಧಾರೆಯನ್ನು ಮಂಡಿಸಿ ಅವರ ಆತ್ಮಕ್ಕೆ ಶಾಂತಿ ಕೋರುವಂಥ ಕಾರ್ಯಕ್ರಮ ಮಾಡುತ್ತಿದ್ದಾರೆ. ಆದರೆ ಯಾರು ಹೆಚ್ಚು ಯಾರು ಕಡಿಮೆ ಎಂದು ನಾವು ಯೋಚನೆ ಮಾಡಿದಾಗ, ಒಂದೊಂದು ಕ್ಷೇತ್ರದಲ್ಲಿ ಒಬ್ಬೊಬ್ಬರು ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಕಣ್ಣು ಹೇಳುತ್ತದೆ, ನನಗಿಂತ ದೊಡ್ಡದು ಯಾವುದು ಇಲ್ಲ ಎಂದು. ಆಗ ಮೂಗು ಹೇಳುತ್ತದೆ, ನಾನು ಉಸಿರಾಡಿದರೆ ಮಾತ್ರ ಕಣ್ಣು ಉಳಿದುಕೊಳ್ಳುವುದಕ್ಕೆ ಸಾಧ್ಯ ಎಂದು. ಅದಕ್ಕೆ ಬಾಯಿ ಹೇಳುತ್ತದೆ, ನಾನು ಊಟ ಮಾಡಿದರೆ ಮಾತ್ರ ನೀವಿಬ್ಬರೂ ಉಳಿದುಕೊಳ್ಳುತ್ತೀರಿ ಎಂದು. ನಂತರ ಕೈ ಹೇಳುತ್ತದೆ, ನಾನು ದುಡಿದು ಬಾಯಿಗೆ ಇಟ್ಟರೆ ಮಾತ್ರ ನೀವು ಮೂರು ಜನ ಉಳಿದುಕೊಳ್ಳುತ್ತೀರಿ, ಇಲ್ಲದಿದ್ದರೆ ಸಾಧ್ಯವಿಲ್ಲ ಎಂದು ಹೇಳುತ್ತದೆ. ಕಾಲು, ನಿಮ್ಮೆಲ್ಲರನ್ನು ಹೊತ್ತುಕೊಂಡು ತಿರುಗದೆ ಇದ್ದರೆ ನೀವು ಮೂಲೆಯಲ್ಲೆ ಇರುತ್ತೀರಿ ಎಂದು ಹೇಳುತ್ತದೆ. ಕಿವಿ ಹೇಳುತ್ತದೆ ಎಲ್ಲಾ ವಿಚಾರವನ್ನು ಸಂಗ್ರಹಿಸಿ ಮೆದುಳಿಗೆ ಕೊಡದೆ ಇದ್ದರೆ ನೀವು ಏನೂ ಪ್ರಯೋಜನ ಇಲ್ಲದಂತೆ ಆಗುತ್ತೀರಿ. ಆಗ ಮೆದುಳು ಹೇಳುತ್ತದೆ, ನಿಮಗೆ ಎಲ್ಲಾ ಚಾಲನೆ ಕೊಡದೆ ಇದ್ದರೆ ನೀವೆಲ್ಲಾ ಹಾಗೆ ಇರುತ್ತೀರಿ ಎಂದ, ಹಾಗೆ ಎಲ್ಲರೂ ಒಂದೊಂದು ಕ್ಷೇತ್ರದಲ್ಲಿ ಒಂದೊಂದು ರೀತಿಯಲ್ಲಿ ಬಹಳ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಣೆ ಮಾಡಿದರು. ಆದರೆ ಮೆದುಳಿಗೆ ಚಾಲನೆ ಕೊಟ್ಟಂತಹ ರಾಷ್ಟ್ರಕವಿ ಕುವೆಂಪುರವರು ಬಹಳ ಮುಖ್ಯವಾದ ವ್ಯಕ್ತಿ. ಇಲ್ಲಿ ಎಲ್ಲಾ ಹಿರಿಯ ಸದಸ್ಯರು ಅವರ ಸಾಹಿತ್ಯದ ಬಗ್ಗೆ ಬಹಳ ಮಾತನಾಡಿದರು. ಅವರು ರೈತರ ಬಗ್ಗೆ ಒಂದು ಕತೆಯನ್ನು ಬರೆದರು. ಅದೇ ಧನ್ವಂತರಿ ಚಿಕಿತ್ಸೆ. ವಸಿಷ್ಟ-ವಿಶ್ವಾಮಿತ್ರ ಇಬ್ಬರೂ ಸಹ ಮಾರುವೇಷದಲ್ಲಿ ಬೆಂಗಳೂರನ್ನು ನೋಡಬೇಕು ಎಂದು ಬಂದರು. ಅವರು ವಿಧಾನಸೌಧ, ರೈಲ್ವೆ ಸ್ಟೇಷನ್, ಪೊಲೀಸ್ ಸ್ಟೇಷನ್, ಕಬ್ಬಿನ ಗದ್ದೆ, ಭತ್ತದ ಗದ್ದೆ ಎಲ್ಲಾ ಕಾರ್ಖಾನೆಗಳನ್ನು ನೋಡಿಕೊಂಡು ನಂತರ ಒಂದ ಹಳ್ಳಿಗೆ ಹೋದರು. ಅಲ್ಲಿ ಯಾರೋ ಅಳುತ್ತಿರುವ ಶಬ್ದ ಕೇಳಿತು, ನೋಡೋಣವೆಂದು ಒಳಗೆ ಹೋದರು. ಒಂದು ತೊಟ್ಟಿ ಮನೆಯಲ್ಲಿ ಒಬ್ಬ ಮನುಷ್ಯ ರಕ್ತ ಕಾರುತ್ತಿದ್ದ, ಅವನ ಹೆಂಡತಿ ಅಳುತ್ತಿದ್ದಳು. ಇವರು ಅವರನ್ನು ಏನು ಕಾರಣ ಎಂದು ಕೇಳಿದರು. ಅದಕ್ಕೆ ಅವರು ಸ್ವಾಮಿ, ಇವರು ರಕ್ತ ಕಾರುವುದಕ್ಕೆ ಶುರು ಮಾಡಿ

ಇಪ್ಪತ್ತು ದಿವಸವಾಯಿತು, ಎಲ್ಲಾ ಡಾಕ್ಟರಿಗೂ ತೋರಿಸಿದೆ, ದೇವರಿಗೆಲ್ಲಾ ಹರಿಕೆ ಕಟ್ಟಿಕೊಂಡೆ ಏನು ಮಾಡಿದರೂ ಇದು ವಾಸಿಯಾಗಲಿಲ್ಲ ಎಂದು ಹೇಳುತ್ತಾ ದೇವರಿಗೆ ಬೈಯ್ದುಳಂತೆ. ಆಗ ಇವರಿಬ್ಬರಿಗೂ ಸ್ವಲ್ಪ ಸಿಟ್ಟು ಬಂದಿತು. ನಂತರ ಅವರಿಗೆ ನೀನು ಹೆದರಿಕೊಳ್ಳಬೇಡ ನಾನು ವಾಸಿ ಮಾಡುತ್ತೇನೆ ಸುಮ್ಮನಿರು ಎಂದರು. ಮತ್ತೆ ಎಲ್ಲಾ ಡಾಕ್ಟರನ್ನು ಅವರು ಕರೆಸಿದರು, ಏನು ಮಾಡಿದರೂ ಇದು ಏನು ಖಾಯಿಲೆ ಎಂದು ಯಾರಿಗೂ ಗೊತ್ತಾಗಲಿಲ್ಲ. ಕೊನೆಯಲ್ಲಿ ದೇವಲೋಕದಿಂದ ಧನ್ವಂತರಿ ಎಂಬ ದೊಡ್ಡ ಡಾಕ್ಟರನ್ನು ಕರೆಸಿದರು. ಆ ದೊಡ್ಡ ಡಾಕ್ಟರ್ ಎಲ್ಲಾ ಅಂಗಗಳನ್ನು ಮುಟ್ಟಿ ನೋಡಿದರು, ಅವನಿಗೂ ಅದು ಯಾವ ಖಾಯಿಲೆ ಎಂದು ಗೊತ್ತಾಗಲಿಲ್ಲ. ಸರಿ ನನ್ನ ಹತ್ತಿರ ಒಂದು ಯಂತ್ರ ಇದೆ ಅದರಲ್ಲಿ ನೋಡಿ ಏನಾಗಿದೆ ಎಂದು ಹೇಳುತ್ತೇನೆ ಎಂದು ಹೇಳಿ ನೋಡುತ್ತಿದ್ದಾಗ ತಕ್ಷಣ ಅವನಿಗೆ ಕಣ್ಣಲ್ಲಿ ನೀರು ಬರುವುದಕ್ಕೆ ಶುರುವಾಯಿತು. ಅದಕ್ಕೆ ಅಲ್ಲಿದ್ದ ವಸಿಷ್ಟ ವಿಶ್ವಾಮಿತ್ರ ಅವನ ಹೆಂಡತಿ ಎಲ್ಲರೂ ಗಾಬರಿಯಾಗಿ ಏನು ಏನು ಎಂದು ಕೇಳಿದರು. ಆಗ ಆ ಡಾಕ್ಟರ್ ಏನಿಲ್ಲ, ಇವನು ಈ ದೇಶದ ರೈತ, ಈತನ ಎದೆ ಮೇಲೆ ವಿಧಾನಸೌಧ, ರೈಲ್ವೆ ಸ್ಟೇಷನ್, ಪೊಲೀಸ್ ಸ್ಟೇಷನ್ ಎಲ್ಲಾ ಕಾರ್ಖಾನೆಗಳು, ಎಲ್ಲಾ ಸಾಲ ಇವನ ಎದೆ ಮೇಲೆ ಅದುಮಿಕೊಂಡು ಬಿಟ್ಟಿದೆ. ಅದನ್ನು ಇಳಿಸಿಕೊಂಡರೆ ವಾಸಿಯಾಗುತ್ತದೆ ಎಂದು ಹೇಳಿದರು. ಹಾಗೆ ರಾಷ್ಟ್ರಕವಿ ಕುವೆಂಪುರವರು ಎಲ್ಲಾ ವರ್ಗದ, ಎಲ್ಲಾ ಜನರ ವಿಚಾರವನ್ನು ಹೇಳಿದಂತಹ ಮಹಾನ್ ವ್ಯಕ್ತಿ. ಸಾಹಿತ್ಯ ಮತ್ತು ವಿಜ್ಞಾನ ಒಂದೇ ನಾಣ್ಯದ ಎರಡು ಮುಖಗಳು ಇದ್ದಹಾಗೆ. ಇವತ್ತು ಕರೆಂಟ್ ಅನ್ನು ಕಂಡುಹಿಡಿದವರು ಒಬ್ಬ ಲಾಳ ಕಟ್ಟುವವನ ಮಗ. ಇಡೀ ಪ್ರಪಂಚಕ್ಕೆ ಬೆಳಕನ್ನು ಕೊಡತಕ್ಕಂಥ ಕಾರ್ಯಕ್ರಮ ಇವನಿಂದ ಆಗಿದೆ. ಸಾಹಿತ್ಯ ಕೂಡ ಅದೇ ರೀತಿ ಇದೆ. ವಿಶ್ವ ಮಾನವ ಸಂದೇಶವನ್ನು ಸಾರುವಂತಹ ವಿಚಾರ ವೈಜ್ಞಾನಿಕ ಕಾರಣ. ಆದುದರಿಂದ ನನ್ನದೊಂದು ಅಭಿಪ್ರಾಯ, ಇದಕ್ಕೆ ನಮ್ಮ ಸದಸ್ಯರು ಯಾವ ರೀತಿ ಅಭಿಪ್ರಾಯ ಕೊಡುತ್ತಾರೆಂದು ಗೊತ್ತಿಲ್ಲ. ವಿಶ್ವ ಮಾನವ ಸಂದೇಶವನ್ನು ಸಾರಿದಂತಹ ಮಹಾನ್ ವ್ಯಕ್ತಿಯಾದ ಕುವೆಂಪುರವರ ಭಾವಚಿತ್ರವನ್ನು ಈ ಸದನದಲ್ಲಿ ಇಡಬೇಕು ಎಂದು ನನ್ನ ಆಸೆ. ಇದಕ್ಕೆ ಸದಸ್ಯರು ಏನು ಅಭಿಪ್ರಾಯ ಕೊಡುತ್ತಾರೋ ಅದು ಅವರಿಗೆ ಸೇರಿದ್ದುದು. ಮಾನ್ಯ ವಾಟಾಳ್ ನಾಗರಾಜ್‌ರವರು ಅವರಿಗೆ ಬಹಳ ದೊಡ್ಡ ಪ್ರಶಸ್ತಿ ಬೇಕು ಎಂದರು. ನಿಜವಾದ ಪ್ರಶಸ್ತಿ ಅವರಿಗೆ ಯಾವಾಗ ಸಿಗುತ್ತದೆ ಎಂದರೆ ಸಮಾಜದಲ್ಲಿ ಅವರ ವಿಚಾರವನ್ನು ಅನುಷ್ಠಾನಕ್ಕೆ ತಂದಾಗ ಮಾತ್ರ ಸಿಗುತ್ತದೆ. ಉದಾಹರಣೆಗೆ ನಾವು ಮಂಡ್ಯ ಜಿಲ್ಲೆಯಲ್ಲಿ ಅವರ ಹೆಸರಿನಲ್ಲಿ 20 ಸಾವಿರ ಸರಳ ಮದುವೆಗಳನ್ನು ಮಾಡಿಸಿದೆವು.

ಮಹಿಳೆಯರ ವಿರುದ್ಧ ಶೋಷಣೆಗೆ ಒಳಗಾಗಿರತಕ್ಕಂಥ ಮತ್ತು ವರದಕ್ಷಿಣೆ ಪಿಡುಗು, ಮೂಢನಂಬಿಕೆಗಳನ್ನು ತಿರಸ್ಕಾರ ಮಾಡುವಂತಹ ವಿಚಾರದಲ್ಲಿ 20-25ಸಾವಿರ ಸರಳ ಮದುವೆಗಳನ್ನು ಮಾಡುವಂತಹ ಕಾರ್ಯಕ್ರಮವನ್ನು, ಮಂಡ್ಯ ಜಿಲ್ಲೆಯಲ್ಲಿ ರಾಷ್ಟ್ರಕವಿ ಕುವೆಂಪುರವರನ್ನು ಪ್ರತಿನಿತ್ಯ ನೆನಸಿಕೊಳ್ಳುವಂತಹ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಅವರೆಲ್ಲರ ನೆನಪನ್ನು ನಾವು ಎಷ್ಟು ಮಾಡಿಕೊಳ್ಳುತ್ತೇವೆಯೊ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆಯೊ, ನಾವು ಅವರ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದರೆ ಮಾತ್ರ ಅವರ ಆತ್ಮಕ್ಕೆ ಶಾಂತಿ ಕೋರಿದ್ದಕ್ಕೂ ಸಾರ್ಥಕ, ಇಲ್ಲದಿದ್ದರೆ ಏನು ಪ್ರಯೋಜನವಿಲ್ಲವೆಂದು ನನ್ನ ಅಭಿಪ್ರಾಯ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ರಾಷ್ಟ್ರಕವಿ ಕುವೆಂಪುರವರ ಬಗ್ಗೆ ಏನು ಕಾರ್ಯಕ್ರಮವನ್ನು ರೂಪಿಸಿದ್ದಾರೆ ಅದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ, ನನ್ನ ವಂದನೆಗಳನ್ನು ಸಲ್ಲಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಮುನಿಯಪ್ಪ (ಗಾಂಧಿನಗರ):- ಸನ್ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಸಂತಾಪ ಸೂಚನೆಯ ಬಗ್ಗೆ ಎರಡು ಮಾತುಗಳನ್ನಾಡಬಯಸುತ್ತೇನೆ. ಮಾನ್ಯ ಕುವೆಂಪುರವರು "ಎಲ್ಲಾದರೂ ಇರು ಎಂಥಾದರು ಇರು ಎಂದೆಂದು ನೀ ಕನ್ನಡಿಗನಾಗಿರು" ಎಂದು

ಬರೆದಂತಹ ಕನ್ನಡದ ಕವಿ, ರಸಕವಿ, ರಾಷ್ಟ್ರಕವಿ 20ನೇ ಶತಮಾನದ ಕನ್ನಡನದ ಕುಲಕೋಟಿ ಕಾವ್ಯಲೋಕದ ಹೃದಯ ಸಾಮ್ರಾಟ, ಕನ್ನಡ ಸ್ಥಾನಮಾನಗಳನ್ನು ಕೇವಲ 18–19 ಜಿಲ್ಲೆಗಳಿಗೆ ಅಲ್ಲದೇ ಈ ದೇಶದ ನಾನಾ ಭಾಗಗಳಿಗೂ, ಪಾಶ್ಚಿಮಾತ್ಯ ರಾಷ್ಟಗಳಿಗೂ ಕೂಡ ಕನ್ನಡದ ಕಂಪು ಹರಡಿದಂತಹ ಮಹಾನ್ ವ್ಯಕ್ತಿ ಕುವೆಂಪುವರು. ಅವರ ಬಗ್ಗೆ ಬರೆಯುವಂತಹ ಸಂದರ್ಭ ಬಂದಾಗ, ಮಾತನಾಡುವ ಸಂದರ್ಭ ಬಂದಾಗ ಇಲ್ಲಿ ಮಾಜಿ ಮುಖ್ಯ ಮಂತ್ರಿಯವರು ಮಾತನಾಡಿದರು. ಅಲ್ಲಿ ಶ್ರೀಮತಿ, ಲಲಿತಾ ನಾಯಕ್‌ರವರು ಮತ್ತು ಶ್ರೀ ವಾಟಾಳ್ ನಾಗರಾಜ್‌ವರು ಮಾತನಾಡುವಂತಹ ಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪುರವರ ಬಗ್ಗೆ ಮಾತನಾಡುವಂಥ ವಿಷಯವೇನಿದೆ, ಇವತ್ತು ರಾಜ್ಯ ಸರ್ಕಾರವಾಗಲಿ, ಕನ್ನಡ ನಾಡಿನ ಸಾಂಸ್ಕೃತಿಕ ಚಟುವಟಿಕೆಗಳನ್ನು ಮಾಡುವ ಬಗ್ಗೆ ನಾವು ಹೊರರಾಜ್ಯಗಳಿಗಿಂತ ಹಿಂದುಳಿದಿರುವಂತಹ ಸಂದರ್ಭದಲ್ಲಿ ಕುವೆಂಪುರವರ ಮುಕ್ತ ನುಡಿಗಳು ಏನಿದೆ. ''ಕನ್ನಡಕ್ಕಾಗಿ ಹೋರಾಡು ಕನ್ನಡದ ಕಂದ, ಕನ್ನಡವ ಕಾಪಾಡು ನನ್ನ ಆನಂದ, ರನ್ನನಿರುವ ಕನ್ನಡಕ್ಕೆ ಬಹುದೆ ಅನ್ಯರ ಧಕ್ಕೆ, ಬರಿಯ ಹೆಸರೆ ಸಿಡಿದ ಚಿಕ್ಕೆ, ಎಂದು ಬರೆಂದತಹ ಕನ್ನಡಿಗರಿಗೂ, ಕನ್ನಡೇತರರಿಗೂ ಅವರ ರಕ್ತ ನರನಾಡಿಗಳಲ್ಲಿ ಕನ್ನಡ ತನವನ್ನು ತುಂಬಿದಂತಹ ರಾಷ್ಟ್ರಕವಿ ಕುವೆಂಪುರವರಂತಹ ಮಹಾನ್ ವ್ಯಕ್ತಿಗಳು ಈ ಕನ್ನಡದ ಮಣ್ಣಿನಲ್ಲಿ ಹುಟ್ಟದೆ ಬೇರೆ ಯಾವುದಾದರೂ ರಾಜ್ಯದಲ್ಲಿ ಹುಟ್ಟಿದರೆ ಅವರು ಪ್ರಪಂಚದ ಮಹಾನ್ ವ್ಯಕ್ತಗಳಾಗಿರುತ್ತಿದ್ದರು. ನನಗೂ ಮುಂಚೆ ಮಾತನಾಡಿದಂತಹ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಅವರು ಬರೆದಂತಹ ಎಷ್ಟೋ ಪುಸ್ತಕಗಳು ಇವತ್ತು ಬೇರೆ ಭಾಷೆಯಲ್ಲಿ, ಪಾಶ್ಚಾತ್ಯ ಭಾಷೆಯಲ್ಲಿ ಬರೆಯುವಾಗ ಮಾತ್ರ ಮನುಷ್ಯನಿಗೆ ಯೋಗ್ಯತೆ ಇದೆ ಎಂದು ಹೇಳುವುದಾದರೆ ಆ ಯೋಗ್ಯತೆಯನ್ನು ಹೇಳುವುದಕ್ಕೆ ಜನರು ಬೇಕು. ಜನ ಹೇಳಬೇಕಾದರೆ ಸಾಹಿತ್ಯ ಬೇಕು. ರಾಷ್ಟ್ರಕವಿ ಕುವೆಂಪುರವರನ್ನು ಹಲವಾರು ವರ್ಷಗಳ ಮುಂಚೆ ಒಮ್ಮೆ ಮೈಸೂರಿನಲ್ಲಿ ಸಂಧಿಸಿದ ಸಂದರ್ಭದಲ್ಲಿ ಪೆರಿಯಾರ್‌ರವರ ಬಗ್ಗೆ ಅವರ ಸಮಾಜ ಸುಧಾರಣೆಯ ವಿಚಾರಗಳ ಬಗ್ಗೆ ಹೇಳುವಂತಹ ಸಂದರ್ಭದಲ್ಲಿ ಕನ್ನಡದಲ್ಲಿ ಕೆಲವು ಪುಸ್ತಕಗಳನ್ನು ಅವರು ಕೈಯಲ್ಲಿ ಕೊಡುವಂತಹ ಸಂದರ್ಭದಲ್ಲಿ ಪೆರಿಯಾರ್ ಎಂದರೆ ಯಾರೊ ಒಬ್ಬ ಸಮಾಜ ಘಾತಕ, ರಾಕ್ಷಸ, ಎನ್ನುವಂಥ ಒಂದು ಭಾವನೆ ಇದ್ದಂಥ ಕಾಲವೊಂದು ಇತ್ತು. ಅವರ ಪುಸ್ತಕಗಳನ್ನು ಓದಿದ ಮೇಲೆ ನಿಜವಾದ ಸಮಾಜ ಸುಧಾರಕ ಪೆರಿಯಾರ್‌ರವರು ಇವರು ಇಂತಹ ವಿಚಾರಗಳನ್ನು ಸಮಾಜ ಸುಧಾರಣೆಯನ್ನು ಮಾಡುವಂಥವರು ಎಂದು ನನಗಿಂತ ಮುಂಚೆ ಮಾತನಾಡಿದಂತಹ ಸದಸ್ಯರು ಹೇಳಿದರು. ಮಂಡ್ಯ ಜಿಲ್ಲೆಯಲ್ಲಿ ಇಂತಹ ಲಕ್ಷಾಂತರ ಮದುವೆಗಳನ್ನು ಮಾಡಿ ಸಮಾಜ ಸುಧಾರಣೆ ಮಾಡಿದ್ದಾರೆಂದು ಪೆರಿಯಾರ್‌ರವರ ಬಗ್ಗೆ ಹೊಗಳಿ ಮಾತನಾಡುವಾಗ ಅವರು ಕನ್ನಡದಲ್ಲಿ ಬರೆದಿರುವಂತಹ ಪುಸ್ತಕಗಳನ್ನು ಕುವೆಂಪುರವರಿಗೆ ಕೊಟ್ಟೆವು. ಆ ರೀತಿ ಕುವೆಂಪುರವರು ಸಮಾಜದಲ್ಲಿ ಯಾವ ವಿಚಾರವನ್ನು ಮಾತನಾಡಿಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇವತ್ತು ನಾವು ನೋಡುತ್ತೇವೆ. ಜಾತಿ, ಮತ, ರಾಜಕೀಯ ವಿಕೋಪಗಳನ್ನು ನಾವು ತಂದ ಜನರನ್ನು ಶೋಷಣೆ ಮಾಡುತ್ತೇವೆ. ಅವರು ಒಮ್ಮೆ ಹೇಳುತ್ತಾರೆ, ನೂಕು ನೂರಾರು ದೇವರುಗಳನ್ನು ಪೂಜಿಸು ಭಾರತಾಂಬೆಯನ್ನು ಎಂದು ಹೇಳಿದಂತಹ ಕವಿ ನುಡಿ ಏನಿದೆ, ಇವತ್ತು ನಮ್ಮಲ್ಲಿ ಇರುವಂತಹ ಮತೀಯ ಘರ್ಷಣೆ, ಕಚ್ಚಾಟ ಮನುಷ್ಯ ಮನುಷ್ಯನಾಗಿ ಬಾಳುವುದಕ್ಕೆ ಬಿಡದೆ ಸಂಕಷ್ಟಕ್ಕೆ ಸಿಲುಕಿಸುವಂತಹ ಸಂದರ್ಭದಲ್ಲಿ ''ನೂಕಾಚೆ ನೂರಾರು ದೇವರನ್ನು ಪೂಜಿಸು ಭಾರತಾಂಬೆಯನ್ನು ಎಂದು ಭಾರತಾಂಬೆಯ ಬಗ್ಗೆ ಅವರು ಇತ್ತ ಗೌರವವನ್ನು ಸೂಚಿಸುತ್ತದೆ. ಇಂತಹ ಮಹಾಕವಿ ಈ ಕನ್ನಡ ಮಣ್ಣಿನಲ್ಲಿ ಹುಟ್ಟಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕ ತೀರ್ಮಾನ ಏನು ಇದೆ ಆ ಕನ್ನಡದ ಕವಿಗೆ ಗೌರವವನ್ನು ಸಲ್ಲಿಸಿ ನನಗೆ ಮುಂಚೆ ಮಾತನಾಡಿದ ಸದಸ್ಯರ ರೀತಿಯಲ್ಲಿ ಈ ಒಂದು ಕೆಂಗೆಲ್ ಹನುಮಂತಯ್ಯನವರು ಕಟ್ಟಿದಂಥ ಸುಂದರವಾದಂಥ ವಿಧಾನಸೌಧ ಕರ್ನಾಟಕ ರಾಜ್ಯದ ಪ್ರಗತಿಯನು

ನಿರ್ಣಯಿಸುವಂಥ ಈ ಸುಂದರವಾದಂಥ ಕಟ್ಟಡದಲ್ಲಿ, ಮನೆಯಲ್ಲಿ ರಾಷ್ಟ್ರಕವಿ ಕುವೆಂಪುರವರ ಭಾವಚಿತ್ರವನ್ನು ಅನಾವರಣ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಂಡು ಮತ್ತು ಈ ಸಮಾಜದಲ್ಲಿ ಹಲವಾರು ರೀತಿಯಲ್ಲಿ ಕೆಲಸ ಮಾಡಿರುವಂಥ ಮಹಾನ್ ನಾಯಕರುಗಳು ಅಗಲಿದ್ದಾರೆ. ಅವರಿಗೂ ಕೂಡ ನನ್ನ ಶ್ರದ್ಧಾಂಜಲಿಯನ್ನು ತಿಳಿಸಿ, ಈ ಒಂದು ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಲು ನನಗೆ ಅವಕಾಶವನ್ನು ಮಾಡಿಕೊಟ್ಟಂಥ ತಮಗೂ ನನ್ನ ವಂದನೆಯನ್ನು ತಿಳಿಸಿ ಈ ಸಂತಾಪಸೂಚನಾ ನಿರ್ಣಯವನ್ನು ಅನುಮೋದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ):- ಸನ್ಮಾನ್ಯ ಸಭಾಧ್ಯಕ್ಷರೆ, ಕುವೆಂಪುವರು ಮೇರುಕೃತಿಗಳನ್ನು ರಚಿಸಿದವರು. ಅವರ ಸಮಸ್ತ ದೃಷ್ಟಿ ಏನು ಇತ್ತು ಎಂಬುದನ್ನು ಅರಿವು ಮಾಡಿಕೊಳ್ಳತಕ್ಕಂಥ ಶಕ್ತಿ ನಮಗಿಲ್ಲ. 1957ನೇ ಇಸವಿ ಸೆಪ್ಟೆಂಬರ್, ಅಕ್ಟೋಬರ್‌ನ ಅಂದಿನ ದಿನಗಳಲ್ಲಿ ಪ್ರಖ್ಯಾತರಾದಂತಹ ವರ್ಣಚಿತ್ರಕಾರರು. ಬಹುಶಃ ಜೆ.ಹೆಚ್. ಪಟೇಲರಿಗೆ ಗೊತ್ತಿರಬಹುದು; ನನಗೆ ಹೆಸರು ಮರೆತು ಹೋಗಿದೆ. ನಾನು ಇಂಟರ್‌ಮಿಡಿಯೆಟ್ ಫೇಲಾದಂಥ ವಿದ್ಯಾರ್ಥಿ. ಮೈಸೂರಿನ ದಸರಾವನ್ನು ನೋಡಲಿಕ್ಕೆ ಹೋಗಿದ್ದೆ. ಅಲ್ಲಿ ಒಂದು ವರ್ಣಚಿತ್ರ ಇತ್ತು. ಒಂದು ಸ್ಪುರದ್ರೂಪಿಯಾದಂಥ ಸುಂದರತೆ ಮೈವೆತ್ತಂಥ ಹೆಣ್ಣು ಮಗಳ ವರ್ಣಚಿತ್ರ. ಅದರ ಕೈಯಲ್ಲಿ ಒಂದು ಬಿಳಿ ತಲೆ, ಆ ತಲೆಯಲ್ಲಿ ಮಾಂಸ ಕಣ್ಣುಗಳೆಲ್ಲಾ ಗುಳಿಗಳಾಗಿ ಏನೂ ಇಲ್ಲದೇ ಇರತಕ್ಕಂಥ ತಲೆ ಹಿಡಿದುಕೊಂಡಿರತಕ್ಕಂಥದ್ದು. ಅದರ ಹಿಂದೆ ಅಣತೆ ಬೆಳಕು. ಹಿಂದಿಯಲ್ಲಿ ಏನೋ ಕೆಳಗೆ ಬರೆದಿದ್ದರು. ನಮ್ಮ ಮಂಡ್ಯದ ಕೆಲವು ಸ್ನೇಹಿತರು ಹಾಗೂ ನಾವು ಹೋಗಿದ್ದೇವು. ಇದೇನು ಅಂತ ನಮಗೆಲ್ಲಾ ಬಹಳ ಆಶ್ಚರ್ಯವಾಗಿಯಿತು. ಭಾರಿ ಚೆನ್ನಾಗಿ ಇತ್ತು. ಆ ಬುರುಡೆಯನ್ನು ಬಿಟ್ಟು ಅಷ್ಟನ್ನೇ ನೋಡಿದರೆ ಆ ರೂಪವೇ ಬೇರೆ ಆ ಬುರುಡೆಯನ್ನು ಹೋಲಿಸಿಕೊಂಡಾಗ ಆ ಮುಖದ ಕೆಳಗೆ ಬುರುಡೆಯನ್ನು ಹಿಡಿದುಕೊಂಡಿರತಕ್ಕಂಥದ್ದು. ಯಾರು ಇಷ್ಟೊಂದು ಚೆನ್ನಾಗಿ ಬರೆದಿದ್ದಾರಲ್ಲ. ಅದು ಯಾರೂಂತ ನನಗೆ ಮರೆತುಹೋಗಿದೆ. ಆದರೆ ಕೆಳಗೆ ಬರೆದಿತ್ತು. ಅಲ್ಲಿ ಅವರ ಕಡೆಯವರು ಇದ್ದರು. ಇದು ಯಾರು ಬರೆದದ್ದು? ಇದು ಏನು ಬರೆದಿರತಕ್ಕಂಥದ್ದು. ಪುಟ್ಟಪ್ಪನವರ ಕವನದ ಸಾಲುಗಳನ್ನು ಹಾಕಿ ಬರೆದಿದ್ದರು. ಅವರ ಪದ್ಯ ಯಾವುದೆಂದರೆ 'ಗತಿ'. ಜೋಷಿಯವರಿಗೂ ನಮಗೂ ಹಾಡುವ ಅಭ್ಯಾಸವಿತ್ತು. ಕಾಲೇಜು ದಿನಗಳಲ್ಲಿ ನಾವು ಹಾಡುತ್ತಿದ್ದೆವು. ಅದರಲ್ಲಿ ನುಡಿ ಈ ರೀತಿ ಇತ್ತು. ''ಹಿಂದಿವದನವು ಸೊಬಗಿನ ಬೀಡು. ಮುಂದಿದು ಮಸಣದ ಬಿಳಿ ತಲೆಯೊಳು'' ಎಷ್ಟು ವಾಲ್ಯೂಮ್ ಬೇಕಾದರೂ ಬರೆಯಬಹುದು. ಅವರು ಅರವಿಂದರ ತರಹ ಫಿಲೋಸಫರ್ ಹೌದು. ರವೀಂದ್ರನಾಥ ಟಾಗೂರ್ ತರಹವೂ ಹೌದು. ಈ ಸಂದರ್ಭದಲ್ಲಿ ಡಿ.ವಿ.ಜಿ.ಯವರ ಒಂದು ಕವನ ನೆನಪಿಗೆ ಬರುತ್ತದೆ. ''ತೊಟ್ಟಿಲುಗಳೆಷ್ಟು ಮಸಣಗಳಷ್ಟು ಧರೆಯೊಳಗೆ, ತೊಟ್ಟಿಲಿಗೆ ಹಬ್ಬ ಮಸಣವು ತಿಂದು ತೇಗುತ್ತಿರಲು ಹುಟ್ಟುವವರೆಲ್ಲಾ ಸಾಯದಮೆಗೆ ಹೊಸದಾಗಿ ಹುಟ್ಟುವ ಎಡೆಯಲ್ಲೋ ಮಂಕುತಿಮ್ಮ'' ಹುಟ್ಟಿರುವವರು ಸಾಯಲೇಬೇಕು. ಆದರೆ ಕೆಲವರು ಸತ್ತರೆ ಕೆಲವು ಮನೆಯಲ್ಲಿ ಕೆಲವು ಮನೆ ಬಡವಾಗುತ್ತದೆ. ಕೆಲವರು ಸತ್ತರೆ ಕೆಲವು ಸಮಾಜ ಬಡವಾಗುತ್ತದೆ. ಕೆಲವು ರಾಷ್ಟ್ರ ಬಡವಾಗುತ್ತದೆ. ಇನ್ನೂ ಕೆಲವರು ಸತ್ತರೆ ಮನುಜಕುಲ ಬಡವಾಗುತ್ತದೆ. ಏಕೆಂದರೆ ಮನುಷ್ಯ ಮನುಷ್ಯನಾಗಿ ಅಷ್ಟೇ ಆಗಿಲ್ಲ ನರಿ ಆಗಬಲ್ಲ, ಹೂವಾಗಬಲ್ಲ, ಹಾವಾಗಬಲ್ಲ, ಹಂದಿಯಾಗಬಲ್ಲ, ವಿಶ್ವಮಾನವನಾಗಬಲ್ಲ. ಈ ವಿಶ್ವ ಸಮುದಾಯಕ್ಕೆ ಅಂದರೆ ಮನುಕುಲಕ್ಕೆ ''ಮನುಜ ಕುಲವೊಂದೇ ಕಣ'' ಎಂದು ಹೇಳಿದರು. ವಿಶ್ವಮಾನವ ಸಂದೇಶವನ್ನು ಅವರು ಕೊಟ್ಟರು. ಒಂದು ಏನು ಎಂದು ಹೇಳಿದರೆ ಅವರು ಸಂಕುಚಿತೆಯ ಸೋಂಕಿಲ್ಲದಂತಹ ಕವಿ. ಅವರ ಚೇತನ ಜಾತಿ ಮತಗಳ ಒಳಪಟ್ಟಿಗೆ ಇರಲಿಲ್ಲ. ದಿಗ್‌ದಿಗಂತಗಳ ಎಲ್ಲೆ ಮೀರಿ ಜಾತಿ ಸಮಾಜ, ಕಾನೂನು ಕಟ್ಟಳೆಗಳೆಲ್ಲ ಮೀರಿ ಮಹಾಚೇತನವಾಗಿ ಅವರು ವಿಶ್ವಮಾನವನಾಗಿ ಬದುಕಿದರು. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ.

ಅವರು ಮನುಜ ಕುಲಕ್ಕೆ ಕೊಟ್ಟಂಥ ವಿಶ್ವ ಮಾನವ ಸಂದೇಶ ಏನಿದೆ ಅದು ಈ ವಿಶ್ವದ ಎಲ್ಲಾ ಮಾನವರಿಗೂ ತಲುಪಬೇಕು. ಅವರ ಸಂದೇಶ ಇರುವುದು ಅವರ ಕೃತಿಗಳಲ್ಲ. ತಮ್ಮ ಸಂದೇಶವನ್ನು ತಮ್ಮ ಕೃತಿಗಳ ಮೂಲಕ ಮೂಡಿಸಿದ್ದಾರೆ. ಆ ಕೃತಿಗಳು ಭಾಷಾಂತರವಾಗಬೇಕು. ನನ್ನ ವಿನಂತಿ ಸರ್ಕಾರಕ್ಕೆ ಏನೆಂದರೆ, ಕುವೆಂಪು ಅಕಾಡೆಮಿ ಫಾರ್ ವರ್ಲ್ಡ್ ಲಿಟರೇಚರ್ ಎಂದು ಮಾಡಿ ಅವರ ಕೃತಿಗಳನ್ನು ಭಾಷಾಂತರ ಮಾಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಕೇವಲ ನಾವಷ್ಟೇ ಬಡವಾಗಿಲ್ಲ, ನಮ್ಮ ಸಮಾಜ ಅಷ್ಟೇ ಅಲ್ಲ, ನಮ್ಮ ರಾಷ್ಟ್ರ ಅಷ್ಟೇ ಅಲ್ಲ ಈ ಒಬ್ಬ ಮಹಾನ್ ಚೇತನವನ್ನು ಕಳೆದುಕೊಂಡು ನಮ್ಮ ಇಡೀ ಮನುಜ ಕುಲವೇ ಬಡವಾಗಿದೆ ಎಂಬ ಮಾತನ್ನು ಹೇಳಬಯಸುತ್ತೇನೆ.

ಇನ್ನು ನನಗೆ ಬಹಳ ಆತ್ಮೀಯವಾಗಿದ್ದವರು ಎಂದರೆ ಡಾ. ಹೆಚ್.ಎಲ್. ತಿಮ್ಮೇಗೌಡರು. ಅವರು ನಮಗೆ ಸಂಬಂಧಿಗಳೂ ಹೌದು. ಅವರು ಊರಿಗೂ ನಮ್ಮ ಊರಿಗೂ ಕೇವಲ ನಾಲ್ಕೇ ಮೈಲಿ ಅಂತರ. ಅವರಲ್ಲಿ ಒಂದು ವಿಶೇಷತೆ ಏನಿತ್ತೆಂದರೆ, ಎಂಥ ಸಂದರ್ಭವೇ ಬರಲಿ ಅವರು ತಮ್ಮ ಸ್ವಾಭಿಮಾನವನ್ನು ಮಾತ್ರ ಬಿಟ್ಟುಕೊಡುತ್ತಿರಲಿಲ್ಲ. ಅವರಿಗೆ ಸ್ವಾಭಿಮಾನವೇ ಘನ. ನಾವೆಲ್ಲರೂ ಅವರನ್ನು ನಮ್ಮ ಹಿರಿಯ ಅಣ್ಣನ ರೀತಿಯಲ್ಲಿ ನೋಡಿಕೊಂಡು ಬಂದೆವು. ಅವರ ಜೊತೆಯಲ್ಲಿ ಬೆಳೆದವರೆಲ್ಲರಿಗೂ ಒಳ್ಳೆಯ ಬುದ್ಧಿಯೇ ಬಂದಿದೆ. ಅವರ ಜೊತೆಯಲ್ಲಿ ಇದ್ದವರೆಲ್ಲರಿಗೂ ಸದ್ಗುಣ, ಸದ್ಬುದ್ಧಿಯೇ ಬಂದಿದೆ. ಅವರು ಇನ್ನೂ ಕೆಲವಾರು ವರ್ಷಗಳ ಕಾಲ ಇದ್ದಿದ್ರೆ ನಮಗೆಲ್ಲಾ ಒಳ್ಳೆಯ ಮಾರ್ಗದರ್ಶನವನ್ನು ಮಾಡುತ್ತಿದ್ದರು. ಆದರೆ ಅವರ ನಿಧನದಿಂದ ಇವತ್ತು ನಮ್ಮ ಮನಸ್ಸಿಗೆ ತುಂಬಾ ನೋವಾಗಿದೆ. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ತಂದಿರತಕ್ಕ ಈ ಸಂತಾಪ ಸೂಚಕ ನಿರ್ಣಯ ಏನಿದೆ ಅದನ್ನು ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಡಾ. ಜೀವರಾಜ ಆಳ್ವ (ಚಿಕ್ಕಪೇಟೆ):- ಸನ್ಮಾನ್ಯ ಅಧ್ಯಕ್ಷರೆ, ಶತಮಾನದ ಯುಗಪುರುಷ ದಾರ್ಶನಿಕ ಕುವೆಂಪುರವರು ಅಜರಾಮರ. ಕುವೆಂಪು ಮತ್ತೊಮ್ಮೆ ಹುಟ್ಟಿ ಬಾ ಎಂದು ಹೇಳೋಣವೆಂದು ನನಗನಿಸುತ್ತದೆ. ನಾನು ವಿಶ್ವಕನ್ನಡ ಸಮ್ಮೇಳನದ ಜವಾಬ್ದಾರಿಯನ್ನು ಹೊತ್ತು ವಿಶ್ವ ಕನ್ನಡ ಸಮ್ಮೇಳನದ ಉದ್ಘಾಟನೆಯನ್ನು ಮಾಡಬೇಕೆಂದು ಅವರನ್ನು ನಾನು ಆಹ್ವಾನ ಮಾಡುವುದಕ್ಕೆ ಹೋದಾಗ, ನಾನು ಇಂಥ ಸಭೆ ಸಮಾರಂಭಗಳಿಗೆ ಬರುವುದಿಲ್ಲವೆಂದು ಅವರು ಬಹಳ ಖಚಿತವಾಗಿ ಹೇಳಿದರು. ಈ ವಿಚಾರದಲ್ಲಿ ನಾನು ಮಾನ್ಯ ರಾಮಕೃಷ್ಣ ಹೆಗಡೆಯವರ ಹತ್ತಿರ ಎರಡನೇ ಸಾರಿ ಮಾತನಾಡಿದ ಮೇಲೆ ಅವರು ಪುನಃ ನನ್ನನ್ನು ಕಳುಹಿಸಿಕೊಟ್ಟರು. ಆಗ ಮಾನ್ಯ ಕುವೆಂಪುರವರು ಹೇಳಿದರು, ನಾನು ಎರಡು ಷರತ್ತುಗಳನ್ನು ಹಾಕುತ್ತೇನೆ. ನಾನು ಈ ವಿಶ್ವಕನ್ನಡ ಸಮ್ಮೇಳನವನ್ನು ಉದ್ಘಾಟನೆ ಮಾಡಬೇಕಾದರೆ ವಿಶ್ವ ಕನ್ನಡ ಸಮ್ಮೇಳನದ ತಾರಕ ಮಂತ್ರ ವಿಶ್ವ ಮಾನವತ್ವದ ದಿವ್ಯ ಸಂದೇಶವಾಗಬೇಕು, ನಂತರ ಈ ವಿಶ್ವ ಮಾನವತ್ವದ ದಿವ್ಯ ಸಂದೇಶವನ್ನು ಭಾರತದ ಎಲ್ಲ ಭಾಷೆಗಳಿಗೂ ಭಾಷಾಂತರ ಮಾಡಿಸಬೇಕು ಎಂದು. ಆ ಎರಡೂ ಷರತ್ತುಗಳಿಗೆ ನಾನು ಒಪ್ಪಿಕೊಂಡೆ. ಆ ವಿಶ್ವಕನ್ನಡ ಸಮ್ಮೇಳನದಲ್ಲಿ ವಿಶ್ವ ಮಾನವತ್ವದ 'ಓ ನನ್ನ ಚೇತನ ಆಗು ನೀ ನಿಕೇತನ, ಆಗು, ಆಗು, ಆಗು ನೀ ಅನಿಕೇತನ' ಎಂದು ಹೇಳಿದರು. ಅಲ್ಲಿ ಅಂಥ ದಿವ್ಯ ಸಂದೇಶವನ್ನು ನೀಡಿದಂಥ ಆ ವ್ಯಕ್ತಿಯ ಭಾವಚಿತ್ರ ಅಥವಾ ಪ್ರತಿಮೆಗಳನ್ನು ಅನಾವರಣ ಮಾಡುವಂಥ ಸಲಹೆ ಸೂಚನೆಗಳು ಸಭಾ ಸದಸ್ಯರಿಂದ ಬಂದಿದೆ. ನನ್ನ ಮಟ್ಟಿಗೆ ಹೇಳುವುದಾದರೆ ಇದು ಬಹಳ ತಪ್ಪು ಎನಿಸುತ್ತದೆ. ಇದನ್ನು ಅಷ್ಟರಮಟ್ಟಿಗೆ ಸಂಕುಚಿತ ಮಾಡಬೇಡಿ. ಅವರ ವಿಚಾರಧಾರೆಯನ್ನು ಮಾನ್ಯ ಬಂಗಾರಪ್ಪನವರ ಸರ್ಕಾರದ ಹಿಂದಿನ ಸರ್ಕಾರವಾದ ನಮ್ಮ ಸರ್ಕಾರ ಮೊದಲು ಚರ್ಚೆ ಮಾಡಿ, ಅದಕ್ಕೆ ಒಂದು ಬುನಾದಿಯನ್ನು ಹಾಕಿತು. ಎರಡೂ ಷರತ್ತುಗಳನ್ನೂ ನಡೆಸಿಕೊಟ್ಟೆವು. ಅದರ ಫಲವೇ ಕವಿಶೈಲದಲ್ಲಿ

ಇವತ್ತು ಒಂದು ದೊಡ್ಡ ಸಾಂಸ್ಕೃತಿ ಕೇಂದ್ರ ಸಾಹಿತ್ಯದ ಕೇಂದ್ರ ಆಗಿದೆ. ನಾನು ಇವತ್ತು ಟೀಕೆ ಮಾಡುತ್ತಿದ್ದೇನೆಂದು ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬಾರದು. ಇವತ್ತು ಈ ಫಿಲಾಸಫಿ ಅಥವಾ ಕಾನ್‌ಸೆಪ್ಟ್ ಅನ್ನು 4 ಗೋಡೆಗಳ ಮಧ್ಯೆ ಈ ಕುವೆಂಪುರವರ ಭಾವಚಿತ್ರವನ್ನು ಕೊಟ್ಟು ಅವರ ಮನೆಯುನ್ನು ಒಂದು ಐತಿಹಾಸಿಕ ಮ್ಯೂಸಿಯಂ ಆಗಿ ಮಾಡಬೇಡಿ. ಏಕೆಂದರೆ ಇವತ್ತು ಇದರ ಅಗತ್ಯವಿಲ್ಲ. ಅವರು ಬಯಸಿದ್ದು ತಮ್ಮ ಕೃತಿಯ ಭಾಷಾಂತರ ಆಗಬೇಕು.

ಈಗ ರಾಮಾಯಣದ ಬರೀ ವಿಶ್ವ ಮಾನವತ್ವದ ತತ್ವ ಭಾಷಾಂತರ ಮಾಡಲಿಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಲಾಯಿತು. ಅದು ಪ್ರಕಾಶ್‌ರವರಿಗೂ ಗೊತ್ತಿದೆ. ಈ ಅಖಂಡ ಸಾಹಿತ್ಯವನ್ನು ವಿಶ್ವ ಭಾಷೆಗಳಿಗೆ ಭಾಷಾಂತರ ಮಾಡಬೇಕಾದರೂ ಎಷ್ಟು ಸಾಧ್ಯ ? ಕನ್ನಡ ಸಂಸ್ಕೃತಿಯ ಪೂರ್ಣಹಣ ಅಲೋಕೇಶನ್ ಕೊಟ್ಟರೂ ಸಾಧ್ಯವಿಲ್ಲ. ಒಂದು ವರ್ಷದಲ್ಲಿ ಸಾಧ್ಯವಿಲ್ಲ, ಹತ್ತು ವರ್ಷದಲ್ಲಿ ಸಾಧ್ಯವಿಲ್ಲ, ಶತಮಾನದಲ್ಲೇ ಸಾಧ್ಯವಿಲ್ಲ ಸಭಾಧ್ಯಕ್ಷರೇ. ಆದುದರಿಂದ ನನ್ನ ಪ್ರಾರ್ಥನೆ ಇಷ್ಟೆ. ಇವೊತ್ತು ಕಾನ್‌ಸೆಪ್ಟ್ ಅಂಥ ಹೇಳುತ್ತೇವೆ. ಇವೊತ್ತು ವಿಶ್ವ ಭ್ರಾತೃತ್ವ, ವಿಶ್ವಶಾಂತಿ, ವಿಶ್ವಮಾನವತ್ವ ಎಂದು. ನಾವು ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರವರ ಹೆಸರಿನಲ್ಲಿ ವಿದ್ಯಾ ನಗರದಲ್ಲಿ ಒಂದು ದೊಡ್ಡ ಸಂಸ್ಥೆ ಮಾಡಿದ್ದೇವೆ. ಆ ಸಂಸ್ಥೆ ಮಾಡಿಯಾದ ಮೇಲೆ ಅರ್ಧ ಭಾಗವನ್ನು ಅದರಲ್ಲಿ ಸ್ವಲ್ಪ ಜಾಗವನ್ನು ಪುನಃ ವಿದ್ಯಾ ಇಲಾಖೆ ಕೊಟ್ಟಿದ್ದಾರೆ. ಏನು ದುರಂತ ಎಂದು ಹೇಳಿದರೆ ಯಾವ ಸಂಘರ್ಷ ಒಂದು ಹೊಸ ಭಾರತವನ್ನು ಹೊಸ ರಾಷ್ಟ್ರವನ್ನು ಕಟ್ಟಬೇಕು ಎಂದು ಮಾಡಿದಂತಹ ವಿದ್ಯಾ ಕೇಂದ್ರ ಏನಿದೆ ಅಲ್ಲಿ. ರಾಜೀವ್ ಗಾಂಧಿಯವರು ಮೂರು ಸಾರಿ ಹೋಗಿದ್ದಾರೆ, ದೊಡ್ಡ ದೊಡ್ಡ ಪಕ್ಷಗಳ ಸಮಾವೇಶ ನಡೆದಿದೆ, ಬಹಳಷ್ಟು ಕಷ್ಟಪಟ್ಟು ದುಡಿದಂಥ ಒಂದು ವಿದ್ಯಾ ಕೇಂದ್ರ ಜಯಪ್ರಕಾಶ್ ನಾರಾಯಣ್‌ರವರ ವಿದ್ಯಾ ಕೇಂದ್ರ.

ಅಧ್ಯಕ್ಷರು:- ಅದಕ್ಕಿಂತಲೂ ದೊಡ್ಡ ದುರಂತ ಅಂತ ಹೇಳಿದರೆ, ಇಲ್ಲಿದ್ದು ನೀವು ಎಲ್ಲಾ ಮಾಡಬಹುದಾಗಿತ್ತು. ನೀವು ಅಲ್ಲಿ ಹೋಗಿ ಹೇಳೋ ಕಷ್ಟ ಬಂತು.

ಡಾ. ಜೀವರಾಜ ಆಳ್ವ:- ಅದನ್ನು ನಾನು ಹೇಳಿ ಮಾಡಿಸುತ್ತೇನೆ. ಇವೊತ್ತು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ, ಉಪ ಮುಖ್ಯಮಂತ್ರಿಗಳ ಹತ್ತಿರ, ಮಾನ್ಯ ಪ್ರಕಾಶ್‌ರವರು ಇದ್ದಾರೆ, ಲಲಿತಾ ನಾಯಕ್‌ರವರು ಇದ್ದಾರೆ, ನನ್ನ ಪ್ರಾರ್ಥನೆ ಇಷ್ಟೆ, ಈ ಭಾಗದಲ್ಲಿ it should not be cosmetic.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಧ್ಯಕ್ಷರು ಹೇಳಿದರು, ಇದೊಂದು ದೊಡ್ಡ ದುರಂತ, ಅಲ್ಲಿದ್ದು ಮಾಡಬಹುದಾಗಿತ್ತು. ಆದರೆ ಇಲ್ಲಿಗೆ ಬಂದಿದ್ದೀರಿ ಎಂದು. ಯಾವುದು ಸಾಧ್ಯವಿಲ್ಲ ಅದನ್ನು ಇಲ್ಲಿ ಮಾಡಿಸಬಹುದು ಎಂದು ನಂಬಿ ಇಲ್ಲಿಗೆ ಬಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಎಷ್ಟು ಬೇಗ ಸಪೋರ್ಟ್ ಮಾಡುತ್ತಾರೆ. ಮೊದಲು ಒಂದು ಕಾಲದಲ್ಲಿ ಮಾಡುತ್ತಿರಲಿಲ್ಲ. ಎಷ್ಟು ಬೇಗ ಸಹಾಯಕ್ಕೆ ಬಂದಿದ್ದಾರೆ.

ಡಾ. ಜೀವರಾಜ ಆಳ್ವ:- ಸಭಾಧ್ಯಕ್ಷರೆ, ಒಂದು ಎರಡು ನಿಮಿಷ ಅವಕಾಶ ಕೊಟ್ಟರೆ ಹೇಳುತ್ತೇನೆ. ಏತಕ್ಕೆ ಎಂದು ಹೇಳಿದರೆ, ಈಗ ದೇವರಾಜ ಅರಸ್‌ರವರ ವಿಚಾರ ಕೇಂದ್ರ ಎಂದು ಮಾಡಿದರು. ಯಾವುದೋ ಹಳೇ ಬಿಲ್ಡಿಂಗ್, ಯಾವುದೋ ಲೀಸ್ ಔಟ್ ಬಿಲ್ಡಿಂಗ್‌ನಲ್ಲಿ ತೆಗೆದುಕೊಂಡು ಇವೊತ್ತು ಸೀತಾರಾಮ ಕೇಸರಿಯವರನ್ನು ಯಾವುದೋ ಒಂದು ಸಮಾರಂಭಕ್ಕೆ ಕರೆಯಿಸಬೇಕಾಗಿತ್ತು; ಕರೆಸಿದ್ದೀರಿ. ಮಾನ್ಯ ವೀರಪ್ಪ ಮೊಯಿಲಿಯವರಿಗೆ ಒಂದು ಕಾರ್ಯಕ್ರಮ ತೋರಿಸಬೇಕಾಗಿತ್ತು. There are all very very cursery cosmetic programmes which we deceiving

ourselves. ನಾವು ಆ ಅಪವಾದಕ್ಕೆ ಗುರಿಯಾಗುವುದು ಬೇಡ. ಏಕೆಂದರೆ ಸಮಾರಂಭ ಆಗುತ್ತದೆ, ಮೆರವಣಿಗೆ ಮಾಡುತ್ತೀರಿ, ದೇವರಾಜ ಅರಸ್‌ರವರ ಕೇಂದ್ರ ಎಂದು ಹೇಳುತ್ತೀರಿ, ಅಲ್ಲಿಗೆ ಮರೆತು ಹೋಗುತ್ತೀರಿ. ಇವೊತ್ತು ರಾಷ್ಟ್ರಕವಿ ಕುವೆಂಪುರವವ ಮೇಲೆ, ಅವರ ವಿಶ್ವ ಮಾನವತ್ವದ ದಿವ್ಯ ಸಂದೇಶವನ್ನು ನೀವು ನಂಬುವುದು ನಿಜವಾದರೆ ಅಲ್ಲಿಯೇ ಪಕ್ಕದಲ್ಲೇ ಮೂವತ್ತೈದು ಎಕರೆ ಜಮೀನಿದೆ. ವಿಶ್ವ ಶಾಂತಿಗೋಸ್ಕರ ಕೇಂದ್ರ ಮಾಡಿ, ಯಾರೂ ಈಗ ಮಾಡಿಲ್ಲ. ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರವರಿಗೆ ಯಾವುದೋ ಒಂದು ಆಸ್ಪತ್ರೆ ಇರ್ವಿನ್ ಹಾಸ್ಪೆಟಲ್ ಅನ್ನು ಜಯಪ್ರಕಾಶ್ ನಾರಾಯಣ್ ಹಾಸ್ಪೆಟಲ್ ಎಂದು ಮಾಡುತ್ತೀರಿ. ಯಾವುದೋ ಒಬ್ಬ ಬ್ರಿಟಿಷ್ ಗೌವರ್ನರ್ ಇದ್ದದ್ದನ್ನು ಲೋಹಿಯಾ ಹಾಸ್ಪೆಟಲ್ ಎಂದು ಮಾಡುತ್ತೀರಿ. ಅವೆಲ್ಲಾ ಸಂಶೋಧನಾ ಕೇಂದ್ರ ಆಗಬೇಕು. ಹೊಸತನ ಚಿಮ್ಮಬೇಕು. ಆ ನೆಲದಿಂದ ಹುಟ್ಟಬೇಕು. ಯಾವುದೋ ಒಂದು ಜಾಗ ಇದೆ, ಯಾವುದೋ ಒಂದು ಬಿಲ್ಡಿಂಗ್ ಲೀಸ್ ತೆಗೆದುಕೊಂಡು ಮಾಡುವುದರ ಬದಲು ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರವರ ಕೇಂದ್ರಕ್ಕೆ ಹೊಸ ಚೈತನ್ಯ ಕೊಡಿ, ಹೊಸ ಶಕ್ತಿ ಕೊಡಿ, ಅಲ್ಲೊಂದು ಮೂವತ್ತೈದು ಎಕರೆ ಜಮೀನಿದೆ. ಆ ಜಾಗದಲ್ಲಿ ಮಾಡಿ. ಇವೊತ್ತು ಕುವೆಂಪುರವರ ಪ್ರತಿಮೆಗೆ ಐದು ಲಕ್ಷ, ಹತ್ತು ಲಕ್ಷ ಅಂಥ ಖರ್ಚು ಮಾಡಿ ಅದನ್ನು ಪ್ರಧಾನ ಮಂತ್ರಿಗಳು ಉದ್ಘಾಟನೆ ಮಾಡಲಿಕ್ಕೆ ಬರಬೇಕಾದರೆ ಆ ಸೆಕ್ಯುರಿಟಿಗೆ ಒಂದು ಐವತ್ತು ಲಕ್ಷ. ಈ ತರಹ ಬಹಳ non priority sector ಎನ್ನುತ್ತಾರೆ. ಕವಿಶೈಲಕ್ಕೆ ಎಷ್ಟು ಹಣ ಕೊಡುತ್ತೀರೋ ಕೊಡಿ, ಅಲ್ಲಿ ಲಿಟರರಿ ಆಕ್ಟಿವಿಟೀಸ್ ಆಗಲಿ translation ಆಗಲಿ, ಅದನ್ನು ಅತ್ಯಂತ ಭದ್ರಗೊಳಿಸಿ. ಆದರೆ ಇಲ್ಲಿ ಮಾತ್ರ ವಿದ್ಯಾ ಕ್ಷೇತ್ರದಲ್ಲಿ ಇವೊತ್ತು ರಾಷ್ಟ್ರದ ಒಂದು ಕಾನ್‌ಸೆಪ್ಟ್, ವಿಶ್ವ ಶಾಂತಿಗೋಸ್ಕರ ಸಿಂಬಲೈಸ್ ಆಗಲಿ. ಅಲ್ಲಿ ದಯವಿಟ್ಟು ಕುವೆಂಪುರವರ ಪ್ರತಿಮೆ ಹಾಕಬೇಡಿ. ಅವರು ಎಷ್ಟು ನೊಂದುಕೊಂಡರು ಎಂದು ಹೇಳಿದರೆ ಈ ಸರ್ಕಾರಿ ತಪ್ಪು ತಿಳಿದುಕೊಳ್ಳಬಾರದು. ಅವರಿಗೇನಾದರೂ ಮನಸ್ಸು ಸ್ಥಿಮಿತದಲ್ಲಿದ್ದರೆ, ಸರಿಯಾಗಿ ಅವರ ಮನಸ್ಸು ಚೇತನದಲ್ಲಿದ್ದರೆ ಈ ಕರ್ನಾಟಕ ರತ್ನ ಪ್ರಶಸ್ತಿಯನ್ನು ಖಂಡಿತ ಸ್ವೀಕರಾ ಮಾಡುತ್ತಿರಲಿಲ್ಲ. ಅವರು ಪದ್ಮಶ್ರೀ ಪ್ರಶಸ್ತಿಯನ್ನು ನಿರಾಕರಣೆ ಮಾಡಿದವರು ಮತ್ತು ವಾಪಸ್ಸು ಕಳುಹಿಸಿದರು.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಜೀವರಾಜ್‌ರವರೇ, ಸರ್ಕಾರದ ವತಿಯಿಂದಲೇ ಎಲ್ಲಾ ಆಗಬೇಕು ಎಂದು ಏನೂ ಇಲ್ಲ. ನಾನು ಲಂಡನ್‌ನಲ್ಲಿ ನೋಡಿದ್ದೇನೆ, ಸುಮಾರು 100 ಕಿಲೋಮೀಟರ್ ದೂರದಲ್ಲಿ ಶೇಕ್ಸ್‌ಪಿಯರ್ ಭವನ ಎಂದು ಮಾಡಿದ್ದಾರೆ. ಅಲ್ಲಿಗೆ ಹೋದವರು ಭಕ್ತಿಪೂರ್ವಕವಾಗಿ ದುಡ್ಡು ಹಾಕಿ ಅದನ್ನು ಸ್ವತಃ ಅವರೇ ನಡೆಸುತ್ತಾರೆ. ಸರ್ಕಾರ ಗಿರ್ಕಾರ ಏನೂ ಇಲ್ಲ. ಬಹಳ ಚೆನ್ನಾಗಿ ನಡೆಯುತ್ತಿದೆ. ಇವೊತ್ತು ಜನ ಅಲ್ಲಿ ಹೋಗಿ ಅವರ ಪುಸ್ತಕಗಳು ಇದ್ದರೆ ಕಾಪಿಗಳು ಇದ್ದರೆ ಕೊಂಡುಕೊಂಡು ಬರುತ್ತಾರೆ. ಆ ರೀತಿಯಾಗಿ ಸ್ವಯಂ ಸಂಸ್ಥೆಯಾಗಬೇಕು. ಮಾನ್ಯ ಸದಸ್ಯರು ಹೇಳಿದರೂ ಇವೆಲ್ಲಾ ಸರ್ಕಾರಿ ಸಂಸ್ಥೆಗಳಾಗಬಾರದು. ಅವರು ಎಲ್ಲಾ ಸರ್ಕಾರಗಳಿಗಿಂತ ದೊಡ್ಡವರು. ಅದು ಅವರ ಪ್ರಭಾವದಿಂದ ಅವರ ಹೆಸರಿನಿಂದ ನಡೆಯಬೇಕು. ಆದರೂ ಸರ್ಕಾರ ಅದಕ್ಕೆ ಸ್ವಲ್ಪ ಅನುವು ಮಾಡಿಕೊಡಬೇಕು.

**2.55 ಪಿ.ಎಂ.**

ಅಧ್ಯಕ್ಷರು:- ಸಲಹೆ ಬಹಳ ಉತ್ತಮವಾದುದು. ಆದರೆ ಜೀವರಾಜ ಆಳ್ವ ಅವರು ಮಾತನಾಡುತ್ತಿರುವುದರಿಂದ ಕಾಂಟ್ರವರ್ಸಿ ಇಲ್ಲದಿರುವುದಕ್ಕೆ ಸಾಧ್ಯ.

ಡಾ. ಜೀವರಾಜ ಆಳ್ವ:- ಕಾಂಟ್ರವರ್ಸಿ ಏನೂ ಇಲ್ಲ. ವಿದ್ಯಾ ಕೇಂದ್ರ ಕ್ಷೇತ್ರ ಇದೆ. ಅಲ್ಲಿ ಜಮೀನು ಇದೆ. ಮಧ್ಯವರ್ತಿಗಳು ಯಾರೋ ಒಂದು ಎಜೂಕೇಷನ್ ಎಂದು ಹೇಳಿಕೊಂಡು ಬರಬಹುದು.

ಅಲ್ಲಿ 69 ಎಕರೆ ಜಾಗ ಬಹಳ ಚೆನ್ನಾಗಿದೆ. ಆ ಜಾಗದಲ್ಲಿ 30 ಎಕರೆಯನ್ನು ಈಗಲೇ ಘೋಷಣೆ ಮಾಡಿ; 5–10 ಕೋಟಿ ರೂಪಾಯಿ ಕೊಡಿ. ಏಕೆಂದರೆ, ತಾವು ದೇವೇಗೌಡರು ಇದ್ದೀರಿ, ತಾವು ಇದ್ದೀರಿ. ತಾವು ಒಳ್ಳೆಯ ಕೆಲಸ ಮಾಡಿ, ಒಳ್ಳೆಯ ಖ್ಯಾತಿ ಪಡೆದುಕೊಳ್ಳಿ ಎಂದು ಹಾರೈಸಿ, ಮತ್ತೊಮ್ಮೆ ಮಿತ್ರರಾದ ತಿಮ್ಮೇಗೌಡರು ಮತ್ತು ಕೃಷ್ಣಮೂರ್ತಿಯವರು ಇವರು ಬಹಳ ಹಿಂದುಳಿದ ಜನಾಂಗದ ಒಬ್ಬ ಶ್ರೇಷ್ಠ ವ್ಯಕ್ತಿ ಮತ್ತಿ ಒಂದು ಹೊಸ ಆಯಾಮ ಕೊಟ್ಟವರು; ಇಂಥ ವ್ಯಕ್ತಿ ಇವತ್ತು ನಮ್ಮ ಜೊತೆ ಇಲ್ಲ. ಅವರೆಲ್ಲರಿಗೆ ನಾನು ಸಂತಾಪ ಸೂಚಿಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):– ಸನ್ಮಾನ್ಯ ಅಧ್ಯಕ್ಷರೇ, ಈ ನಾಡಿಗೆ ಈ ನುಡಿಗೆ ಬಹಳ ದೊಡ್ಡ ಕೊಡುಗೆಯನ್ನು ನೀಡಿರತಕ್ಕ ಮತ್ತು ಇಂದು ನಮ್ಮ ಜೊತೆಯಲ್ಲಿ ಇಲ್ಲದಿರತಕ್ಕ ಅನೇಕ ಗಣ್ಯರಿಗೆ ಶ್ರದ್ಧಾಂಜಲಿ ಸಮರ್ಪಣೆ ಮಾಡತಕ್ಕ ಈ ಒಂದು ನಿರ್ಣಯವನ್ನು ತಾವು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಏನು ಈ ಸಭೆಯಲ್ಲಿ ಮಂಡನೆ ಮಾಡಿದ್ದೀರಿ ಅದಕ್ಕೆ ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ವ್ಯಕ್ತ ಮಾಡುತ್ತಾ, ಸಾರ್ವಜನಿಕ ಜೀವನದಲ್ಲಿ ಮೌಲ್ಯವನ್ನು ತಂದುಕೊಟ್ಟಿರತಕ್ಕ ಪೂಜ್ಯ ಶಾಂತವೇರಿ ಗೋಪಾಲಗೌಡರ, ಕಡಿದಾಳ್ ಮಂಜಪ್ಪನವರ, ಸಾಹಿತ್ಯ ಕ್ಷೇತ್ರದಲ್ಲಿ ಬಹು ದೊಡ್ಡ ಸೇವೆ ಸಲ್ಲಿಸಿ ಈ ಸದನದಲ್ಲಿ ನಾವೆಲ್ಲ ನೆನಪು ಮಾಡಿಕೊಳ್ಳತಕ್ಕ ಕುವೆಂಪು, ಡಾ. ಯು.ಆರ್. ಅನಂತಮೂರ್ತಿ, ಹಾಮ ನಾಯಕ, ಪೂರ್ಣಚಂದ್ರ ತೇಜಸ್ವಿ, ಕಮಗಲ್ ನರಸಿಂಹ ಶಾಸ್ತ್ರಿಗಳು ಮತ್ತು ನ್ಯಾಯಾಂಗದಲ್ಲಿ ದೊಡ್ಡ ಹೆಸರು ಕೀರ್ತಿ ತಂದಿರತಕ್ಕ ಎನ್. ಡಿ. ವೆಂಕಟೇಶ್ ಮತ್ತು ರಾಮಾಜೋಯಿಸ್ ಇವರಿಗೆ ಜನ್ಮ ನೀಡಿರತಕ್ಕ ಪವಿತ್ರ ತೀರ್ಥಹಳ್ಳಿ ಕ್ಷೇತ್ರವನ್ನು ಪ್ರತಿನಿಧಿಸಿ ನಾನು ಈ ಸಭೆಗೆ ಬರುತ್ತಿದ್ದೇನೆಂದು ನನ್ನನ್ನು ನಾನು ಪರಿಚಯ ಮಾಡಿಕೊಳ್ಳಲಿಕ್ಕೆ ಅತ್ಯಂತ ಹೆಮ್ಮೆಪಟ್ಟುಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಅಧ್ಯಕ್ಷರೆ, ಯುಗದ ಕವಿ, ಜಗದ ಕವಿ, ಶ್ರೀ ರಾಮಾಯಣ ದರ್ಶನಂಸಿಂದ ಕೈಮುಗಿದ ಕವಿ ಎಂದು ಕುವೆಂಪು ಬಗ್ಗೆ ದ.ರಾ ಬೇಂದ್ರೆಯವರು ಹೇಳಿದ್ದಾರೆ. ಕೆಲವರಿಗೆ ಪ್ರಶಸ್ತಿಗಳಿಂದ ಗೌರವ ಸಂದರೆ ಕುವೆಂಪು ಅವರಿಗೆ ಸಂದ ಪ್ರಶಸ್ತಿಗಳಿಗೆ ಇವತ್ತು ಗೌರವ ಸಂದಿದೆ. ವಿಶ್ವ ಮಾನವ ಸಂದೇಶವನ್ನು ಸಾರಿದ ಯುಗದ ಕವಿಯ ಕೃತಿಗಳನ್ನು ಸರ್ಕಾರವೇ ಮುದ್ರಣ ಮಾಡಿ ಸಾಂಕೇತಿಕ ಬೆಲೆಗೆ ಓದುಗರಿಗೆ ಮಾರಾಟ ಮಾಡಿದರೆ ಅವರ ಸೇವೆ ಮತ್ತು ಅವರ ಶ್ರಮ ಸಾರ್ಥಕವಾಗುತ್ತದೆ. ಮಲೆನಾಡಿನ ವಿಶಿಷ್ಟವಾಗಿರತಕ್ಕ ಜನಜೀವನ ನದಿ, ಕೊಳ್ಳಗಳು, ಗುಡ್ಡಬೆಟ್ಟಗಳು, ಸುಂದರ ಕಾನನ, ಪಶು ಪಕ್ಷಿಗಳು ಅವರ ಕೃತಿಯಿಂದ ಬಹಳ ದೊಡ್ಡ ಅರ್ಥವನ್ನು ಪಡೆದುಕೊಂಡಿವೆ. ಮಲೆನಾಡಿನ ಪ್ರಕೃತಿಯ ಸೊಬಗನ್ನು ಸವಿಯತಕ್ಕ ಒಂದು ಮಹತ್ವದ ಕೆಲಸ ಸರ್ಕಾರದ ಕಡೆಯಿಂದ ಆಗುತ್ತದೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈಗಾಗಲೇ ಅನೇಕ ಗಣ್ಯರು, ಹಿರಿಯರು ಈ ಸಭೆಯಲ್ಲಿ ಮಾತನಾಡಿದ್ದಾರೆ. ಕುವೆಂಪು ಅವರ ಕೃತಿಯನ್ನು ಬಹುಶಃ ನಾನು ವರ್ಣನೆ ಮಾಡುವುದಕ್ಕೆ ಹೋದರೆ ಸಮುದ್ರದ ಆಳವನ್ನು ಅಗಲವನ್ನು ವರ್ಣನೆ ಮಾಡಿದ ಹಾಗೆ ಆಗುತ್ತದೆ. ಅಲ್ಲಿ ಕುವೆಂಪು ಅವರ ಹೆಸರಿನಲ್ಲಿ ಒಂದು ಪ್ರತಿಷ್ಠಾನವನ್ನು ಟ್ರಸ್ಟ್ ಎಂದು ಸ್ಥಾಪನೆ ಮಾಡಿದ್ದೀರಿ. ಪ್ರತಿಷ್ಠಾನವನ್ನು ಸ್ಥಾಪನೆ ಮಾಡಿರತಕ್ಕ ಇಂದಿನ ಸರ್ಕಾರಕ್ಕೆ ನನ್ನ ಒಂದು ವಿನಂತಿ ಇದೆ. ಆ ಪ್ರತಿಷ್ಠಾನದಲ್ಲಿ ಯಾರಿರಬೇಕು, ಎಂಥವರು ಇರಬೇಕೆಂಬುದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಯಾರು ಕುವೆಂಪು ಅವರಿಗೆ ಹತ್ತಿರ ಇದ್ದಾರೆ, ಅವರ ಸಾಹಿತ್ಯ ಮತ್ತು ಬದುಕನ್ನು ಅರ್ಥ ಮಾಡಿಕೊಂಡಿದ್ದಾರೆ ಅಂಥವರು ಇರಬೇಕು. ಸರ್ಕಾರ ಅಪಾರ ಹಣಕೊಡುವಾಗ ಆ ಕ್ಷೇತ್ರದ ಒಬ್ಬ ಶಾಸಕರು ಆ ಟ್ರಸ್ಟ್‌ನಲ್ಲಿ ಇರಬೇಕಾಗುತ್ತದೆ. ಸಾಹಿತ್ಯದ ದಿಗ್ಗಜಗಳು ಅಲ್ಲಿ ಇರಬೇಕಾಗುತ್ತದೆ. ಇವತ್ತು ಕುಪ್ಪಳ್ಳಿ ಯಾವುದೋ ಒಂದು ಕೇಂದ್ರವನ್ನು ಮಾಡತಕ್ಕದ್ದು, ಅಂದರೆ ಅಲ್ಲಿ ಯಾವುದೋ ಕಟ್ಟಡಗಳನ್ನು ಕಟ್ಟಿದರೆ ನಿಜವಾಗಿಯೂ ಅವರ ಆತ್ಮಕ್ಕೆ ಸಂತೋಷವಾಗುವುದಿಲ್ಲ. ಅವರು

ಯಾವುದನ್ನು ಆರಾಧಿಸುತ್ತಿದ್ದರೋ ಅಂಥ ಪ್ರಕೃತಿಯನ್ನು, ಮಲೆನಾಡಿನ ಸೌಂದರ್ಯವನ್ನು ವೃದ್ಧಿ ಮಾಡಬೇಕಾಗುತ್ತದೆ. ಮೂರು ಸಾವಿರ ಎಕರೆ......

ಅಧ್ಯಕ್ಷರು:– ನಿಮ್ಮ ಭಾಷಣ ಸಂತಾಪಕ್ಕೆ ಸೀಮಿತವಾಗಿರಲಿ. ಅದನ್ನೆಲ್ಲಾ ಬೇರೆ ಸಂದರ್ಭದಲ್ಲಿ ಹೇಳಬಹುದು. ಅನೇಕ ಸಂದರ್ಭದಲ್ಲಿ ಅಕಾಶ ಸಿಗುತ್ತದೆ. ಅದನ್ನೆಲ್ಲಾ ಸಲಹೆ ಕೊಡಬಹುದು. ನೀವು ಹೊಸಬರಿದ್ದೀರಿ. ನಿಮ್ಮ ಉತ್ಸಾಹ ನನಗೆ ಅರ್ಥವಾಗುತ್ತದೆ. ಈ ಸಲಹೆಗಳನ್ನೆಲ್ಲಾ ಕೊಡುವುದಕ್ಕೆ ನಿಮಗೆ ಬೇರೆ ಅವಕಾಶಗಳಿವೆ. ಈಗ ಸಂತಾಪಕ್ಕೆ ಸೀಮಿತವಾಗಿರಲಿ.

ಶ್ರೀ ಅರಗ ಜ್ಞಾನೇಂದ್ರ:– ಇದೇ ಸಂದರ್ಭದಲ್ಲಿ ಇದಕ್ಕೆ ಅನ್ವಯಿಸುವ ಹಾಗೆ ಒಂದೆರಡು ಸಲಹೆಗಳನ್ನು ಹೇಳಿದೆ. ಕುಪ್ಪಳ್ಳಿಯಲ್ಲಿ ಮೂರು ಸಾವಿರ ಎಕರೆ ಅರಣ್ಯವನ್ನು ಕುವೆಂಪು ಅವರ ಹೆಸರಿನಲ್ಲಿ ಅಭಿವೃದ್ಧಿ ಮಾಡತಕ್ಕ ಕೆಲಸವನ್ನು ಅರಣ್ಯ ಇಲಾಖೆ ನೆರವೇರಿಸುತ್ತಿದೆ. ಮೊನ್ನೆ ತಾನೇ ಅರಣ್ಯ ಅಧಿಕಾರಿಗಳನ್ನು ಕೇಳಿದೆ. ಆ ಮೂರು ಸಾವಿರರು ಎಕರೆ ಅರಣ್ಯಕ್ಕೆ ಬೇಲಿ ಹಾಕುವುದಕ್ಕೆ ಅವರ ಹತ್ತಿರ ಇವತ್ತು ಹಣ ಇಲ್ಲ. ಸರ್ಕಾರ ಇದನ್ನು ಮನಗಂಡು ದಯಮಾಡಿ ಇದನ್ನು ಸರಿಪಡಿಸಬೇಕು. ಯೋಗ್ಯವಾಗಿರತಕ್ಕ, ಅವರ ಒಂದು ಶ್ರಮಕ್ಕೆ ಬೆಲೆ ತರತಕ್ಕ, ಕೀರ್ತಿ ತರತಕ್ಕ ಕೆಲಸ ನಿಮ್ಮ ಕಡೆಯಿಂದ ಆಗಬೇಕಾಗಿದೆ. ಈ ಬಗ್ಗೆ ಸರ್ಕಾರ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ (ಬಾಗೇಪಲ್ಲಿ):– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂಥ ಸಂತಾಪಸೂಚಕ ನಿರ್ಣಯಕ್ಕೆ ಸಂಪೂರ್ಣವಾಗಿ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಅಗಲಿದಂಥ ಗಣ್ಯರಲ್ಲಿ ಮುಖ್ಯವಾಗಿ ರಾಷ್ಟ್ರಕವಿ ಕುವೆಂಪು ಈ ಶತಮಾನ ಕಂಡಂಥ ಅತ್ಯಂತ ಪ್ರಗತಿಪರ ಸಾಹಿತಿ. ಜಗತ್ತಿನ ಅತ್ಯಂತ ಪ್ರಗತಿಪರ ಸಾಹಿತಿಗಳಲ್ಲಿ ಕುವೆಂಪು ಕೂಡ ಒಬ್ಬರು. ರಾಕ್, ಟಾಲ್‌ಸ್ಟಾಯ್ ಅವರ ಸಾಲಿಗೆ ಸೇರತಕ್ಕ ಮಹಾನ್ ಸಾಹಿತಿ. ಕುವೆಂಪು ಅವರು ಸಾಹಿತಿಯಾಗಿ ಮೌಢ್ಯದ ವಿರುದ್ಧ, ಅವೈಜ್ಞಾನಿಕ ದೃಷ್ಟಿ ವಿರುದ್ಧ ಬಹಳಷ್ಟು ಸಾಹಿತ್ಯದಲ್ಲಿ ನುಡಿದಿದ್ದಾರೆ. ಕುವೆಂಪು ಅವರನ್ನು ಹಲವಾರು ಜನ ಹಲವಾರು ದೃಷ್ಟಿಯಲ್ಲಿ ನೋಡುತ್ತಾರೆ. ಅದರಲ್ಲಿ ಒಂದು ಮುಖ್ಯವಾದ ದೃಷ್ಟಿ, ಕುವೆಂಪು ಎಲ್ಲದಕ್ಕಿಂತ ಮಿಗಿಲಾಗಿ ಪ್ರಗತಿಪರ ಚಿಂತಕರು ಮತ್ತು ಸಾಹಿತಿ ಎಂಬುದು. ಅವರು ಒಂದು ಕಡೆ ಹೇಳಿದರು "ವೇದ ಎಂಬುದು ಓದಿನ ಸುದ್ದಿ, ಶಾಸ್ತ್ರ ಎಂಬುದು ಸಂತೆ ಮಾತು, ಪುರಾಣ ಎಂಬುದು ಪುಣ್ಯರ ಗೋಷ್ಠಿ" ಎಂದು. ಅದು ಅವರ ವೈಜ್ಞಾನಿಕ ದೃಷ್ಟಿಯನ್ನು ತೋರಿಸುತ್ತದೆ. ಹಾಗೆಯೇ ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕರ್ನಾಟಕದಲ್ಲಿ ಮುಖ್ಯವಾಗಿ ಭೂ ಸಂಬಂಧಗಳ ಬದಲಾವಣೆ, ಮುಖ್ಯವಾಗಿ ಊಳಿಗಮಾನ್ಯ ಪದ್ಧತಿಯಿಂದ ಬಂಡವಾಳಶಾಹಿಯ ಪರಿವರ್ತನೆ ಆಗತಕ್ಕ ಸಂದರ್ಭದಲ್ಲಿ ಭೂ ಸಂಬಂಧಗಳು ಹೇಗೆ ಬದಲಾವಣೆಯಾಗುತ್ತದೆ ಎಂಬುದನ್ನು ಸಾಹಿತ್ಯಕವಾಗಿ ಬಹಳ ಸೂಕ್ಷ್ಮವಾಗಿ ಎತ್ತಿತೋರಿಸಿದ ಪ್ರಪ್ರಥಮ ಪ್ರಗತಿಪರ ಚಿಂತಕ ಎಂಬುದು ಸಾಬೀತಾಗಿದೆ. ಅದಕ್ಕಿಂತ ಮುಖ್ಯವಾಗಿ ಅವರ ವಿಶ್ವಮಾನವ ಸಂದೇಶ. ಅವತ್ತು ನಾವೆಲ್ಲಾ ದೇಶದ ಸಮಗ್ರತೆ ಬಗ್ಗೆ, ಐಕ್ಯತೆ ಬಗ್ಗೆ ಮಾತನಾಡತಕ್ಕ ಜನ ಆ ವಿಶ್ವಮಾನವ ಸಂದೇಶದ ಹಿಂದೆ ಇರತಕ್ಕ ನಿಜವಾದ ಉದ್ದೇಶ ಏನು, ಅದು ಯಾವ ಸಂದರ್ಭದಲ್ಲಿ ಪುಟ್ಟಪ್ಪನವರು ಅದನ್ನು ಹೇಳಿದರು ಎಂಬುದು ಬಹಳ ಮುಖ್ಯವಾದ ಅಂಶ. ಇಡೀ ದೇಶದ ಸಮಗ್ರತೆಗೆ ಐಕ್ಯತೆಗೆ ಸಂಸ್ಕೃತಿಗೆ ಗಂಭೀರ ಸವಾಲು ಒದಗಿಬಂದಂಥ ಸಂದರ್ಭದಲ್ಲಿ, ದೇಶ ಛಿದ್ರಛಿದ್ರ ಆಗತಕ್ಕ ಸಂದರ್ಭದಲ್ಲಿ ಮತ್ತು ಇಡೀ ಜಗತ್ತಿನಲ್ಲಿ ಆಗುತ್ತಾ ಇದ್ದಂಥ ಬೆಳವಣಿಗೆ ಅವರ ಮನಸ್ಸಿನ ಮೇಲೆ ಪರಿಣಾಮ ಬೀರಿ ಈ ಎಲ್ಲಾ ಸಂಕುಚಿತ, ರಾಷ್ಟ್ರೀಯ ಮತಾಂಧತೆಯು, ಭಾಷೆಯು, ಮತದ ಎಲ್ಲಾ ಮೌಢ್ಯಗಳನ್ನು ಬಿಟ್ಟು ಈ ವಿಶ್ವಮಾನವ ದೃಷ್ಟಿಯಲ್ಲಿ ಆಲೋಚನೆ ಮಾಡಿದಾಗ ಮಾತ್ರ ಜಗತ್ತಿನಲ್ಲಿ ಶಾಂತಿ ಬರುತ್ತದೆ ಎಂದು ಹೇಳತಕ್ಕ ಉದ್ದೇಶದಿಂದ ಅವರು

ವಿಶ್ವಮಾನವ ಸಂದೇಶವನ್ನು ಕೊಟ್ಟಿದ್ದಾರೆ. ಆದರೆ ದುರಾದೃಷ್ಟ ವಿಶ್ವಮಾನವ ಸಂದೇಶವನ್ನು ಕೊಟ್ಟಂಥ ಕವಿ ಹುಟ್ಟಿದ ಈ ನಾಡಿನಲ್ಲಿ ಇವತ್ತು ನಮ್ಮ ದೇಶದ ಪರಿಸ್ಥಿತಿಯನ್ನು ನೋಡಿದಾಗ ಅಪಾಯಕಾರಿಯಾದ ಸ್ಥಿತಿ ಇದೆ. ಈ ದೇಶ ದೇಶವಾಗಿ ಉಳಿಯುತಕ್ಕ ಪರಿಸ್ಥಿತಿ ಬಹಳ ಕಷ್ಟಕರವಾಗಿದೆ. ನಾವು ನಿಜವಾಗಿ ಕುವೆಂಪು ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವಂತಾದರೆ ನಾವು ಮತಾಂಧತೆ, ಭಾಷಾಂಧತೆ, ಧರ್ಮಾಂಧತೆ ಬಿಟ್ಟು, ನಾವು ಇಡೀ ಮಾನವರು ಎನ್ನತಕ್ಕ ಮಾನವೀಯ ದೃಷ್ಟಿಯಲ್ಲಿ ಅವರನ್ನು ನೋಡಿದಾಗ ಮಾತ್ರ ಅವರಿಗೆ ನಿಜವಾದ ಶ್ರದ್ಧಾಂಜಲಿಯನ್ನು ಅರ್ಪಿಸಿದಂತಾಗುತ್ತದೆ.

ಅದೇ ರೀತಿಯಲ್ಲಿ ದಲಿತ ಮತ್ತು ಶೋಷಿತ ಜನರ ಬಗ್ಗೆ ಬಹಳಷ್ಟು ಅಭ್ಯಾಸ ಮಾಡಿದಂತಹ ಪ್ರಪ್ರಥಮ ಕನ್ನಡ ಕವಿ. 1973ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಒಂದು ಸಭೆಯಲ್ಲಿ ಮಾತನಾಡುತ್ತಿದ್ದಾಗ ನಾನು ಇನ್ನು ಹುಡುಗ ಪಿಯುಸಿ ಓದುತ್ತಿದ್ದೆ. ಸಭಿಕರಲ್ಲಿ ಒಬ್ಬರು ಒಂದು ಪ್ರಶ್ನೆಯನ್ನು ಕೇಳಿದರು. ಬ್ರಾಹ್ಮಣರ ಮನೆಯಲ್ಲಿ ಹುಟ್ಟಿದ ಮಗು ಬಹಳ ಬುದ್ಧಿವಂತ ಮಗುವಾಗುತ್ತದೆ, ಶೂದ್ರರ ಮನೆಯಲ್ಲಿ ಹುಟ್ಟಿದ ಮಗು ಬಹಳ ದಡ್ಡನಾಗುತ್ತಾನೆ. ಇದಕ್ಕೆ ಏನು ಕಾರಣವೆಂದು ಕುವೆಂಪುರವರನ್ನು ಕೇಳಿದಾಗ, ಕುವೆಂಪುರವರು ಅವರದೇ ಆದ ಶೈಲಿಯಲ್ಲಿ ಸರಳವಾದ ಉತ್ತರವನ್ನು ಕೊಟ್ಟರು. ಶೂದ್ರರ ಮನೆಯಲ್ಲಿ ಮಗು ಹುಟ್ಟಿದರೆ ಬೆಳಿಗ್ಗೆ ಎದ್ದ ತಕ್ಷಣ ಸಗಣಿ ಎತ್ತಿಹಾಕು, ದನ ಕಟ್ಟಾಕು ದನಕ್ಕೆ ಹುಲ್ಲು ತೆಗೆದುಕೊಂಡು ಬಾ ಎಂದು ಹೇಳುತ್ತಾರೆ. ಬ್ರಾಹ್ಮಣರ ಮನೆಯಲ್ಲಿ ಹುಟ್ಟಿದ ಮಗುವಿಗೆ ಬೆಳಿಗ್ಗೆ ಎದ್ದ ತಕ್ಷಣ ಸ್ನಾನ ಮಾಡು ಸಂಧ್ಯಾವಂದನೆ ಮಾಡು, ಮಂತ್ರ ಹೇಳು ಎಂದು ಹೇಳುತ್ತಾರೆ. ಇದೇ ವ್ಯತ್ಯಾಸವೆಂದು ಹೇಳಿದರು. ಅಂತಹ ಒಂದು ದೊಡ್ಡ ಸಾಹಿತಿ ಸಮಾಜದಲ್ಲಿರತಕ್ಕ ಸಾಮಾಜಿಕ ಸಮಸ್ಯೆಗಳನ್ನು ಅಭ್ಯಾಸ ಮಾಡಿ ಅವರೇ ಆದ ಶೈಲಿಯಲ್ಲಿ ಜನರಿಗೆ ತಟ್ಟತಕ್ಕ ರೀತಿಯಲ್ಲಿ ಹೇಳುತ್ತಿದ್ದುದ್ದು ಬಹಳ ಮುಖ್ಯವಾದ ಅಂಶ. ಸದನದಲ್ಲಿ ಹಲವಾರು ಸದಸ್ಯರು ಹಿರಿಯರು ಮಾತನಾಡಿ ಹೇಳಿ ಸಲಹೆಗಳನ್ನು ಕೊಟ್ಟಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಕುವೆಂಪುರವರಿಗೆ ನಿಜವಾದ ಶ್ರದ್ಧಾಂಜಲಿಯನ್ನು ಅರ್ಪಿಸುವುದು ಅಂದರೆ ಪ್ರಗತಿಪರ ಸಾಹಿತ್ಯವನ್ನು ಸಂಶೋಧನೆ ಮಾಡತಕ್ಕ ಅದರಲ್ಲೂ ಮುಖ್ಯವಾಗಿ ದಲಿತ ಮತ್ತು ಶೋಷಿತ ಜನಾಂಗಕ್ಕೆ ಸಂಬಂಧಪಟ್ಟ ಜನಪರವಾದಂಥ ಸಾಹಿತ್ಯ ಸಂಶೋಧನಾ ಕೇಂದ್ರವನ್ನು ಕುವೆಂಪುರವರ ಹೆಸರಿನಲ್ಲಿ ಸ್ಥಾಪನೆ ಮಾಡಬೇಕು.

ಹಲವಾರು ಗಣ್ಯರು ತೀರಿಕೊಂಡಿದ್ದಾರೆ. ಸಿ.ಜಿ.ಕೆ. ರೆಡ್ಡಿಯವರು ಸಮಾಜವಾದದ ಹಿನ್ನೆಲೆಯಲ್ಲಿ ಬಂದವರು, ಧೀಮಂತ ಪತ್ರಕರ್ತರು ಆಗಿದ್ದರು. 1975ನೇ ಇಸವಿಯಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯನ್ನು ತಂದಾಗ ಅದರ ವಿರುದ್ಧ ಬಂಡಾಯವೆದ್ದು ನಮ್ಮಂತಹ ಹುಡುಗರಿಗೆ ಧೈರ್ಯ ಹೇಳಿ ಆ ಹೋರಾಟದಲ್ಲಿ ಜೈಲುವಾಸವನ್ನು ಅನುಭವಿಸಿದಂತಹ ಪ್ರಜಾಪ್ರಭುತ್ವವಾದಿ ಮತ್ತು ಪತ್ರಕರ್ತರು. ಅವರಿಗೂ ಕೂಡ ಶ್ರದ್ಧಾಂಜಲಿ ಅರ್ಪಿಸುವುದು ಅಂದರೆ ಅವರು ಯಾವ ಮೌಲ್ಯಕ್ಕೋಸ್ಕರ ಹೋರಾಟ ಮಾಡಿದ್ದರೋ ಆ ಮೌಲ್ಯಗಳನ್ನು ಎತ್ತಿಹಿಡಿಯುವಂತಹದ್ದು ಬಹಳ ಮುಖ್ಯವಾದುದು. ಹಾಗೆಯೇ ಡಾ. ಹೆಚ್.ಎಲ್. ತಿಮ್ಮೇಗೌಡರು ವಿದ್ಯಾ ಸಂಸ್ಥೆಗಳನ್ನು ಕಟ್ಟಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಹವನ್ನು ಕೊಟ್ಟಂತಹ ಸ್ವಾತಂತ್ರ್ಯ ಹೋರಾಟಗಾರರು. ಅವರಿಗೂ ಕೂಡ ಶ್ರದ್ಧಾಂಜಲಿಯನ್ನು ಅರ್ಪಿಸಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ತಂದಿರತಕ್ಕ ಸಂತಾಪಸೂಚಕ ನಿರ್ಣಯವನ್ನು ಬೆಂಬಲಿಸಿ ಎರಡು ಮಾತುಗಳನ್ನು ಹೇಳುತ್ತೇನೆ. ಅನೇಕ ಶಾಸಕರು ರಾಜಕೀಯ ಕ್ಷೇತ್ರದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಇವತ್ತು ನಮ್ಮನ್ನು ಅಗಲಿದ್ದಾರೆ.

ಅನೇಕ ಹಿರಿಯ ಶಾಸಕರು ಅವರುಗಳ ಬಗ್ಗೆ ಅಭಿಮಾನದ ಮಾತುಗಳನ್ನು ಆಡಿದ್ದಾರೆ. ರಾಷ್ಟ್ರಕವಿ ಕುವೆಂಪುರವರು ಡಾ. ಹೆಚ್.ಎಲ್. ತಿಮ್ಮೇಗೌಡರು, ಬಿ.ಎ. ಉಪ್ಪಿನ್ ಕೃಷ್ಣಮೂರ್ತಿಯವರು, ಲಕ್ಷ್ಮಮ್ಮ ನಾಗಯ್ಯರೆಡ್ಡಿಯವರು, ಚಂದ್ರಶೇಖರ ಮಟ್ಟಿಯವರು, ಸಿ.ಜಿ.ಕೆ. ರೆಡ್ಡಿಯವರು ಇವರುಗಳೆಲ್ಲರೂ ಅವರವರ ಕ್ಷೇತ್ರಗಳಲ್ಲಿ ಅಪಾರವಾದ ಸೇವೆ ಸಲ್ಲಿಸಿ ನಮ್ಮನ್ನು ಅಗಲಿದ್ದಾರೆ. ವಿಶೇಷವಾಗಿ ಡಾ. ಹೆಚ್.ಎಲ್. ತಿಮ್ಮೇಗೌಡರು,ಕೃಷ್ಣಮೂರ್ತಿ, ಚಂದ್ರಶೇಖರ ಮಟ್ಟಿ ಇವರುಗಳ ಬಗ್ಗೆ ಮತ್ತು ರಾಷ್ಟ್ರಕವಿ ಕುವೆಂಪುರವರ ಬಗ್ಗೆ ಅನೇಕ ವಿಚಾರಗಳನ್ನು ಮಾತನಾಡಿದಂತಹ ಶಾಸಕ ಮಿತ್ರರು ತಿಳಿಸಿದ್ದಾರೆ. ನಾನು ಕೂಡ ಅದಕ್ಕೆ ಬೆಂಬಲವನ್ನು ವ್ಯಕ್ತಪಡಿಸಿ ಸಾರಸ್ವತ ಲೋಕದಲ್ಲಿ ಅಪಾರವಾದ ಗಣನೀಯವಾದ ಸೇವೆ ಸಲ್ಲಿಸಿರತಕ್ಕ ಕುವೆಂಪುರವರ ಬಗ್ಗೆ ನಾನು ಒಂದು ಮಾತು ಹೇಳುವುದಾದರೆ ಅವರು ನಮ್ಮ ಕನ್ನಡನಾಡಿನ ಸಾರಸ್ವತ ಲೋಕದ ಕೀರ್ತಿಯನ್ನು ವಿಶ್ವದಮಟ್ಟಕ್ಕೆ ಒಯ್ದವರಲ್ಲಿ ಅಗ್ರಗಣ್ಯರು ಸೇವೆಸಲ್ಲಿಸಿ ಅವರ ಒಂದು ಅಪಾರವಾಗಿರತಕ್ಕ ಸಾಹಿತ್ಯ ಸೇವೆ ಸಲ್ಲಿಸಿದ್ದನ್ನು ನೋಡಿದರೆ ಪ್ರತಿಯೊಂದು ಕೃತಿಗಳನ್ನು ವಿಮರ್ಶಾತ್ಮಕವಾಗಿ ನೋಡಿದಾಗ ನಮ್ಮ ನಾಡಿನ ಮೂಢನಂಬಿಕೆಗಳ ಬಗ್ಗೆ ಸ್ಪಷ್ಟವಾದ ನಿಲುವುಗಳನ್ನು ವ್ಯಕ್ತಪಡಿಸಿ ಅಂಧಕಾರದಲ್ಲಿರತಕ್ಕ ಜನಾಂಗವನ್ನು ಮೇಲೆತ್ತತಕ್ಕ ವಿಷಯದಲ್ಲಿ ತಿಳಿ ಹೇಳಿದ್ದಾರೆ. ಈ ನಾಡಿಗೆ ಬಹುದೊಡ್ಡ ಕೊಡುಗೆಯನ್ನು ಮಾಡಿ ಈವೊಂದು ಸಾರಸ್ವತ ಲೋಕದ ಮುಖಾಂತರ ಎಲ್ಲರೂ ನಾಡಿನಲ್ಲಿ ಜಾಗೃತರಾಗಬೇಕೆಂದು ಆ ಭಾವನೆಯಿಂದ ಅನೇಕ ಕೃತಿಗಳನ್ನು ರಚಿಸಿ ನಾಡಿಗೆ ಒಪ್ಪಿಸಿ ಹೋಗಿದ್ದಾರೆ. ಅವರ ವಿಚಾರಧಾರೆಗಳು ಕಾರ್ಯರೂಪದಲ್ಲಿ ಬರಬೇಕಾದರೆ ಅವರಿಗೆ ನಿಜವಾದ ಶ್ರದ್ಧಾಂಜಲಿಯನ್ನು ಅರ್ಪಿಸತಕ್ಕ ವಿಚಾರ ನಿಮ್ಮಲ್ಲಿ ಇದ್ದರೆ ಅವರ ಅನೇಕ ಕೃತಿಗಳನ್ನು ಜನಸಾಮಾನ್ಯರಿಗೆ ಮುಟ್ಟುವಂತಹ ಒಂದು ಕೆಲಸ ಮಾಡಿದರೆ ಸಾರ್ಥಕವಾದೀತು. ಬಹುಶಃ ಅವರ ಕೃತಿಗಳು ಸೀಮಿತವಾದ ವರ್ಗಕ್ಕೆ ಹೆಚ್ಚು ಓದಿದವರಿಗೆ ತಿಳಿದಿರತಕ್ಕ ಕೃತಿಗಳು. ಆದರೆ ಜನಸಾಮಾನ್ಯರು ಕೂಡ ಅವುಗಳನ್ನು ಓದಿ ತಿಳಿದುಕೊಂಡರೆ ಆ ಕೃತಿಗಳಿಂದ ಹೆಚ್ಚು ಮೂಡುವುದರಲ್ಲಿ ಸಂದೇಹವಿಲ್ಲವೆಂದು ಹೇಳಿ, ನಮ್ಮನ್ನು ಅಗಲಿರತಕ್ಕ ಎಲ್ಲಾ ಮಹನೀಯರಿಗೂ ನಾನು ಮತ್ತೊಮ್ಮೆ ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ):– ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು ಮಂಡಿಸಿದಂತಹ ನಿರ್ಣಯವನ್ನು ನಾನು ಅನುಮೋದಿಸುತ್ತಾ ಕೆಲವು ಮಾತುಗಳನ್ನು ಕುವೆಂಪುರವರ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಸಹ್ಯಾದ್ರಿಯ ನದಿ ವನಗಳ ಮಧ್ಯೆ ಹುಟ್ಟಿದ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು ಕುವೆಂಪು ಎಂಬ ನಾಮಾಂಕಿತ ಹೆಸರಿನ ಮೂಲಕ ಮೇರುಪರ್ವತದಂತೆ ಏರಿ ಬಾಳಿ ಬದುಕಿ ರಸಋಷಿಯಾದರು. ಅವರು ಪ್ರಕೃತಿಯ ಒಲವನ್ನು ಕೆಲವು ದಶಕಗಳ ಹಿಂದೆಯೇ ತಮ್ಮ ಕೃತಿಗಳ ಮೂಲಕ ತೋರಿಸಿದ್ದಾರೆ. ಇತ್ತೀಚೆಗೆ ಶಿವರಾಮಕಾರಂತರು ಪರಿಸರ ವಾದಿಗಳು ಕೂಡ ಪ್ರಕೃತಿಯ ವಿಷಯದಲ್ಲಿ ಮಾತನಾಡುತ್ತಿದ್ದಾರೆ. ಆದರೆ ಕುವೆಂಪುರವರು ಕೆಲವು ದಶಕಗಳ ಹಿಂದೆ ಅವರು ಇಟ್ಟಿದ್ದಂತಹ ಪ್ರಕೃತಿಯ ಪ್ರೇಮ ಪರಿಸರ ಪ್ರೇಮವನ್ನು ಎತ್ತಿ ತೋರಿಸಿದ್ದಾರೆ. ಅವರು ಇನ್ನು ಅನೇಕ ಕಾವ್ಯಗಳನ್ನು ಬರೆದಿದ್ದಾರೆ. ''ಎಲೆ ಬ್ರಹ್ಮ ವನಗಳಿರಾ ನಿಮ್ಮ ಸೌಂದರ್ಯದಲ್ಲಿ ಪರಮಾತ್ಮನನ್ನು ಕಾಣದವನಿಗೆ ಏಕೆ ಎರಡು ಕಣ್ಣುಗಳು? ಅವರು ಬರೆದಂತಹ ರೀತಿಯಲ್ಲಿ ಬರೆದ ಕವಿಗಳು ಬಹಳ ವಿರಳವೆಂದು ವಿಮರ್ಶಕರ ಅಭಿಪ್ರಾಯವುಂಟು. ಅವರೇ ಹೇಳಿರುವಂತೆ ಅವರೇ ಪ್ರಕೃತಿಯ ಜೊತೆಯಲ್ಲಿ ಸ್ಪಂದಿಸುವುದನ್ನು ನಾವು ಕಾಣುತ್ತಿದ್ದೇವೆ. ಕವಿ ಯಾವತ್ತೂ ಕೂಡ, ರವಿ ಕಾಣದ್ದನ್ನು ಕವಿ ಕಾಣುತ್ತಾನೆ. ಹೇಗೆ ಕಾಣುತ್ತಾನೆಂದರೆ ಕುವೆಂಪುರವರು ದೇವರನ್ನು ರುಜು ಮಾಡಿಸುತ್ತಾರೆ. ''ದೇವರು ರುಜು ಮಾಡಿದನು ಅದು ಕವಿ ಕಂಡ'' ಕುವೆಂಪುರವರು ದೇವರಿಂದ ರುಜು ಮಾಡಿಸಿ ತಾನು ಕಂಡದ್ದನ್ನು ಕಂಡ ಹಾಗೆ ಹೇಳುತ್ತಾರೆ. ಅವರ ವಿಶ್ವಮಾನವ ಸಂದೇಶ ಇವತ್ತು ವಿಶ್ವಕ್ಕೆ ಬೇಕಾಗಿದೆ. ಆದರಲ್ಲೂ ನಮ್ಮ ದೇಶದಲ್ಲಿ ಕುಲ ಧರ್ಮಗಳ ಮೂಲಕ ನಮ್ಮ ದೇಶ ವಿಭಜನೆಯ

ಹಾದಿಗೆ ಹೋಗುವ ಸಂದರ್ಭದಲ್ಲಿ ಇವತ್ತು ವಿಶ್ವಮಾನವ ಸಂದೇಶ ಬಹಳ ಮುಖ್ಯವಾದುದು. ಮಗು ಹುಟ್ಟುವಾಗ ವಿಶ್ವಮಾನವನಾಗಿ ಹುಟ್ಟುತ್ತಾನೆ. ಅವನಿಗೆ ದೇಶ, ಭಾಷೆ, ಕುಲ ಮುಂತಾದ ಬಂಧನಗಳನ್ನಿಟ್ಟು ಅದಕ್ಕೆ ಬದ್ಧನನ್ನಾಗಿ ಮಾಡುತ್ತೇನೆ. ಈ ಬಂಧನಗಳಿಂದ ವಿಮುಕ್ತಿಗೊಳಿಸಿ ಬುದ್ಧನನ್ನಾಗಿ ಮಾಡಬೇಕೆನ್ನುವುದೇ ಈ ವಿಶ್ವಮಾನವ ಸಂದೇಶ. ಇದನ್ನು ಏಕೆ ಹೇಳುತ್ತೇನೆ ಎಂದರೆ ಸುಮಾರು ನಾಲ್ಕು ವರ್ಷಗಳ ಹಿಂದೆ ನಾನು ಕುವೆಂಪುರವರನ್ನು ನೋಡುವುದಕ್ಕೆ ಹೋಗಿದ್ದೆ. ನಾನು ಅವರ ಒಬ್ಬ ನೆಚ್ಚಿನ ಶಿಷ್ಯನ ಮೂಲಕ ನಾನು ಅಲ್ಲಿಗೆ ಹೋದಾಗ, ಅವರು ಏಕಚಿತ್ತದಿಂದ ಅವರ ಪತ್ನಿಯ ಫೋಟೋವನ್ನು ಇಟ್ಟುಕೊಂಡು ನೋಡುತ್ತಿದ್ದರು. ನಾನು ನೋಡಿ ನಮಸ್ಕಾರವೆಂದು ಹೇಳಿದೆ. ಅವರು ಏನು ಮಾತನಾಡದೆ ವಿಶ್ವಮಾನವ ಸಂದೇಶ ಪುಸ್ತಕವನ್ನು ಕೊಟ್ಟು ಇದನ್ನು ಪ್ರಿಂಟ್ ಮಾಡಿ ಎಲ್ಲರಿಗೂ ಹಂಚು ಎಂದು ಹೇಳಿದರು. ಈಗಲೂ ಅದು ನನಗೆ ಜ್ಞಾನಪಕವಿದೆ. ವಿಶ್ವಮಾನವ ಸಂದೇಶಕ್ಕೆ ಅವರು ಅಷ್ಟೊಂದು ಸ್ಪಂದಿಸಿದ್ದರು. ಅದರ ಜೊತೆಗೆ ಜಾತ್ಯಾತೀತದ ಮೇಲೆ ಅವರೇನು ಕಡಿಮೆ ಇರಲಿಲ್ಲ. ಜಾತ್ಯಾತೀತದ ಮೇಲೆ ಅವರು ಹೇಳುತ್ತಾ ನೂರು ಮತಗಳನ್ನು ನೂಕಾಚೆ....

ಅಧ್ಯಕ್ಷರು:- ಮಾನ್ಯ ಸದಸ್ಯರು ಇತ್ತಕಡೆ ಗಮನಹರಿಸಬೇಕು, ಇದು ಎರಡನೆಯ ದಿವಸ ತಮಗೆ ಇನ್ನು ಐದು ವರ್ಷ ಸಮಯವಿದೆ.

ಶ್ರೀ ಕೆ. ಶ್ರೀನಿವಾಸಗೌಡ:- ಮಾನ್ಯ ಅಧ್ಯಕ್ಷರೇ ಹಿರಿಯರು ಜಾಸ್ತಿ ಮಾತನಾಡಲಿಕ್ಕೆ ಹೆಚ್ಚು ಅವಕಾಶ ಕೊಡುತ್ತೀರಿ. ನಾವು ಹೊಸಬರು ನಮಗೆ ಹೆಚ್ಚು ಅದ್ಯತೆಯ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇನ್ನು ಐದು ವರ್ಷ ಈ ಸರ್ಕಾರ ಬದುಕಬೇಕೆಂದು ಹೇಳಿದ್ದೀರಿ. ತಾವು ಈ ರೀತಿ ತೀರ್ಪು ಕೊಡುತ್ತಾ ಇದ್ದೀರಿ.

ಅಧ್ಯಕ್ಷರು:- ನೀವು ಹೇಳಿದ್ದನ್ನು ನಾನು ಹೇಳುತ್ತಿದ್ದೇನೆ. ನಿಮಗೆ ಧೈರ್ಯವಿಲ್ಲದಿದ್ದರೆ ನಾನೇಕೆ ಹೇಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ:- ಮಾನ್ಯ ಅಧ್ಯಕ್ಷರೆ, ಸ್ವಾಮಿ ವಿವೇಕಾನಂದರು ಭಾರತೀಯತೆಯನ್ನು ಎತ್ತಿ ಹಾಡಿದ ಹಾಗೆ, ಕುವೆಂಪುರವರು ಅದೇ ರೀತಿಯಲ್ಲಿ "ಜೈ ಭಾರತ ಮಾತೆಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಎಂದು ಹೇಳಿ ಭಾರತೀಯತೆಯನ್ನು ಎತ್ತಿ ತೋರಿಸುವುದರ ಮೂಲಕ ಕರ್ನಾಟಕವನ್ನು ಅವರು ಮರೆತಿಲ್ಲ. ಈ ಹಿನ್ನಲೆಯಲ್ಲಿ ಮಾನ್ಯ ಕುವೆಂಪುರವರು ಮೇರು ಪರ್ವತದಂತೆ ಮೆರೆದಿದ್ದಾರೆ. 'ಎಲ್ಲಾದರೂ ಇರು ಎಂತಾದರೂ ಇರು ನೀನು ಕನ್ನಡಿಗನಾಗಿರು' ಕನ್ನಡತನವನ್ನು ಮರೆಯದೆ ಕನ್ನಡ ಕನ್ನಡ ಎಂದು ಹೇಳುತ್ತಾ ಬಂದಿದ್ದಾರೆ. ಹಿಂದೆ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಇದ್ದ ದಿವಂಗತ ನಜೀರ್ ಸಾಬ್‌ರವರು ಇವತ್ತು ನಮ್ಮ ಜೊತೆಯಲ್ಲಿಲ್ಲ. ಅವರು ಹಿಂದೆ ಕುವೆಂಪುರವರ ಜೊತೆಯಲ್ಲಿ ಮಾತನಾಡುತ್ತಾ, ಒಂದು ಕಲ್ಲಿನ ಸ್ಮಾರಕವನ್ನು ಕಟ್ಟಿಸುತ್ತೇವೆಂದು ಹೇಳಿದಾಗ, ಪುಟ್ಟಪ್ಪನವರು ಅವುಗಳನ್ನು ಮಾಡುವುದನ್ನು ಬಿಡಿ ಅರಣ್ಯವನ್ನು ಬೆಳೆಸಿ ಎನ್ನುವ ಮಾತನ್ನು ಹೇಳಿದರು. ಈಗ ಮತ್ತೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ. ಅವರ ಪ್ರಕೃತಿಯು ಮತ್ತು ಪರಿಸರವನ್ನು ಕಾಪಾಡತಕ್ಕದ್ದು ಧರ್ಮ ಅದು ನಿಮ್ಮ ಮೇಲಿದೆ. ಈ ಸಂತಾಪಸೂಚಕ ನಿರ್ಣಯದ ಮೇಲೆ ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಅಗಲಿದ ನಾಯಕರುಗಳ ಬಗ್ಗೆ ಶೋಕಸಂತಾಪ

ಶ್ರದ್ಧಾಂಜಲಿಯನ್ನು ಅರ್ಪಿಸುವ ಗೊತ್ತುವಳಿಯನ್ನ್ನು ಸದನದಲ್ಲಿ ಮಂಡಿಸಿದ್ದಾರೆ. ಈಗಾಗಲೆ ಮಾನ್ಯ ಉಪ ಮುಖ್ಯಮಂತ್ರಿಗಳು ಪ್ರಸ್ತಾಪಿಸಿದಂತೆ ನಮ್ಮ ಹಿರಿಯ ಸಹೋದ್ಯೋಗಿಗಳಾಗಿದ್ದ ತಿಮ್ಮೇಗೌಡರು ಮತ್ತು ಅದಕ್ಕಿಂತ ಹೆಚ್ಚಾಗಿ ನಮಗೆ ಚಿರಪರಿಚಿತರಾಗಿದ್ದ ಸಿ.ಜಿ.ಕೆ. ರೆಡ್ಡಿಯವರು ಹೋರಾಟದ ಮುಂಚೂಣಿಯಲ್ಲಿದ್ದರು. ಬರೋಡ ಡೈನಮೆಂಟ್ ಪ್ರಕರಣದ ವಿಷಯವನ್ನು ಮಾನ್ಯ ಜೆ.ಹೆಚ್. ಪಟೇಲರು ಪ್ರಸ್ತಾಪ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಈಗ ಹೇಳುತ್ತಿದ್ದಾರೆ ನಾನು ಅದರಲ್ಲಿ ಭಾಗಿಯಾಗಿದ್ದರಿಂದ ಅದನ್ನು ಪ್ರಸ್ತಾಪ ಮಾಡಲಿಲ್ಲವೆಂದು. ಸಿ.ಜಿ.ಕೆ. ರೆಡ್ಡಿಯವರು ಪತ್ರಕರ್ತರು. ಅವರು ದೈಹಿಕ ಶಕ್ತಿಯನ್ನು ಲೆಕ್ಕಿಸದೆ ಅವರ ಆತ್ಮಶಕ್ತಿ ಎಷ್ಟಿತ್ತು ಎಂಬುದನ್ನು ಒಂದೇ ಒಂದು ಉದಾಹರಣೆ ಕೊಟ್ಟು ನಮ್ಮ ಪಟೇಲರು ಹೇಳಿದರು. ಅಂತಹವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅದಕ್ಕೆ ಈ ಸದನ ಗೌರವ ಸೂಚಿಸುವ ಮೂಲಕ ನಾವು ಅವರನ್ನು ಎಷ್ಟು ಗೌರವಿಸುತ್ತೇವೆನ್ನುವ ಸಂಪ್ರದಾಯವನ್ನು ಹಾಕಿದ್ದೇವೆ. ಮುಖ್ಯಮಂತ್ರಿಗಳು ಕುವೆಂಪುರವರ ಬಗ್ಗೆ ಮಂಡಿಸಿದಂತಹ ನಿರ್ಣಯವನ್ನು ಸಂಪೂರ್ಣವಾಗಿ ಇಡೀ ಸದನ ಒಪ್ಪಿದೆ. ಪ್ರಾಯಶಃ ಈ ಯುಗ ಕಂಡಿರತಕ್ಕ ಅತ್ಯಂತ ಸ್ನೇಹ ಮತ್ತು ಸಜ್ಜನಿಕೆಯ ದಾರ್ಶನಿಕ ಕವಿ. ಆ ದೃಷ್ಟಿಯಿಂದ ದ.ರಾ. ಬೇಂದ್ರೆಯವರೇ ಹೇಳಿದ್ದಾರೆ. ಈ ಜಗದ ಕವಿ ಯುಗದ ಕವಿ ಈತನಿಗೆ ನಮೋ ನಮೋ ಎಂದು ಉತ್ತರ ಕರ್ನಾಟಕ ಭಾಗದಲ್ಲಿ ದ.ರಾ. ಬೇಂದ್ರೆಯವರು ದಕ್ಷಿಣ ಕರ್ನಾಟಕ ಭಾಗದಲ್ಲಿ ಕುವೆಂಪುವರು. ದ.ರಾ. ಬೇಂದ್ರೆಯವರು ದೊಡ್ಡದಾದ ಮಾತನ್ನು ಕುವೆಂಪುರವರ ಬಗ್ಗೆ ಹೇಳಿದ್ದಾರೆ. ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿರತಕ್ಕ ಪ್ರಥಮ ಕವಿ ಕುವೆಂಪುರವರ ಈ ಯುಗದ ಕವಿ ಜಗದ ಕವಿ. ಆದರೆ ಕಾಲದ ಗತಿಯಲ್ಲಿ ಪರಿಸ್ಥಿತಿಗಳು ಎಷ್ಟು ವ್ಯತ್ಯಾಸ ತರುತ್ತವೆಂದರೆ, ಆ ಕಾಲದಲ್ಲಿಯೇ ಸಮಾನತೆಯ ಮಾತನ್ನು ಆಡಿದ್ದಾರೆ. 72ವರ್ಷಗಳ ನಂತರ ಸೋವಿಯಟ್ ರಷ್ಯಾ ಭೂಪಟದಿಂದ ಮರೆಯಾಗಿ ಹೋಗುತ್ತದೆಂದು ಕಂಡಿದ್ದರೆ ಅವರ ಮನಸ್ಸಿಗೆ ಎಷ್ಟು ನೋವಾಗುತ್ತಿತ್ತೋ ಗೊತ್ತಿಲ್ಲ. "ಸೋವಿಯಟ್ ರಷ್ಯಾ ಮತ್ತು ಕೋಗಿಲೆ" ಎನ್ನುವ ಪುಸ್ತಕವನ್ನು ಬರೆದು ಪ್ರಕಟ ಮಾಡಿದರು. ಸ್ವಾತಂತ್ರ್ಯದ ಬಗ್ಗೆ ಎಷ್ಟು ಕಾಳಜಿ ಇಟ್ಟುಕೊಂಡಿದ್ದರು ಎಂದರೆ ಸಮಾನತೆಯನ್ನು ತರಲಾರದ ಸ್ವಾತಂತ್ರ್ಯ ಅದು ಅರ್ಥಹೀನವಾಗಿರುತ್ತದೆನ್ನುವ ಮಾತನ್ನು ಹೇಳುತ್ತಾ ಅವರು ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಅದಕ್ಕಿಂತಲೂ ಹೆಚ್ಚಾಗಿ ನಾವು ಅವರನ್ನು ಸ್ಮರಿಸಬೇಕಾದ್ದು ಅವರ ಶೂದ್ರ ತಪಸ್ವಿ ನಾಟಕ. ಅದರ ಪರಿಕಲ್ಪನೆ ಹೇಗಿದೆ ಅಂದರೆ, ಶೂದ್ರನಾದವನು ವೇದಗಳನ್ನು ಅಧ್ಯಯನ ಮಾಡಲಿಕ್ಕೆ ಅರ್ಹತೆಯಿಲ್ಲವೆಂದು ಕರೆಯತಕ್ಕ ಸಮಾಜದಲ್ಲಿ ತಪಸ್ಸನ್ನು ಮಾಡಿದಾಗ, ಆತನನ್ನು ಸಂಹರಿಸುವಂಥ ಕಳಂಕದ ಹಿನ್ನಲೆ ಶ್ರೀರಾಮನಿಗೆ ಅಂಟಿಕೊಂಡಿದ್ದನು ತೆಗೆದುಹಾಕುವ ರೀತಿಯಲ್ಲಿ 'ಶೂದ್ರ ತಪಸ್ವಿ' ನಾಟಕದಲ್ಲಿ ಶ್ರೀರಾಮನ ಪದತಲದಲ್ಲಿ ತನ್ನ ಬಿಲ್ಲುಬಾಣ ಬತ್ತಳಿಕೆಯನ್ನು ತೆಗೆದಿಡತಕ್ಕಂಥ ರೀತಿಯಲ್ಲಿ ಕಥೆಯನ್ನು ಮಾಡಿರತಕ್ಕಂಥಾದ್ದು. ಹಾಗೆಯೇ ಶಿವನನ್ನು ಆತ ಯೋಚನೆ ಮಾಡತಕ್ಕಂಥಾದ್ದು ಅವನೊಬ್ಬ ಇಡೀ ಜಗವನನು ಗುಡಿಸತಕ್ಕಂಥ ಕಾಯಕಜೀವಿ ಎಂದು ಕೊಂಡು 'ಜಗದ ಜಲಗಾರ ನಾನು' ಎಂದು ಪರಶಿವನ ಮೂಲಕವಾಗಿ ಮಾತನ್ನು ಹೇಳಿಸುವಂಥ ರೀತಿಯಲ್ಲಿ, ನಂತರ ಅವರ ಸ್ಮಶಾನ ಕುರುಕ್ಷೇತ್ರದಲ್ಲಿ ಆ ಛಲಗಾರರಾಗಿರತಕ್ಕಂಥ ಕುರುವಂಶದವರಿಗೆ, ಆ ಒಂದು ವ್ಯಕ್ತಿತ್ವವನ್ನು ಆರೋಪಿಸುವಂಥ ರೀತಿಯಲ್ಲಿ, ಮತ್ತೆ ಎಲ್ಲರೂ ಕೂಡ ಬೇರೆ ಬೇರೆ ದೃಷ್ಟಿಕೋನದಿಂದ ವೀಕ್ಷಿಸಿರತಕ್ಕಂಥ ಮಂಥರೆಯನ್ನು, ಶ್ರೀರಾಮಾಯಣ ದರ್ಶನದಲ್ಲಿ ಅತ್ಯಂತ ಮಾನವೀಯವಾಗಿ ಸೃಷ್ಟಿಸಿರತಕ್ಕಂಥ ಕುವೆಂಪು ಅವರು ಇಡೀ ತಮ್ಮ ಬದುಕಿನ ದೃಷ್ಟಿಕೋನವೇ ವಿಭಿನ್ನವಾಗಿರತಕ್ಕಂಥ ಮಾತನ್ನು ಹೇಳಿ ಅವರು ಯುಗದ ಕವಿ ಮತ್ತು ಜಗದ ಕವಿ ಆಗಲಿಕ್ಕೆ ಸಾಧ್ಯವಿರತಕ್ಕಂಥಾದ್ದು ಅವರ ವಿಶ್ವ ಮನಸ್ಸು ಎನ್ನತಕ್ಕಂಥಾದ್ದು. ಮನುಷ್ಯ ಮತ, ವಿಶ್ವಪಥ ಎನ್ನುವ ಮಾತನ್ನು ಹೇಳುವುದರ

ಜೊತೆಗೆ ಆದಿಕವಿ ಪಂಪ, ಸಂಯುತ್ ಜ್ಞಾನ, ಸಂಯುತ್ ಚಾರಿತ್ರ್ಯ, ಸಂಯುತ್ ದರ್ಶನ ಎನ್ನುವಂಥ ಮಾತುಗಳನ್ನು ಆಡುತ್ತಾರೆ. ಅಂತಹ ಆದಿಪುರಾಣದಲ್ಲಿ ಪ್ರಸ್ತಾಪಿಸಿರತಕ್ಕಂಥ ರೀತಿಯಲ್ಲಿ ಬದುಕನ್ನು ಬದುಕಿರತಕ್ಕಂಥಾದ್ದು. ಅಂತಹ ಒಂದು ಎತ್ತರದಲ್ಲಿ ಬೆಳೆದಿರತಕ್ಕಂಥ ಒಬ್ಬ ವ್ಯಕ್ತಿ. ರಾಮಾಯಣದರ್ಶನದಂಥ ಮೇರುಕೃತಿಯನ್ನು ಬರೆದಿರತಕ್ಕಂಥವು. ಪ್ರಾಯಶಃ ಮಹಾಕಾವ್ಯಗಳ ಯುಗವೇ ಮುಗಿದುಹೋಗಿದೆ. ಎನ್ನುವಂಥ ಸಂದರ್ಭ ಬಂದಾಗ 'ಭಾರತ ಸಿಂಧೂರಶ್ಮಿ' ಬರೆದಿರತಕ್ಕಂಥ ಗೋಕಾಕ್ ಅವರು, ಶ್ರೀ ಭೂಸನೂರುಮಠ ಅವರು ಬರೆದಿರತಕ್ಕಂಥ 'ದಿವ್ಯ ಚೇತನ' ಹಾಗೆಯೇ ಶ್ರೀ ಕುವೆಂಪು ಅವರು ರಾಮಾಯಣದರ್ಶನಂ ಇಂದು ಒಂದು ಮಹಾಕಾವ್ಯಗಳ ದೊಡ್ಡ ಪರಂಪರೆಯನ್ನೇ ಕನ್ನಡನಾಡಿನಲ್ಲಿ ಕೊಟ್ಟುಹೋಗಲಿಕ್ಕೆ ಪ್ರಾರಂಭ ಮಾಡಿರತಕ್ಕಂಥಾದ್ದು. ಇಲ್ಲಿಯವರೆಗೆ ಬಂದಿರತಕ್ಕಂಥ ಎಲ್ಲಾ ಕವಿಗಳು, ಅವರು ತಮ್ಮ ಪೂರ್ವಜರನ್ನು ನೆನಪಿಸಿಕೊಳ್ಳತಕ್ಕಂಥ ಸಂದರ್ಭದಲ್ಲಿ ಅವರು ರಾಘವಾಂಕನನ್ನು, ಹರಿಹರನನ್ನು ನೆನಪು ಮಾಡಿದರೆ ಇವರು ಡಾಂಟೆಯನ್ನು, ವರ್ಡ್ಸ್‌ವರ್ತನನ್ನು, ಮಿಲ್ಟನ್ ಇವರೆಲ್ಲರನ್ನೂ ಅವರ ವಿಚಾರಗಳನ್ನು ನೆನೆಸ್ಕಿ ಸ್ಮರಿಸಿ 'ರಾಮಾಯಣ ದರ್ಶನ'ವನ್ನು ಬರೆದಿರತಕ್ಕಂಥಾದ್ದು ನಾನಲ್ಲ, ನನಗೆ ಅದೇ ಬರೆದುಕೊಂಡು ಹೋಗಿದೆ' ಎನ್ನುವಂಥ ನಿವೀತ ಭಾವವನ್ನು ಇಟ್ಟುಕೊಂಡಿರತಕ್ಕಂಥವರು.

ಹಾಗೆಯೇ ಅವರ ಸಾಮಾನ್ಯ ಮಾಮೂಲಿ ಚಿತ್ರಗಳು ಕೂಡ ಮರೆಯಲಾರದಂಥವು. ಅವರ ಭಾಷೆಯ ಪ್ರಯೋಗವಾಗಲೀ, ಭಾಷೆಯ ಮೇಲೆ ಅವರಿಗಿದ್ದಂಥ ಪ್ರಭುತ್ವ ಮತ್ತು ವಿಷಯ ಗ್ರಹಿಕೆಯಲ್ಲಿ ತೋರಿಸುತ್ತಿದ್ದಂಥ ಕುತೂಹಲ, ಅವು ಅತ್ಯಂತ ಸ್ಮರಣೀಯವಾಗಿರತಕ್ಕಂಥಾದ್ದು. ಪ್ರಾಯಶಃ ಅವರ 'ಮಲೆಯಲ್ಲಿ ಮದುಮಗಳು' ಎನ್ನತಕ್ಕಂಥ ಕೃತಿಯಲ್ಲಿ ಒಬ್ಬ ಶೂದ್ರ ಸಂವೇದನೆ ಬಗ್ಗೆ, ಮಾನ್ಯ ಮಲ್ಲಿಕಾರ್ಜುನ ಅವರು ಪ್ರಥಮವಾಗಿ ಮಾತನಾಡಿದರು. ಅವರು ಒಂದು ನಾಯಿಯನ್ನು ಅಮರವಾಗಿ ಇಡತಕ್ಕಂಥ ಚಿತ್ರವನ್ನು ಮಾಡುತ್ತಾರೆ. 'ನಾಯಿಗುತ್ತಿ' ಎನ್ನತಕ್ಕಂಥಾದ್ದು. ಅಲ್ಲಿ ಪೀತ ಮತ್ತು ಇಂಚಲು ಎನ್ನತಕ್ಕಂಥ ತೋಟದ ಆಳುಗಳು ಅವರಿಬ್ಬರು. ಅವರು ಕಲ್ಲನ್ನೇ ತಲೆದಿಂಬು ಮಾಡಿಕೊಂಡು ಒಂದೇ ಕಂಬಳಿಯನ್ನೇ ಇಬ್ಬರೂ ಹೊದ್ದುಕೊಂಡು ಮಲಗಿಕೊಳ್ಳತಕ್ಕಂಥ ಅವಿಸ್ಮರಣೀಯ ಸ್ನೇಹ ಮತ್ತು ಗಂಡುಹೆಣ್ಣಿನ ಪ್ರೇಮವನ್ನು ಪ್ರಕೃತಿ ಮತ್ತು ಪುರುಷನ ಸಂವಾದದ ಮೂಲಕ ಹೇಳುವ ರೀತಿಯಲ್ಲಿ ಮಲೆಯಲ್ಲಿ ಮದುಮಗಳು ಎನ್ನುವಂಥ ಕೃತಿ ಏನಿದೆ, ಅದು ಅತ್ಯಂತ ಮೌಲ್ಯಯುತವಾಗಿರತಕ್ಕಂಥ ಕೃತಿಯಾಗಿದೆ. 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕಾದಂಬರಿಯಲ್ಲಿ ಹೂವಯ್ಯನ ಪಾತ್ರವೇ ತಾವು ಎನ್ನುವಂಥ ರೀತಿಯಲ್ಲಿ ಅವರ ಎತ್ತರ, ಅವರ ನಿಲುವು, ಅವರ ಗಾಂಭೀರ್ಯ, ಅವರ ಆ ಬಂಡೆ, ಈಗಲೂ ಇರತಕ್ಕಂಥಾದ್ದು. ಇವೆಲ್ಲವನ್ನೂ ಯೋಚನೆ ಮಾಡಿದರೆ, ಪ್ರಾಯಶಃ ಅವರ ಕಾದಂಬರಿಗಳಲ್ಲಿ ಅವರ ಗದ್ಯದಲ್ಲಿ ತೋರಿಸಿರತಕ್ಕಂಥ ಪ್ರಕಾಂಡ ಪಾಂಡಿತ್ಯ ಮತ್ತು ಭಾಷೆಯ ಬಿಗು ಅವರ ಕಾವ್ಯಕ್ಕಿಂತಲೂ ಹೆಚ್ಚಾಗಿ, ಮಿಗಿಲಾಗಿ ಇರತಕ್ಕಂಥಾದ್ದು. ಆ ದೃಷ್ಟಿಕೋನದಿಂದ ಮಾನ್ಯ ಮುಖ್ಯಮಂತ್ರಿಗಳು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಕವಿಶೈಲವನ್ನು ಬೆಳೆಸುತ್ತೇವೆ. ಎನ್ನತಕ್ಕಂಥಾದ್ದು. ಅಲ್ಲಿ ಸುತ್ತಮುತ್ತಲೂ ಇರತಕ್ಕಂಥ ಜೈವಿಕ ಅರಣ್ಯ ಪ್ರದೇಶ ಏನಿದೆ, ಅದನ್ನು 'ಜೈವಿಕ ಅರಣ್ಯ'ವನ್ನಾಗಿ ಮಾಡಿ ಅದು 'ಬಯೋಫಾರೆಸ್ಟ್‌ರಿ' ಎನ್ನತಕ್ಕಂಥ ರೀತಿಯಲ್ಲಿ ಯೋಚನೆ ಮಾಡಿ, ಅದಕ್ಕೆ ಸರಿಯಾದಂಥ ಒಂದು ವ್ಯವಸ್ಥೆ ಮಾಡಿದರೆ, ಅದು ಒಂದು ಅವಿಸ್ಮರಣೀಯವಾಗಿರತಕ್ಕಂಥ ಘಟನೆಯಾಗಿರುತ್ತದೆ. ಅವರು ಅಂತಹ ಕೃತಿಗಳನ್ನು ಬರೆದಿರತಕ್ಕಂಥ ಸಂದರ್ಭದಲ್ಲೂ ಕೂಡ 'ಬೀಸ ಗಲ್ ಪ್ರಸಂಗ' ಅಂತ ಕರೆಯುತ್ತಾರೆ. ಬೈಸಿಕಲ್ ಅನ್ನು ಬೀಸಕಲ್ ಎಂದು ಆಗ ಉಪಯೋಗಿಸುತ್ತಿದ್ದರು, ಅಲ್ಲಿ ಬಂದಂಥ ಪಾತ್ರ ಬೈಸಿಕಲ್ ಮೇಲೆ ಮಾಡುವ ಕಸರತ್ತುಗಳನ್ನು ವರ್ಣಿಸಿರತಕ್ಕಂಥಾದ್ದು. ಇವೆಲ್ಲವನ್ನೂ ನೋಡಿದರೆ ಆ ಕವಿಹೃದಯ, ಸಣ್ಣಸಣ್ಣ ಘಟನಾವಳಿಗಳನ್ನೂ ಕೂಡ ಗುರುತಿಸುವಂಥ ರೀತಿಯಲ್ಲಿ ತಮ್ಮ ಸೂಕ್ಷ್ಮ ಗ್ರಹಿಕೆಯನ್ನು

ತೋರಿಸುತ್ತಿದ್ದರು. ಮತ್ತು ಅಷ್ಟೆ ತದ್ವಿರುದ್ಧವಾದಂಥ ಪ್ರಭಾವ ಅವರಿಗೆ ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದ ಬಗ್ಗೆ ಇರತಕ್ಕಂಥಾದ್ದು. ಆದರೆ ಈ ಪ್ರಭಾವದಿಂದಾಗಿ ಅವರು ಈ ಸಮಾಜದಿಂದ ಏನೂ ದೂರ ಇರತಕ್ಕಂಥವು ಆಗಿರಲಿಲ್ಲ. ಇಂತಹ ಒಬ್ಬ ವ್ಯಕ್ತಿ ಅವರು ಬರೆದಿರತಕ್ಕಂಥ ಕೆಲವು ಕವನಗಳನ್ನು ಇಲ್ಲಿ ಹೇಳಿದರೂ ಕೂಡ, ಎಷ್ಟು ಪ್ರಸಕ್ತವಾಗಿರುತ್ತದೆ ಎಂದರೆ 'ಗುಡಿಚರ್ಚು ಮಸೀದಿಗಳನ್ನು ಬಿಟ್ಟು ಹೊರಬನ್ನಿ ಬಡತನವ ಬುಡಮುಟ್ಟಿ ಕೀಳಬನ್ನಿ, ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ, ವಿಜ್ಞಾನ ದೀವಿಗೆಯ ಹಿಡಿಯಬನ್ನಿ' ಓ ಬನ್ನಿ ಸೋದರರೇ, ಬೇಗಬನ್ನಿ' ಅನ್ನುವಂಥ ಮಾತಿನಲ್ಲಿ, ವಿಜ್ಞಾನದ ಮೂಲಕವಾಗಿ ಬಡತನದ ವಿರುದ್ಧವಾಗಿ ಹೋರಾಡುವುದರ ಮೂಲಕವಾಗಿ ಸಮಾನತೆಯ, ಸಮೃದ್ಧಿಯ ಸಮಾಜವನ್ನು ಕಟ್ಟಲಿಕ್ಕೆ ಸಾಧ್ಯವಾಗುತ್ತದೆ ಎನ್ನುವಂಥ ಮಾತನ್ನು ಅವರು ಆ ಕಾಲಕ್ಕೇ ಹೇಳಿದ್ದರು. ಅಂದರೆ ರೊಮ್ಯಾಂಟಿಕ್ ಕವಿ ಎಂದು ನವ್ಯರು ಅವರನ್ನು ಟೀಕಿಸಿದ್ದರು. ಅನೇಕರು ಈ ತಲೆಮಾರಿನ ಕಣ್ಣು ತೆರೆಸಿದವರು ಗೋಪಾಲಕೃಷ್ಣ ಅಡಿಗರು ಅಂತ ಹೇಳಿದರೂ ಕೂಡ, ಅವರದ್ದು ಅಂತಹ ರೊಮ್ಯಾಂಟಿಕ್ ಕಾವ್ಯ ಎಂದು ಕಂಡುಬಂದರು ಕೂಡ ಪ್ರಾಯಶಃ ಇವತ್ತಿಗೂ ಕೂಡ ರೋಮಾಂಚನವನ್ನು ಉಂಟುಮಾಡುವಂಥ ರೀತಿಯಲ್ಲಿ ಬರೆದಿರತಕ್ಕಂಥಾದ್ದು ಹೀಗಿದೆ:

''ಯಾವ ಕಾಲದ ಶಾಸ್ತ್ರ, ಏನು ಹೇಳಿದರೇನು<br>
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹದೇನು<br>
ಎಂದೋ ಮನು ಬರೆದಿಟ್ಟ ಎಂದೊಡನೆ ಕಟ್ಟೇನು<br>
ನಿನ್ನೆದೆಯ ದನಿಯ ಋಷಿ ಮನು ನಿನಗೆ ನೀನು''

**3.25 ಪಿ.ಎಂ.**

ಮನುಕುಲದ ಮಾತನ್ನು, ಮಾತನಾಡತಕ್ಕ ಅನೇಕ ಜನರು ಈ ಕಾಲದಲ್ಲಿರುವಾಗ ಅದರ ಮೂಲಕ ಯಾವಯಾವುದೋ ಲಾಭವನ್ನು ಪಡೆಯಬೇಕೆಂದು ಪ್ರಯತ್ನಿಸಿದಂಥ ಕಾಲದಲ್ಲಿ, ನಿನಗೆ ನೀನೇ ಮನು ಎನ್ನುವಂಥ ಮಾತನ್ನು ಹೇಳಿದರೆ, ಅದು ನಮಗೆ ಕಟ್ಟುಪಾಡಲ್ಲ ಎನ್ನುವಂಥ ಸ್ವಚ್ಛಂದದ ಬದುಕನ್ನು ಬದುಕಬೇಕೆಂಬ ಮಾತನ್ನು ಹೇಳುವುದಿಲ್ಲ. ಆದರೆ, ಸಮಾನತೆಯ ಸ್ವಾತಂತ್ರ್ಯವನ್ನು ಪಡೆಯಬೇಕೆಂಬ ತವಕ ಎಲ್ಲರಿಗೂ ತುಂಬಿ ನಿಂತಿರತಕ್ಕಂಥಾದ್ದು. ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪಿಸುವುದಕ್ಕಿಂತಲೂ ಹೆಚ್ಚಾಗಿ, ಅವರ ನೇಗಿಲಯೋಗಿ, ವಿಶ್ವಮಾನವ ಗೀತೆ ಏನಿದೆ, ''ನೇಗಿಲ ಮನೆಯಲ್ಲಿ ಅಡಗಿದೆ ಧರ್ಮ'' ಎನ್ನುವಂತಾದ್ದು. ಧರ್ಮ ಎಲ್ಲಿ ಅಡಗಿದೆ ಎಂದು ಹೇಳಿದರೆ, ನೇಗಿಲ ಮನೆಯಲಿ ಅಡಗಿದೆ ಎನ್ನತಕ್ಕಂಥ ಮಾತು. ಆ ಕವಿ ಹೃದಯ ಇಡೀ ಬದುಕಿಗೆ ಹತ್ತಿರವಾಗಿರತಕ್ಕಂಥ ರೀತಿಯಲ್ಲಿ ನೋಡಿರತಕ್ಕಂತಾದ್ದು. ಅವರ ಅನೇಕ ಕೃತಿಗಳಲ್ಲಿ ಹೇಳಿದ್ದಾರೆ. ವಿಶ್ವಮಾನವ ಗೀತೆಯಲ್ಲಿ, ''ನೂರು ಮತದ ಹೊಟ್ಟು ತೂರಿ,

ಎಲ್ಲ ತತ್ವದೆಲ್ಲೆ ಮೀರಿ, ನಿರ್ಜಗಂತವಾಗಿ ಏರಿ,<br>
ಓ ನನ್ನ ಚೇತನ, ಆಗು ನೀ ಅನಿಕೇತನ''

ಎಂಬ ಮಾತು ಹೇಳುತ್ತಾರೆ. ಆದ್ದರಿಂದ ಅವರ ಆತ್ಮ ಏನಿದೆ, ಅದು ವಿಶ್ವಾತ್ಮನದಲ್ಲಿ ಸೇರಿರತಕ್ಕಂತಾದ್ದು; ಅಲ್ಲಿ ಲೀನವಾಗಿದೆ. ಆದ್ದರಿಂದ, ಅವರಿಗಾಗಿ ಚಿರಶಾಂತಿಯನ್ನು ಕೋರುತ್ತೇವೆ ಎನ್ನುವಂಥ ಮಾತನ್ನು ಕೂಡ ಪ್ರಾಯಶಃ ಅವರು ಬದುಕಿದ್ದರೆ ಒಪ್ಪುತ್ತಲೇ ಇರಲಿಲ್ಲ. ನಮಗೆ ಈ ವಿಚಾರಗಳು ಬೇಕಾಗಿದೆ. ಅವರು ಇಂತಹ ವಿಚಾರವನ್ನು ದೂರೀಕರಿಸತಕ್ಕಂಥವರು. ಪ್ರಾಯಶಃ ಅಂತಹ ಒಬ್ಬ ರಸಋಷಿಯನ್ನು ನಾವು ಕಳೆದುಕೊಂಡಿದ್ದೇವೆ. ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದ ಸಂದರ್ಭದಲ್ಲಿ ಅವರಿಗೆ ನೋಬಲ್ ಪ್ರಶಸ್ತಿ ಸಿಗಬೇಕೆಂಬ ಬಯಕೆ ನಮ್ಮೆಲ್ಲರದಾಗಿತ್ತು. ಇರುವಿನ್

ವ್ಯಾಲೀಸ್‌ರವರ ಪ್ರೈಸ್ ಎನ್ನುವಂಥ ಪುಸ್ತಕವನ್ನು ಓದಿದರೆ, ಇಡೀ ವ್ಯವಸ್ಥೆಯಲ್ಲಿ, ಅದು ಜಾಗತಿಕ ವ್ಯವಸ್ಥೆಯಾಗಿರಬಹುದು ಅಥವಾ ಬೇರೆ ಆಗಿರಬಹುದು. ಅಲ್ಲಿ ಯಾವುದಾದರೂ ಬಹುಮಾನವನ್ನು ಅಥವಾ ಪುರಸ್ಕಾರವನ್ನು ಕೊಡುವಂಥ ಸಂದರ್ಭದಲ್ಲಿ ಕೂಡ ಯಾವ ರೀತಿಯ ಪಿತೂರಿ ಮತ್ತು ಪ್ರಚಾರಗಳು ನಡೆಯುತ್ತದೆ ಎನ್ನತಕ್ಕಂಥಾದ್ದು ಕಂಡುಬಂದರೆ,ಪ್ರಾಯಶಃ ಅಂತಹ ಪ್ರಚಾರಗಳು ನಡೆಯದೇ ಇದ್ದುದರಿಂದಲೇ ಮತ್ತು ಕನ್ನಡ ನಾಡಿನಲ್ಲಿ ಹುಟ್ಟಿದ ಒಬ್ಬ ಕವಿ ಎನ್ನುವಂಥ ಒಂದೇ ಕಾರಣಕ್ಕಾಗಿ ಅವರಿಗೆ ಸಲ್ಲಬೇಕಾದ ಗೌರವ ಸಲ್ಲಲಿಲ್ಲ ಮತ್ತು ದಕ್ಷಿಣ ಆಫ್ರಿಕಾದ ಬೇರೆ ಬೇರೆ ಕವಿಗಳು ನೋಬಲ್ ಬಹುಮಾನವನ್ನು ಪಡೆದಿರತಕ್ಕಂಥ ಸಂದರ್ಭದಲ್ಲಿ, ಕುವೆಂಪುರವರ ಕಾದಂಬರಿ ಅಥವಾ ಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನ ಮಾಡಿದರೆ, ಪ್ರಾಯಶಃ ಅದರಿಂದ ವಂಚಿತವಾಗಲಿಕ್ಕೆ ಪಿತೂರಿಗಳೂ ಕೂಡ ಕಾರಣವೆಂಬ ಮಾತನ್ನು ಹೇಳಬಹುದು. ಮತ್ತೆ ಇದನ್ನು ಭಾಷಾಂತರಿಸಬೇಕೆಂಬ ಮಾತನ್ನು ಹೇಳಿದರು. ಪ್ರಾಯಶಃ ನಮ್ಮ ಮುಖ್ಯಮಂತ್ರಿಗಳಿಗೆ ನೆನಪಿದೆಯೋ ಇಲ್ಲವೋ ಗೊತ್ತಿಲ್ಲ. ಅವರು ಲೋಕೋಪಯೋಗಿ ಸಚಿವರಾಗಿದ್ದಾಗ, ನಮ್ಮವರೇ ಆದಂಥ ಶ್ರೀಮಾನ್ ನಾರಾಯಣ್‌ರವರು "ಮಲೆಗಳಲ್ಲಿ ಮದುಮಗಳು" ಎನ್ನುವಂತಾದ್ದನ್ನು "ಪಹಡಿ ಕನ್ಯೆ" ಎನ್ನುವಂಥ ಕಾದಂಬರಿಗೆ ಹಿಂದಿ ಮತತು ಬೇರೆ ಬೇರೆ ಪ್ರಚಾರ ಮಾಧ್ಯಮಗಳಲ್ಲಿ ಹೆಚ್ಚು, ವ್ಯಾಪಾಕವಾದ ಪ್ರಚಾರ ಸಿಕ್ಕಿತು. ಆದರೆ, ಇವರಿಗೆ ನೋಬಲ್ ಬಹುಮಾನ ಸಿಗಲಿಲ್ಲ ಎಂಬ ಕೊರಗು ನಮಗಿದೆ. ಪ್ರಾಯಶಃ ಈ ಕೊರಗು ಅವರಿಗಿರಲಿಲ್ಲ. ಆದರೆ, ಅವರ ದಿಸೆಯಲ್ಲಿ, ಅವರ ಪ್ರಭಾವಿ ವಲಯದಲ್ಲಿ ಇದ್ದಂಥ ಪೂರ್ಣಚಂದ್ರ ತೇಜಸ್ವಿಯವರು ಬಹಳ ವಿಭಿನ್ನವಾಗಿರತಕ್ಕ ಯೋಚನೆಯನ್ನು ಮಾಡಿದವರು. ಅವರ ಕತೆಗಳಾಗಲೀ ಅಥವಾ ಸಮಾನ್ಯ ಗೃಹ ವಿಜ್ಞಾನಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಹೇಳುವುದಾಗಲೀ, ಕನ್ನಡ ನಾಡಿನ ಹಕ್ಕಿ, ಪಕ್ಷಿ ಇವುಗಳ ವಿಚಾರ ಬರೆಯುವುದಾದರೂ ಕೂಡ, ಇಡೀ ಕುವೆಂಪುರವರ ಪ್ರಭಾವ ಅವರ ಮೇಲೆ ಎಷ್ಟಿತ್ತು ಎಂದು ಕಂಡುಬರುತ್ತದೆ. ಈ ಸಾಹಿತ್ಯವನ್ನು ಇದಕ್ಕಿಂತಲೂ ಹೆಚ್ಚಾಗಿ ಮನುಕುಲದ ಒಳಿತಿಗಾಗಿ ಯೋಚನೆ ಮಾಡಿದಂಥ ಒಬ್ಬ ರಸಋಷಿ; ಪ್ರಸ್ತುತವಾಗಿರತಕ್ಕಂಥವು. ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ವೈಚಾರಿಕವಾಗಿ ಅತ್ಯಂತ ಪ್ರಬುದ್ಧರಾದಂಥ, ಪ್ರತಿಭಾನ್ವಿತರಾಗಿರತಕ್ಕಂಥ ಈ ಕವಿ ವಿಶ್ವಕ್ಕೆ ಸಂಬಂಧಿಸತಕ್ಕಂಥವರು. ಅವರ ಪಂಚಸೂತ್ರಗಳು, ಸಪ್ತಸೂತ್ರಗಳು ಇವೆಲ್ಲವನ್ನೂ ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂಬ ಮಾತನ್ನು ಹೇಳಿ ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಇವರೆಲ್ಲರ ಜೊತೆ ಸಮಾಲೋಚಿಸಿ, ಕುವೆಂಪು ವಿಶ್ವವಿದ್ಯಾನಿಲಯ ಈಗಾಗಲೇ ಇದೆ. ಅದನ್ನು ಜವಹರಲಾಲ್ ನೆಹರು ಯೂನಿವರ್ಸಿಟಿ ರೀತಿಯಲ್ಲಿ ಮಾಡತಕ್ಕಂಥಾದ್ದು ಬಹಳ ಅರ್ಥಪೂರ್ಣವಾಗಿರತಕ್ಕಂತಾದ್ದು. ಒಂದು ದುರಂತ ಸಂಗತಿ ಎಂದರೆ, ಶೈಕ್ಷಣಿಕ ವಿಭಾಗಕ್ಕೆ ನಾವೆಷ್ಟು ಹಣ ಕೊಡಬೇಕಾಗಿತ್ತೋ ಅಷ್ಟು ಹಣವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಕುವೆಂಪು ವಿಶ್ವವಿದ್ಯಾನಿಲಯ, ಅದು ಪಡೆಯಬೇಕಾದಂಥ ಪ್ರಗತಿಯನ್ನು ಈಗ ಹಣಕಾಸಿನ ಮುಗ್ಗಟ್ಟಿನಿಂದ ಪಡೆಯಲಿಕ್ಕಾಗುತ್ತಾ ಇಲ್ಲ. ಅದಕ್ಕೆ ಹೆಚ್ಚು ಹಣಕಾಸನ್ನು ಕೊಡುವುದರ ಮೂಲಕವಾಗಿ, ಅದೊಂದು ಅತ್ಯಂತ ಅರ್ಥಪೂರ್ಣವಾದಂಥ ಮತ್ತು ಅವರ ಇಡೀ ಚಿಂತನೆಗೆ ಅನುಗುಣವಾದ ರೀತಿಯಲ್ಲಿ ಒಂದು ಹೊಸ ವ್ಯಕ್ತಿತ್ವವನ್ನು ರೂಪಿಕೊಳ್ಳುವುದಕ್ಕೆ ಸಾಧ್ಯವಾಗುವಂತಹ ಶೈಕ್ಷಣಿಕ ನೀತಿಯನ್ನು ರಚನೆ ಮಾಡುವಂತಾದ್ದು ಬಹಳ ಮುಖ್ಯವಾದಂತಾದ್ದು.

ಎರಡನೆಯದು ಬಹಳ ಮುಖ್ಯವಾಗಿರತಕ್ಕಂತಾದ್ದು, ಬೊಮ್ಮನಹಳ್ಳಿಯ ಕಿಂದರಿಜೋಗಿ ಎಂಬ ಅವರು ಬರೆದಿರುವ ನೀಳ್ಗವನಕ್ಕೆ, ಆ ಕಾಲದಲ್ಲಿ ಯುವಕರಾಗಿದ್ದಂಥ ಆರ್.ಕೆ. ಲಕ್ಷ್ಮಣ್‌ರವರು ವ್ಯಂಗ್ಯ ಚಿತ್ರವನ್ನು ಬರೆದಿದ್ದಾರೆ. ಇತ್ತೀಚೆಗೆ ಈ ವಾರದ ಪತ್ರಿಕೆಯಲ್ಲೂ ಕೂಡ ಪ್ರಕಟಿಸಿದ್ದಾರೆ. ಈಗಾಗಲೇ ಇದರ ಬಗ್ಗೆ ಪ್ರಕಟಣೆ ಮಾಡಿದ್ದಾರೆ, ಬಹಳ ಸುಲಭ ಬೆಲೆಯಲ್ಲಿ ಅದನ್ನು ಪ್ರಕಟಣೆ ಮಾಡುತ್ತೇವೆಂದು ಹೇಳಿದ್ದಾರೆ. ಅದರ ಇಡೀ ಜವಾಬ್ದಾರಿಯನ್ನು ಪೂರ್ಣಚಂದ್ರ ತೇಜಸ್ವಿಯವರ ಕಡೆಗೆ ಕೊಟ್ಟರೆ, ಹೆಚ್ಚು

ಸೌಂದರ್ಯಪೂರ್ಣವಾಗಿ ಹೊರಹೊಮ್ಮುವುದಕ್ಕೆ ಸಾಧ್ಯತೆಯಾಗುತ್ತದೆ ಎನ್ನುವಂಥ ಮಾತನ್ನು ಹೇಳಿ, ಶ್ರದ್ಧಾಂಜಲಿಯನ್ನು ಅರ್ಪಿಸುವ ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಸನ್ಮಾನ್ಯರೇ, ಮಾನ್ಯ ಕುವೆಂಪುರವರಿಗೆ ಒಮ್ಮೆ ಸ್ವರ್ಗಕ್ಕೆ ಹೋಗಬೇಕೆಂಬ ಆಸೆ ಮೂಡಿತು. ದಾರಿ ಹುಡುಕುತ್ತಾ ಹೋದಾಗ ಅವರಿಗೆ ಸ್ವರ್ಗ ಸಿಗಲಿಲ್ಲ. ಮಧ್ಯದಲ್ಲಿ ಒಂದು ಬೋರ್ಡ್ ಇತ್ತು, ನರಕಕ್ಕೆ ದಾರಿ ಎಂದು ಕನ್ನಡದಲ್ಲಿ ಬೋರ್ಡ್ ಇತ್ತು. ಕುವೆಂಪುರವರು ಹೇಳುತ್ತಾರೆ ನಾಮಫಲಕ ಕನ್ನಡದಲ್ಲಿದೆ. ನರಕ ಆದರೆ ಏನು ನಾನು ಅಲ್ಲಿಗೆ ಹೋಗುತ್ತೇನೆ ಅಂತ. ಇದರ ಅರ್ಥ ಕನ್ನಡದ ಬಗ್ಗೆ ಅವರಿಗೆ ಇದ್ದಂತಹ ಒಂದು ವಾತ್ಸಲ್ಯ ಮತ್ತು ಮೂಢನಂಬಿಕೆ ಸ್ವರ್ಗ ಮತ್ತು ನರಕ ಎನ್ನುವ ಒಂದು ಪರಿಕಲ್ಪನೆ ಏನು ಇದೆ ನಮ್ಮನ್ನು ಸದಾಕಾಲ ಕಾಡತಕ್ಕಂಥಾದ್ದು ಕರ್ಮ ಥಿಯರಿಯಿಂದ ಕಾಡತಕ್ಕಂಥಾದ್ದು ಅದರ ವಿರುದ್ಧ ಇಡೀ ವಿಶ್ವದಾದ್ಯಂತ ಜನರನ್ನು ಎಚ್ಚರಗೊಳಿಸತಕ್ಕಂಥ ಒಂದು ಪ್ರಯತ್ನ. ಅಂತಹ ಒಂದು ಶಕ್ತಿ ನಮ್ಮಿಂದ ದೂರ ಆಗಿದೆ. ಎಲ್ಲಾ ಸದಸ್ಯರುಗಳು ಕೂಡ ಬಹಳ ಉಪಯುಕ್ತವಾದ ಸಲಹೆಗಳನ್ನು ಮತ್ತು ಅಂತರಾಳದಿಂದ ತಮ್ಮ ನೋವನ್ನು ವ್ಯಕ್ತ ಮಾಡಿದ್ದೀರಿ. ನಿಧನ ಹೊಂದಿದ ಎಲ್ಲಾ ದಿವಂಗತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಕೂಡ ಎದ್ದು ನಿಂತು ಒಂದು ನಿಮಿಷ ಮೌನ ಸೂಚಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಸದನದ ಸದಸ್ಯರೆಲ್ಲರೂ ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನ ಸೂಚಿಸಿದರು)

ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ದಿವಂಗತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ನಮ್ಮನ್ನೆಲ್ಲ ಅಗಲಿ ಹೋದ ರಾಷ್ಟ್ರಕವಿ ಕುವೆಂಪು ಹಾಗೂ ಇನ್ನಿತರ ಗಣ್ಯವಕ್ತಿಗಳ ಗೌರವಾರ್ಥವಾಗಿ ಇಂದಿನ ಸಭೆಯ ಕಾರ್ಯಕಲಾಪಗಳನ್ನು ಮುಂದೂಡಲಾಗಿದೆ. ಪುನಃ ನಾಳೆ ಬೆಳಗ್ಗೆ 11-00 ಗಂಟೆಗೆ ಸಭೆ ಸೇರಲಿದೆ.

(ಸದನವು ಮಧ್ಯಾಹ್ನ 3-35 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 29ನೇ ಡಿಸೆಂಬರ್ 1994ರ ಗುರುವಾರ ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.